ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 51-52 ಡಿಸೆಂಬರ್ 26, 2004 ಬೆಲೆ ರೂ. 3.00

18ನೇ ಸಿಪಿಐ(ಎಂ) ಅಧಿವೇಶನದತ್ತ....



ಪ್ರಸಕ್ತ ಸನ್ನಿವೇಶ ಮತ್ತು ಸವಾಲುಗಳು





ಬಾಬಾಬುಡನ್‌ಗಿರಿ : ವಿಕೃತಿ ಸರಿಪಡಿಸುವ ಒಂದು ಯತ್ನ

ಯರಡೋಣ : ಪಾಳೇಗಾರಿ ವಿಕೃತಿ ಯುವತಿಯ ಮೇಲೆ ಅಮಾನುಷ ದೌರ್ಜನ್ಯ



ಏಶಿಯನ್ ಶೃಂಗಸಭೆಯಲ್ಲಿ ಭಾರತ

- ಪೋರ್ಚುಗೀಸ್: ಮಹಾನ್ ಕ್ರಾಂತಿಕಾರಿ ಸಾಧ್ಯತೆಗಳ ಪರ್ವ
- ಕೋಮುವಾದ - ಪ್ರಾಯೋಗಿಕ ಕಾರ್ಯಾಗಾರ
- ವಿಶ್ವ ಪಂಜಾಬಿ ಸಮ್ಮೇಳನ

ಲೈವ್ ಬ್ಯಾಂಡ್ ನಿಲ್ಲಿಸಬಾರದೇಕೆ ?

ಹಿಂದುತ್ವದ ರಾಜಕೀಯ

ಉಳ್ಳವರ ಅಧಿಕಾರ ರಕ್ಷಿಸುವ ರಾಜಕೀಯ

ಮಂಗಳೂರಿನಲ್ಲಿ ಮಾನವತಾ ವೇದಿಕೆಯಿಂದ ನವೆಂಬರ್ 27,28 ರಂದು ಎರಡು ದಿನಗಳ ಪ್ರಾಯೋಗಿಕ ಸೆಕ್ಯೂಲಾರಿಸಂ ಕಾರ್ಯಾಗಾರ ನಡೆಯಿತು. ಸಂಘಪರಿವಾರದ ಸಂಘಟನೆಗಳ ಅಬ್ಬರದ ಕ್ರಿಮಿನಲ್ ಚಟುವಟಿಕೆ, ಭೀತಿಯ ವಾತಾವರಣ ಹಾಗೂ ನಿರಂತರ ಅಪಪ್ರಚಾರಗಳ ಎದುರು ಶಾಂತಿ, ಪ್ರಜಾಪ್ರಭುತ್ವ ಮತ್ತು ಸೌಹಾರ್ದತೆ ಬಯಸುವ ಜನ ಸಾಮಾನ್ಯರು ದಿನನಿತ್ಯ ಎದುರಿಸುವ ಸವಾಲುಗಳಿಗೆ ವಸ್ತುನಿಷ್ಠ ನೆಲೆಯಲ್ಲಿ ಉತ್ತರ ಕಂಡುಹಿಡಿದು ದಾಖಲೆಯೊಂದನ್ನು ಹೊರತರುವ ಉದ್ದೇಶದಿಂದ ಆರು ಕಮಿಷನ್‌ಗಳ ರೂಪದಲ್ಲಿ ಶಿಬಿರ ಯಶಸ್ವಿಯಾಗಿ ನಡೆಯಿತು.

‘ಹಿಂದುತ್ವ ಕೋಮುವಾದವು ಕೇವಲ ಅಲ್ಪಸಂಖ್ಯಾತ ಸಮುದಾಯದ ಮೇಲೆ ದಾಳಿ ಮಾಡುತ್ತಿಲ್ಲ. ಅವು ಪ್ರಜಾಪ್ರಭುತ್ವ ಮೌಲ್ಯಗಳನ್ನೇ ಒಡೆದು ಹಾಕಲು ಪ್ರಯತ್ನಿಸುತ್ತಿವೆ. ಇದು ನಿಜಕ್ಕೂ ಅಪಾಯಕಾರಿ. ಸ್ವಾತಂತ್ರ್ಯ ಪೂರ್ವದಿಂದಲೇ ನಮ್ಮ ದೇಶದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ ನಡೆದಾಗಲೆಲ್ಲಾ ಹಿಂದೂವಾದಿಗಳು ಅದರ ವಿರುದ್ಧವಾಗಿ ಕಾರ್ಯಾಚರಿಸಿದ್ದಾರೆ’ ಎಂದು ವಿಮರ್ಶಕ ಕೆ.ಫಣಿರಾಜ್ ಕಾರ್ಯಾಗಾರವನ್ನು ಉದ್ಘಾಟಿಸಿ ಭಾಷಣ ಮಾಡುತ್ತಿದ್ದರು.

ಕಂಚಿ ಕಾಮಕೋಟಿಯ ಸ್ವಾಮಿ ಬಂಧನದ ವಿಷಯದಲ್ಲಿ ಹಿಂದೂ ಧರ್ಮಕ್ಕೆ ಅಪಚಾರವಾಗಿದೆಯೆಂದು ಕೂಗೆಬ್ಬಿಸುತ್ತಿರುವ ಹಿಂದೂವಾದಿಗಳಿಗೆ ಮಹಾಹಠವಾದಿ ಬ್ರಾಹ್ಮಣ ಶಂಕರರಾಮನೆಂಬ ಒಬ್ಬ ಹಿಂದೂ, ದೇವಾಲಯದ ಅಂಗಳದಲ್ಲೇ ಕೊಲೆಯಾಗಿರುವುದು ಅಪಚಾರವಾಗಿ ಕಾಣುವುದಿಲ್ಲ. ಹಿಂದೂಗಳಿಗೆ ಕಾನೂನು ಬೇರೆ ಎಂಬಂತೆ ವರ್ತಿಸುವ ವಿ.ಎಚ್.ಪಿ., ಸಂಘ ಪರಿವಾರಗಳಿಗೆ ಪ್ರಜಾಪ್ರಭುತ್ವ ಮೌಲ್ಯ, ನ್ಯಾಯ, ನೈತಿಕತೆಯಾಗಲಿ ಬೇಕಾಗಿಲ್ಲ. ಸುಲಿಗೆ, ವ್ಯಭಿಚಾರ ವಿಷಯಗಳಲ್ಲಿ ಮಠಾಧೀಶರಿಗೆ ವಿನಾಯತಿ ಬೇಕೆನ್ನುವ ಇವರು ಉಳ್ಳವರನ್ನು ರಕ್ಷಿಸುವ ವ್ಯವಸ್ಥೆ ತರಲು ಬಯಸುತ್ತಾರೆ. ‘ಜಯೇಂದ್ರ ಸರಸ್ವತಿಯವರನ್ನು ರಕ್ಷಿಸಿ’ ಎಂದು ಪ್ರಲಾಪಿಸುವ ಮಾಜೀ ಪ್ರಧಾನಿಗಳ ಬಗ್ಗೆ ಅಸಹ್ಯ ಮತ್ತು ಭಯ ಹುಟ್ಟುತ್ತದೆ. ಶಂಕರರಾಮನ್‌ಗೆ ಆದ ಗತಿ ನಾಳೆ ಮಂಗಳೂರು, ಉಡುಪಿಯಲ್ಲೂ ಆಗಬಹುದು. ಮತ ದ್ವೇಷಗಳಿಗೆ ಭಾರತದಲ್ಲಿ ದೊಡ್ಡ ಇತಿಹಾಸವೇ ಇದೆ. ದ್ವೈತ ಅದ್ವೈತಗಳ ಹೊಡೆದಾಟ ಜನಜನಿತ.

ಆಯೋಗಗಳ ಸ್ವರೂಪ

1. ಕೋಮುವಾದಿ ಸಂಘಟನೆಗಳ ಸ್ವರೂಪ ಮತ್ತು ಕೋಮು ಸಂಘರ್ಷ ನಡೆಸುವುದೇ ಅವರು ಮಾಡುವ ಸಿದ್ಧತೆಗಳು
2. ಕೋಮು ಗಲಭೆ ಪ್ರಾರಂಭವಾಗುವ ಲಕ್ಷಣಗಳು ಯಾವುದು? ಅದು ಮುಂದುವರಿಯಲು ಅವರುಗಳು ಬಳಸುವ ಉಪಯೋಗಿಸುವ ತಂತ್ರಗಳು
3. ಕೋಮುಗಲಭೆ ನಡೆಯುವಾಗ ಸೆಕ್ಯುಲರ್ ಶಕ್ತಿಗಳ ಮಧ್ಯ ಪ್ರವೇಶದ ಬಗೆ ಹೇಗೆ?
4. ಕೋಮುಗಲಭೆ ನಡೆದ ನಂತರದಲ್ಲಿ ನಡೆಯುವ ಆಡಳಿತದ ಕೋಮು ಸೌಹಾರ್ದತಾ ಕಾರ್ಯಕ್ರಮಗಳ ಸ್ವರೂಪಗಳ ವಿಶ್ಲೇಷಣೆ
5. ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಗಳ ಕಾರಣಗಳು-ಸ್ವರೂಪಗಳು
6. ಕೋಮುಗಲಭೆಗೆ ಕಾರಣವಾಗುವ ವಿವಿಧ ಘಟನೆಗಳ ಉಲ್ಲೇಖ
7. ಕೋಮುಗಲಭೆಯ ಹುಟ್ಟು, ಬೆಳವಣಿಗೆ ಮತ್ತು ವಿಸ್ತರಣೆಗೆ ಸಂಬಂಧಿಸಿ ಮಾಧ್ಯಮಗಳ ಪಾತ್ರ

‘ಪ್ರಾಯೋಗಿಕ ಸೆಕ್ಯೂಲಾರಿಸಂ’ ಮಂಗಳೂರಿನಲ್ಲಿ ವಿಶಿಷ್ಟ ಕಾರ್ಯಾಗಾರ

ಕೋಮುವಾದದ ಪ್ರಕ್ರಿಯೆ ಭಾರತದಲ್ಲಿ ಆರಂಭವಾದದ್ದು ಕಳೆದ 150 ವರ್ಷಗಳಿಂದ. 1871 ರಲ್ಲಿ ಬ್ರಿಟೀಷರು ಜನಗಣತಿಯ ಹೆಸರಿನಲ್ಲಿ ಪ್ರಥಮ ಬಾರಿಗೆ ‘ಹಿಂದೂ’ ಎಂಬ ವಿಂಗಡಣೆ ಮಾಡಿ ಕೋಮುವಾದದ ಬೀಜ ಬಿತ್ತಿದರು. ದಯಾನಂದ ಸರಸ್ವತಿ, ಬಾಲಗಂಗಾಧರ ತಿಲಕರು ಬ್ರಿಟೀಷರ ವಿರುದ್ಧ ಹೋರಾಟದಲ್ಲಿ ‘ಹಿಂದೂ’ ಪರಿಕಲ್ಪನೆ ಬಳಸಿಕೊಂಡರು. ಹಿಂದೂರಾಷ್ಟ್ರ ಅವರ ಗುರಿಯಾಗಿರಲಿಲ್ಲ. ಪ್ರಥಮ ಬಾರಿಗೆ ಹಿಂದೂ ರಾಷ್ಟ್ರದ ಪರಿಕಲ್ಪನೆಯನ್ನು ತಂದದ್ದು ಲಾಲಾಲಜಪತರಾಯ.



1901 ರಲ್ಲಿ ಭಾರತದಲ್ಲಿ ಪ್ರಥಮ ಬಾರಿಗೆ ಶೋಷಿತ ವರ್ಗವನ್ನು ಗುರುತಿಸಿ ಭೂಹೀನರಿಗೆ ಭೂಮಿ, ಬ್ರಾಹ್ಮಣ ವಿಧವೆಯರಿಗೆ ಪರಿಹಾರ ನೀಡುವುದಕ್ಕಾಗಿ ಹೋರಾಡಿದ ಜ್ಯೋತಿ ಬಾಪುಳೆ ವಿರುದ್ಧ ಬ್ರಾಹ್ಮಣರು ಹಲ್ಲೆ ಮಾಡಿದರು. ಕಾಂಗ್ರೆಸ್ಸಿನಲ್ಲಿ ಕಮ್ಯೂನಿಸ್ಟರು ಮತ್ತು ಸೋಷಲಿಸ್ಟರು ಇದ್ದುದರಿಂದ 1880 ರಿಂದ 1920 ರವರೆಗೆ ಸಾಮಾಜಿಕ ನ್ಯಾಯ ಚಳುವಳಿಯಲ್ಲಿ ಕಾಂಗ್ರೆಸ್ ತನ್ನನ್ನು ತೊಡಗಿಸಿಕೊಂಡಿತ್ತು. ಈ ಸಾಮಾಜಿಕ ನ್ಯಾಯ ಆಧಾರದ ಚಳುವಳಿಯನ್ನು ಗುರಿಯಾಗಿಟ್ಟುಕೊಂಡು ಹೆಡಗೇವಾರ ನೇತೃತ್ವದಲ್ಲಿ ಆರೆಸ್ಸೆಸ್‌ನ ಹಿಂದುತ್ವ ಚಳುವಳಿ ಬೆಳೆದುಬಂದಿತು. ಕ್ರಮೇಣವಾಗಿ ಕಾಂಗ್ರೆಸ್ಸಿನ ಮೇಲ್ಜಾತಿಯವರಿಗೆ ಸಾಮಾಜಿಕ ನ್ಯಾಯ ಹಿಡಿಸಲಿಲ್ಲ. ದಲಿತರಿಗೆ ದೇವಸ್ಥಾನ ಪ್ರವೇಶಿಸಲು ಹೋರಾಡಿದ ರಾಜಾಜಿಯನ್ನೇ ಕಿತ್ತು ಹಾಕಿ ಎಂದು ಕಾಂಗ್ರೆಸ್ಸಿಗರು ಬೊಬ್ಬೆ ಹಾಕಿದರು. ಕೋಮುವಾದ ಬೆಳೆಯಲು ಸಂಘಪರಿವಾರ ಮಾತ್ರವಲ್ಲ ಕಾಂಗ್ರೆಸ್ಸಿನವರೂ ಕಾರಣರು. ಭೂ ಸುಧಾರಣಾ ಚಳುವಳಿ ಯುದ್ಧಕ್ಕೂ ವಿರೋಧವಾಗಿ ಕಾರ್ಯಾಚರಿಸಿದ ಹಿಂದೂವಾದಿಗಳಿಗೆ ಭೂಹೀನರಾಗಿ ದ್ದವರು ಬಹುತೇಕ ಹಿಂದೂಗಳೇ ಎನ್ನುವುದು ಗೊತ್ತಿತ್ತು. ಅಂದರೆ ಹಿಂದುತ್ವದ ಯಾವುದೇ ರಾಜಕೀಯ ಉಳ್ಳವರ ಅಧಿಕಾರ ರಕ್ಷಿಸುವ ರಾಜಕೀಯ ಎಂದು ಅವರು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮಾನವತಾ ವೇದಿಕೆಯ ಸಂಚಾಲಕರಾದ ಯಶವಂತ ಮರೋಳಿ ವಹಿಸಿದ್ದು, ಚಿಂತಕ ಸಿ.ಎನ್.ಶೆಟ್ಟಿ ವೇದಿಕೆಯಲ್ಲಿ ಇದ್ದರು.

ಸಮಾರೋಪ ಸಮಾರಂಭ

ಸೆಕ್ಯೂಲಾರಿಸಂ ಎಂದರೆ ನಾಸ್ತಿಕವಾದ ಅಲ್ಲ. ಧರ್ಮದ ವಿರೋಧವಾದ ವಾದವೂ ಅಲ್ಲ. ಶುಷ್ಕ ವಿಚಾರ ವಾದವೂ ಅಲ್ಲ. ಮತ ಧರ್ಮಗಳು ಮನೆ ಮಠಗಳಿಗೆ ಸೀಮಿತವಾಗಿ ಸಾರ್ವಜನಿಕ ವ್ಯವಸ್ಥೆಯಲ್ಲಿ ಮತ್ತು ಜೀವನದಲ್ಲಿ ಮಾನವತಾವಾದಿಯಾಗಿರುವುದು ಸೆಕ್ಯೂಲಾರಿಸಂ ಎಂದು ಖ್ಯಾತ ಚಿಂತಕ ಆದಮಾರು ಶ್ರೀಪತಿ ಆಚಾರ್ಯರವರ ಅಭಿಪ್ರಾಯ. ಅವರು ದಿನಾಂಕ 28 ರಂದು ಮಂಗಳೂರಿನ ಉರ್ವ ಮಾರ್ಕೆಟ್ ಬಳಿ ಇರುವ ಬಿಲ್ಲವ ಸಂಘದ ಕಟ್ಟಡದಲ್ಲಿ ಜರುಗಿದ ಎರಡು ದಿನಗಳ ಪ್ರಾಯೋಗಕ ಸೆಕ್ಯೂಲಾರಿಸಂ ಕಾರ್ಯಾಗಾರದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಭಾಷಣ ಮಾಡುತ್ತಿದ್ದರು.

ಕೋಮುವಾದಿ ಸಂಘಟನೆಗಳು ತಮ್ಮ ತಮ್ಮ ಧರ್ಮದ ಅನುಯಾಯಿಗಳಲ್ಲಿ ಆ ಧರ್ಮದಲ್ಲಿ ಹುಟ್ಟಿರುವ ಬಗ್ಗೆ ಹೆಮ್ಮೆ ಪಡಬೇಕೆಂಬ ಒಣ ಪ್ರತಿಷ್ಠೆಯನ್ನು ಪ್ರಚಾರ ಮಾಡುತ್ತದೆ. ಆದರೆ ಹುಟ್ಟು ಮತ್ತು ಆ ಮೂಲಕ ಮತ ಧರ್ಮದ ಪರದೆಗೆ ಬಲಿಯಾಗುವುದು ಆಯ್ಕೆಯಾಗಿರುವುದಿಲ್ಲ. ಹಾಗಿರುವಾಗ ಹೆಮ್ಮೆ ಪಡುವ ಅವಶ್ಯಕತೆಯಾದರೂ ಏನು ಎಂದು ಅವರು ವಿಶ್ಲೇಷಿಸಿದರು. ಮತ ಧರ್ಮದ ಬಗ್ಗೆ ಡೋಲು, ತಮ್ಮಟೆ ಬಾರಿಸುವ ಅಗತ್ಯವೇ ಇಲ್ಲ ಎಂದು ಹೇಳಿದರು.

ಪರಮತ ಸಹಿಷ್ಣುತೆ ಮನುಷ್ಯ ಸಾಮಾಜಿಕ ಅಭಿವೃದ್ಧಿಗೆ ಅಗತ್ಯವಿದ್ದು, ಕೇವಲ ಬೂಟಾಟಿಕೆಯ ಕಾರ್ಯಕ್ರಮಗಳಿಂದ ಇದು ಬರುವುದಿಲ್ಲ. ಸರ್ವಧರ್ಮ ಸಮಭಾರ ಇಪ್ತಾರ ಕೂಟದ ರಾಜಕೀಯಗಳೆಲ್ಲವೂ ಬೂಬಾಟಿಕೆಯಾಗಿದ್ದು, ಇದು ಓಟು ಬ್ಯಾಂಕ್ ರಾಜಕೀಯವಾಗಿದೆ. ಧರ್ಮದಿಂದ ರಾಜಕೀಯವನ್ನು ಪ್ರತ್ಯೇಕಿಸುವುದೇ ಸೆಕ್ಯೂಲಾರಿಸಂನ ಮೂಲ ತತ್ವ ಎಂದು ಹೇಳಿದರು. ಗೋಹತ್ಯೆಯ ನಿಷೇಧ ಮತ್ತು ದನ ಹಿಡಿಯುವ ಹೊಲಸು ರಾಜಕೀಯದ ಬಗ್ಗೆ ಮಾತಾಡಿದ ಅವರು ಸಂವಿಧಾನದ ರಾಜ್ಯ ನಿರ್ದೇಶಕ ಸೂತ್ರದನ್ವಯ ಗೋಹತ್ಯೆ ಸಾಮಾಜಿಕ, ಆರ್ಥಿಕ ಕಾನೂನಿನ ಸಹಮತ ಇದೆ ಎಂದು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅಮುಕ್ತ ಸಂಘಟನೆಯ ಅಧ್ಯಕ್ಷರಾದ ಹ… ಉಪಾಧ್ಯಾಯರವರು ಕೋಮುವ… ಮೂಲಭೂತವಾದಿಗಳು ಅಲೌಕಿಕ ಹ… ಲೌಖಿಕದ ಬದುಕನ್ನು ಹಾಳು ಮಾ… ಜಾತ್ಯಾತೀತದ ಬಗ್ಗೆ ವಿಶ್ಲೇಷಿಸಿದ ಹಿಂ… ಕೋಮುವಾದಿಗಳಲ್ಲ. ಮುಸ್ಲೀ… ಕೋಮುವಾದಿಗಳಲ್ಲ. ಆದರೆ ಅದನ್… ರಾಜಕೀಯ ಮಾಡುವವರೆಲ್ಲಾ ಕೋಮು… ಎಂದು ಹೇಳಿದರು.

ಮಾಂಸಹಾರ ನಮ್ಮ ಜನಜೀವನದ … ಅಂಗ. ಕೇವಲ ಮುಸ್ಲಿಂ ಸಮುದಾಯ… ದನದ ಮಾಂಸ ತಿನ್ನುತ್ತಾರೆಂಬುದು ತ… ಎಂದು ಅವರು ಹೇಳಿದರು. ಕೋಮು… ಜನರನ್ನು ಪಲಾಯನವಾದಿಗಳನ್ನಾಗಿ… ಮನೋಭಾವದವರನ್ನಾಗಿ ಮಾಡುತ್ತಿದ್ದಾ… ಟೀಕಿಸಿದರು.

ವೇದಿಕೆಯಲ್ಲಿ ಮಾನವತಾ ವೇ… ಸಂಚಾಲಕರಾದ ಯಶವಂತ ಮರೋಳಿ… ಸಿ.ಎನ್.ಶೆಟ್ಟಿ ಮೊದಲಾದವರು … ಪ್ರಾರಂಭದಲ್ಲಿ ಮಾನವತಾ ವೇ… ನಿರ್ವಾಹಕರಾದ ವಾಸುದೇವ ಉಚ್ಚಿಲ್ … ಕೊನೆಯಲ್ಲಿ ವಂದಿಸಿದರು. ಈ ಕಾರ್ಯಾ… ಆರು ವಿಷಯಗಳ ಬಗ್ಗೆ ಕಮಿಶನ್‌ಗಳ… ವರದಿಯನ್ನು ರೂಪಿಸಲಾಯಿತು. ಸಂ… ವ್ಯಕ್ತಿಗಳಾಗಿ ಕೆ.ಯಾದವ ಶೆಟ್ಟಿ, ಕೃಷ್ಣಪ್ಪ ಕೊ… ಸಿ.ಎನ್.ಶೆಟ್ಟಿ, ನಾಗೇಶ ಕುಮಾ… ಮೊದಲಾದವರು ಇದ್ದರು. ಎರಡು… ಕಾರ್ಯಾಗಾರವು ಕೊನೆಯಲ್ಲಿ ಅಂತರಾ… ಗೀತೆಯೊಂದಿಗೆ ಮುಕ್ತಾಯವಾಯಿತು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಸಿಪಿಐ(ಎಂ) ಸಮ್ಮೇಳನಗಳು

- **ಡಿಸೆಂಬರ್ 18,19,20, 2004**
  ಬೆಂಗಳೂರು ಜಿಲ್ಲಾ ಸಮ್ಮೇಳನ
  ಬಹಿರಂಗಸಭೆ - ಡಿಸೆಂಬರ್ 20
  ದಾಸರಹಳ್ಳಿ ಸಿ, ಎಂ.ಸಿ ಬಳಿ
- **ಡಿಸೆಂಬರ್ 19,20,2004**
  ಉಡುಪಿ ಜಿಲ್ಲಾ ಸಮ್ಮೇಳನ
  ಕುಂದಾಪುರದಲ್ಲಿ
- **ಡಿಸೆಂಬರ್ 20,21**
  ಕಮಲಾಪುರ ಸಮ್ಮೇಳನ
- **ಡಿಸೆಂಬರ್ 23-24**
  ಮಲೆನಾಡು ಸಮ್ಮೇಳನ - ಹಾಸನ
- **ಡಿಸೆಂಬರ್ 26-27**
  ಬಳ್ಳಾರಿ ಜಿಲ್ಲಾ ಸಮ್ಮೇಳನ - ಶಿರಗು…
- **ಜನವರಿ 22 ರಿಂದ 25,2004**
  18ನೇ ರಾಜ್ಯಸಮ್ಮೇಳನ
  ಉಡುಪಿಯಲ್ಲಿ. 25ರಂದು ರ್‍ಯಾಲಿ
- **ಡಿಸೆಂಬರ್ 20,2004**
  ಉದ್ಯೋಗ ಖಾತರಿ ಯೋಜನೆ ಜಾ…
  ಒತ್ತಾಯಿಸಿ, ಜಿಲ್ಲಾ, ತಾಲ್ಲೂ…
  ಕೇಂದ್ರಗಳಲ್ಲಿ ಪಂಜಿನ ಮೆರವ…
  ಡಿವೈಎಫ್ಐ ಕರೆ

ದತ್ತಜಯಂತಿ ಹೆಸರಿನಲ್ಲಿ ವಿಕೃತಿಗಳು ಸಲ್ಲದು

ಬಾಬಾಬುಡನ್ ಗಿರಿಯಲ್ಲಿನ ದರ್ಗಾ-ಪೀಠವನ್ನು ವಿವಾದದ ಕೇಂದ್ರವನ್ನಾಗಿಸಿ ಆರ್‌ಎಸ್‌ಎಸ್ ನ ಸಂಘ ಪರಿವಾರ ನಾಡಿನ ಸೌಹಾರ್ದತೆ ಮತ್ತು ಶಾಂತಿ ಕದಡುತ್ತಾ ಬಂದಿದೆ. ಈ ಬಗ್ಗೆ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳ ನಿಯೋಗ ಮುಖ್ಯಮಂತ್ರಿ ಧರ್ಮಸಿಂಗ್ ರವರಿಗೆ ದರ್ಗಾ-ಪೀಠದ ಸುತ್ತ ಸುತ್ತಿಕೊಂಡಿರುವ ವಿವಾದ ಬಗೆಹರಿಸಲು, ಅಲ್ಲಿನ ಸತ್ಯ ಸಂಗತಿಗಳನ್ನು ಜನತೆ ಎದುರು ತೆರೆದಿಡುವಂತೆ, ಅಲ್ಲಿನ ಪರಂಪರೆಯನ್ನು ರಕ್ಷಿಸುವಂತೆ, ದೃಢ ಕ್ರಮ ಕೈಗೊಳ್ಳುಂತೆ ಒತ್ತಾಯಿಸಿದ್ದವು. ಈ ಕ್ರಮವಾಗಿ ಮುಖ್ಯಮಂತ್ರಿಗಳು ಸರ್ವಪಕ್ಷಗಳ ಸಭೆಯನ್ನು ಕರೆದಿದ್ದರು. ಈ ಸಭೆಯ ವಿವರಗಳು...

ನ್ಯಾಯಾಲಯ ನಿರ್ದೇಶನ ಜಾರಿಗೆ ಸರ್ಕಾರಕ್ಕೆ ದೃಢ ಬೆಂಬಲ

ಈ ಡಿಸೆಂಬರ್ 25 ರಂದು ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯಲ್ಲಿ ದತ್ತ ಜಯಂತಿ ಆಚರಣೆಗೆ ಸಂಬಂಧಿಸಿ ಚರ್ಚಿಸಲು ಸರ್ವ ಪಕ್ಷಗಳ ಸಭೆ ಜರುಗಿದ್ದು ಅತ್ಯಂತ ಗಮನಾರ್ಹವಾದ ಹೆಜ್ಜೆ. ಕಳೆದ ಕೆಲವು ವರುಷಗಳಿಂದ ಆರ್‌ಎಸ್‌ಎಸ್ ನ ಪರಿವಾರ ಅತ್ಯಂತ ವ್ಯವಸ್ಥಿತವಾಗಿ ವಿವಾದವನ್ನು ಎಬ್ಬಿಸಿ - ಎಬ್ಬಿಸುತ್ತಾ ಇದನ್ನು ಇನ್ನೊಂದು ಅಯೋಧ್ಯಾ ಪ್ರಕರಣವನ್ನಾಗಿಸುವ ಸಂಚು ರೂಪಿಸಿ ಸತತವಾಗಿ ಕೋಮುಸೌಹಾರ್ದತೆ-ಶಾಂತಿ ಕದಡುತ್ತಾ ಬಂದಿದೆ. ಕಮ್ಯುನಿಸ್ಟ್ ಪಕ್ಷಗಳ ಮುತುವರ್ಜಿ ಹಾಗೂ ಮುಖ್ಯಮಂತ್ರಿಗಳಿಂದ ಸ್ವಾಗತಾರ್ಹ ಕ್ರಮ ಈ ದರ್ಗಾ-ಪೀಠದ ಸುತ್ತ ಕಟ್ಟಿಕೊಂಡಿರುವ ವಿವಾದಗಳನ್ನು ಬಗೆಹರಿಸುವ - ಸತ್ಯ ಸಂಗತಿಗಳನ್ನು ಜನತೆಯು ಎದುರು ತೆರೆದಿಡಲು, ಅಲ್ಲಿನ ಪರಂಪರೆ ರಕ್ಷಿಸಲು, ದೃಢ ಕ್ರಮ ವಹಿಸುವಂತೆ ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ಮತ್ತು ಸಿಪಿಐ ನ ರಾಜ್ಯ ಮುಖಂಡರ ನಿಯೋಗ ಭೇಟಿ ಮಾಡಿ ವಿವರವಾಗಿ ಚರ್ಚಿಸಿತ್ತು. ವಿಷಯದ ಗಂಭೀರತೆಯನ್ನು ಮನಗಂಡ ಮುಖ್ಯಮಂತ್ರಿ ಧರಂಸಿಂಗ್‌ರವರು ಉನ್ನತ ಅಧಿಕಾರಿಗಳನ್ನು ಈ ಸಭೆಗೆ ಆಹ್ವಾನಿಸಿದ್ದರು. ಎರಡು ಕಮ್ಯುನಿಸ್ಟ್ ಪಕ್ಷಗಳ ಸಲಹೆ-ಸೂಚನೆ-ವಿಶ್ಲೇಷಣೆಯನ್ನು ಗಹನವಾಗಿ ಆಲಿಸಿ ಈ ವಿವಾದಕ್ಕೆ ಪರಿಹಾರ ರೂಪಿಸಲು ರಾಜಕೀಯ ಕ್ರಮವಾಗಿ ಸರ್ವಪಕ್ಷಗಳ ಸಭೆಯನ್ನು (ಎರಡು ಸಭೆಗಳು - ಬೆಂಗಳೂರಿನಲ್ಲಿ ಮತ್ತೊಂದು ಚಿಕ್ಕಮಗಳೂರಿನಲ್ಲಿ) ಕರೆಯುವುದಾಗಿ ಪ್ರಕಟಿಸಿದ್ದರು. ಅದರ ಫಲವೇ ಈ ಸಭೆ. ಮುಖ್ಯಮಂತ್ರಿಗಳ ಈ ಮುತುವರ್ಜಿ ಶ್ಲಾಘನೀಯ, ಸ್ವಾಗತಾರ್ಹ.

ಈ ಸಭೆಯಲ್ಲಿ ಸಿಪಿಐ(ಎಂ)ನಿಂದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್, ಎಸ್.ಪ್ರಸನ್ನಕುಮಾರ್ ಹಾಗೂ ಮಲೆನಾಡು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ವಿ.ಸುಕುಮಾರ್ ಪಾಲ್ಗೊಂಡಿದ್ದರು. ಸಿಪಿಐ ನಿಂದ ರಾಜ್ಯ ಕಾರ್ಯದರ್ಶಿ ಸಿದ್ದನಗೌಡ ಪಾಟೀಲ್, ಡಿ.ವಿ.ಲೋಕೇಶ್, ಆರಾಧ್ಯ, ಶಿವರಾಜ ಬಿರಾದಾರ್ ಮುಂತಾದವರು ಪ್ರತಿನಿಧಿಸಿದ್ದರು. ಅಲ್ಲದೇ ಮಾಜಿ ಕೇಂದ್ರ ಸಚಿವ ಸಿ.ಎಂ.ಇಬ್ರಾಹಿಂ, ಸಚಿವ ಮಲ್ಲಿಕಾರ್ಜುನಖರ್ಗೆ, ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ದರ್ಗಾಪೀಠದ ಮುಖ್ಯಸ್ಥ ಸಜ್ಜಾದ್ ಎ ನಿಶಾನ್ ಭಾಗವಹಿಸಿದ್ದರು.

ಸರ್ಕಾರದ ಉನ್ನತ ಅಧಿಕಾರಿಗಳಾದ ಪೊಲೀಸ್ ಮಹಾ ನಿರ್ದೇಶಕರಾದ ಜೋರ್ಕರ್, ಸುಭಾಷ್ ಭರಣಿ, ಗೃಹ ಕಾರ್ಯದರ್ಶಿ ಬ್ರಹ್ಮದತ್ತ, ಗ್ರಾಮೀಣಾಭಿವೃದ್ಧಿ ಕಂದಾಯ ಕಾರ್ಯದರ್ಶಿ ಗೌಂತ್ರಿವೇದಿ ಮುಂತಾದವರಿದ್ದರು.

ವಿವಾದ ಹಾಗೂ ವಿಕೃತಿ

ಈ ಹಿಂದಿನ ಬಹುತೇಕ ಎಲ್ಲಾ ಸರ್ಕಾರಗಳ ಚಿಂತನೆ ಹಾಗೂ ಕ್ರಮಗಳಿಗೆ ಹೋಲಿಸಿದರೆ ಈ ಮೈತ್ರಿಕೂಟ ಸರ್ಕಾರದ ನಿಲುವು ಮತ್ತು ಕ್ರಮಗಳು ಬಹಳಷ್ಟು ಭಿನ್ನವಿದೆ. 1927 ರ ಮೈಸೂರು

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್


ಸಂಸ್ಥಾನದ ಮುಜರಾಯಿ ಕಾಯ್ದೆಯನ್ವಯ ಈ ದರ್ಗಾ-ಪೂಜಾ ಕೇಂದ್ರವು ಮುಜರಾಯಿ ಇಲಾಖೆಗೆ ಒಳಪಟ್ಟಿತ್ತು. 1954 ರಲ್ಲಿ ಭಾರತ ಸರ್ಕಾರದ ಕೇಂದ್ರ ವಕ್ಫ್ ಕಾಯಿದೆ ಜಾರಿಗೆ ಬಂದ ನಂತರ 1964 ರಲ್ಲಿ ಇದನ್ನು ವಕ್ಫ್ ಆಸ್ತಿ ಎಂದು ಪರಿಗಣಿಸಲಾಯಿತು. 1975 ರಲ್ಲಿ ಮುಜರಾಯಿ ಇಲಾಖೆಯಿಂದ ವಕ್ಫ್‌ಗೆ ವರ್ಗಾಯಿಸಲಾಯಿತು. ಇದನ್ನು ಪ್ರಶ್ನಿಸಿ 1976 ರಲ್ಲಿ ನ್ಯಾಯಾಲಯ ಮೆಟ್ಟಿಲನ್ನು ನಾಗರಾಜ ರಾವ್ ಎಂಬುವರು ಹತ್ತಿದರು. ಅಲ್ಲಿಂದ ಇಲ್ಲಿಯವರೆಗೂ ಇದು ಮುಜರಾಯಿ ಇಲಾಖೆಗೋ-ವಕ್ಫ್ ಇಲಾಖೆಗೋ ಯಾರಿಗೆ ಸೇರಬೇಕೆಂಬ, ಉರುಸ್ ಸಂದರ್ಭದಲ್ಲಿ ಬರುವ ಆದಾಯ ಮುಖ್ಯಸ್ಥ ಸಜ್ಜಾದ್ ಎ.ನಿಶಾನ್‌ಗೆ ಸೇರಬೇಕೋ ಅಥವಾ ಸರ್ಕಾರದ ಮುಜರಾಯಿ ಇಲಾಖೆ ಅಧಿಕಾರಕ್ಕೋ ಎಂಬ ವಿವಾದಗಳು ಕೇಳಿಬಂದವಲ್ಲದೇ, 'ದತ್ತಜಯಂತಿ'ಯ ಆಚರಣೆ - ವಿಷಯಗಳು ಇರಲೇ ಇಲ್ಲ. ರಾಮಜನ್ಮಭೂಮಿ ಬಾಬ್ರಿ ಮಸೀದಿ ವಿವಾದ ದೇಶದಲ್ಲಿ ವ್ಯಾಪಕ ಕೋಮುವಾದಿ ಸ್ವರೂಪದಲ್ಲಿ ಕೆರಳುತ್ತಿರುವಾಗ ದತ್ತ ಜಯಂತಿಯ ಪ್ರಸ್ತಾವವನ್ನು ವಿಶ್ವಹಿಂದೂ ಪರಿಷತ್ - ಬಜರಂಗದಳಗಳ ಮೂಲಕ ಸಂಘ ಪರಿವಾರ ಎತ್ತಿತು. 1988 ರಲ್ಲಿ ಗಿರಿಯಲ್ಲಿ ಮಾರ್ಗಶಿರ ಹುಣ್ಣಿಮೆಯಂದು ಒಂದು ದಿನದ ಪೂಜೆಯನ್ನು ನಡೆಸಿತು. ಅಲ್ಲಿಂದ 1989 ರಿಂದ ದತ್ತ ಜಯಂತಿಗೆ ಜಿಲ್ಲಾಡಳಿತದಿಂದ ಅನುಮತಿ ಕೇಳುವುದು, ಮುಚ್ಚಳಿಕೆಯನ್ನು ಸಂಘ ಪರಿವಾರ ಬರೆದುಕೊಟ್ಟು ನಡೆಸುವುದು ನಡೆದೇಬಂದಿದೆ. 1997 ರಿಂದ ದತ್ತ ಜಯಂತಿ ಜೊತೆಗೆ ದತ್ತ ಮಾಲೆ, ದತ್ತ ಯಜ್ಞ..... ಶೋಭಾ ಯಾತ್ರೆ ಇತ್ಯಾದಿಗಳು ವರುಷವೂ ಹೊಸದೊಂದು ಸೇರುತ್ತಲೇ ಬಂದವು. ಇವು ಹಿಂದೆ 1975 ರ(ನ್ಯಾಯಾಲಯ ಹೇಳಿದಂತೆ ದತ್ತಿ ಕಮಿಷನರ್ ಪಟ್ಟಿ ಮಾಡಿದ್ದ) ಹೊತ್ತಿನಲ್ಲಿ ಇಲ್ಲದಿದ್ದ ಆಚರಣೆಗಳು. 2000 ಇಸವಿ ನವೆಂಬರ್ ತಿಂಗಳಿನಲ್ಲಿ ಸರ್ಕಾರವೇ ಇದರ ಆಚರಣೆಗೆ ಸಮಿತಿ ರಚಿಸಿ ಮುಂದಾದುದು ಗಹನವಾದ ಬೆಳವಣಿಗೆ. ಇಂತಹ ವಿಕೃತಿಗಳ ಪರಮಾವಧಿಯೆಂದರೆ ಕಾನೂನು ಸಚಿವರಾಗಿದ್ದ ಚಂದ್ರೇಗೌಡರ ಸಮ್ಮುಖದಲ್ಲೇ ನಡೆದ ಯಜ್ಞ ಮತ್ತು ವಿಗ್ರಹ ಪೂಜೆ.

ವೈದಿಕಶಾಹಿ ವಿರೋಧಿ ಪಂಥ

ಸೂಫಿ ಅಥವಾ ದತ್ತಪಂಥಗಳು ವೈದಿಕ ವಿಧಾನಗಳನ್ನು ಧಿಕ್ಕರಿಸಿ ಬೆಳೆದಂತಹವು. ಪೂಜೆ-ಹವನ, ಹೋಮ-ಯಜ್ಞ, ಇತ್ಯಾದಿಗಳನ್ನು ಈ ಪಂಥಗಳು ಒಪ್ಪುವುದೇ ಇಲ್ಲ. ಬಾಬಾ ಬುಡನ್‌ಗಿರಿ - ದರ್ಗಾಪೀಠದ ಗುಹೆಯಲ್ಲಿ ನೂರಾರು ವರುಷಗಳಿಂದ ನಡೆದುಬಂದ ಈ ಸೂಫಿ ಪರಂಪರೆ ಜಾತಿ, ಮತಬೇಧವಿಲ್ಲದ್ದು. ಕೋಮುಸೌಹಾರ್ದತೆ - ಸಾಮರಸ್ಯದ ಪ್ರತೀಕವದು. ಉಚ್ಚ ನ್ಯಾಯಾಲಯ ಇದನ್ನು ಮುಕ್ತ ಕಂಠದಿಂದ ಪ್ರಶಂಶಿಸಿದೆ. ಆದರೆ ಈಗ ಸಂಘ ಪರಿವಾರ ಜಿಲ್ಲಾ ಆಡಳಿತದೊಂದಿಗೆ ಸೇರಿ ನಡೆಸಿಕೊಂಡು ಬಂದ ಆಚರಣೆಗಳು ಈ ಪರಂಪರೆಗೆ ಅಪಚಾರ ಎಸಗುವಂತಹ ವೈಧೀಕರಣದ ವಿಕೃತ ಆಚರಣೆಗಳಾಗಿವೆ. ಇದನ್ನೇ ಎಲ್ಲಾ ಪ್ರಗತಿಪರರು ವಿರೋಧಿಸುತ್ತಾ ಬಂದಿದ್ದು.

ಭಿನ್ನ ನಿಲುವು

ಇಂತಹ ಹಿನ್ನೆಲೆಯಲ್ಲಿಯೇ ಈ ವರುಷವೂ ಚಿಕ್ಕಮಗಳೂರು ಜಿಲ್ಲಾಡಳಿತ ಆದೇಶವೊಂದನ್ನು ಹೊರಡಿಸಿ 1975 ರ ಹಿಂದಿನ ಆಚರಣೆಗಳಿಗೆ ಮಾತ್ರ ಅವಕಾಶವಿದ್ದ, ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುವುದಾಗಿ ಪ್ರಕಟಿಸಿದೆ. ಗೃಹಖಾತೆ ಕಾರ್ಯದರ್ಶಿ ಬ್ರಹ್ಮದತ್ತರವರು ಈ



ಪ್ರದೇಶಕ್ಕೆ ಭೇಟಿ ನೀಡಿ ಕೂಲಂಕುಶವಾಗಿ ಅಧ್ಯಯನ ಮಾಡಿ ಮಾಹಿತಿ ಸಂಗ್ರಹಿಸಿ ಬಂದಿದ್ದಾರೆ. ಇದು ಹಿಂದಿನ ಸರ್ಕಾರಗಳ ನಿಲುವಿಗಿಂತ ಭಿನ್ನವಾದದ್ದು ಎಂಬುದನ್ನು ಗಮನಿಸಬೇಕು. ಇದೇ ಅಂಶದ ಸಮರ್ಥನೆಯನ್ನು ಡಿಸೆಂಬರ್ 8 ರಂದು ಸೇರಿದ್ದ ಸರ್ವಪಕ್ಷಗಳ ಸಭೆಯಲ್ಲಿ ಕೇಂದ್ರಬಿಂದುವಾಗಿ ಚರ್ಚಿಸಲಾಯಿತು. ಬಿಜೆಪಿ ಆಗೀಗ ವಿನಾಕಾರಣ ಕ್ಯಾತೆ ತೆಗೆದು ಚರ್ಚೆಯ ಹಾದಿ ತಪ್ಪಿಸಲು ಕಾಲು ಕೆದರುತ್ತಾ ವಿರೋಧ ಎತ್ತಿತಾದರೂ ನೇರವಾಗಿ ನ್ಯಾಯಾಲಯದ ನಿರ್ದೇಶನವನ್ನು ವಿರೋಧಿಸಲಾಗಲಿಲ್ಲ. ಬಿಜೆಪಿ ಮಿತ್ರ ಪಕ್ಷವಾದ ಜೆಡಿ(ಯು) ಸಹ ಬಿಜೆಪಿ ನಿಲುವನ್ನು ಬೆಂಬಲಿಸಲಿಲ್ಲ. ಬದಲಾಗಿ ಈಚಿಗಿನ ರೀತಿಯಲ್ಲೇ ದತ್ತಜಯಂತಿ ಆಚರಣೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿತು. ಒಂದು ಹಂತದಲ್ಲಿ ವಿರೋಧಪಕ್ಷದ 'ಅಧಿಕೃತ' ನಾಯಕ ಯಡಿಯೂರಪ್ಪನವರು ಮುಖ್ಯಮಂತ್ರಿ ಧರಂಸಿಂಗ್ ರವರೇ ಬಂದು ನಡೆಸಿಕೊಡಲಿ ನಮ್ಮದೇನು ತಕರಾರಿಲ್ಲ ಎಂದು ವಿನಯ ನಟಿಸಿದರು. ಈಚಿಗೆ ಜಿಲ್ಲಾ ಆಡಳಿತವು ಹಿಂದೆ ನಡೆದ ವಿಕೃತಿಗಳನ್ನು ಖಚಿತವಾಗಿ ಗುರುತಿಸಿದ್ದು ಸರ್ಕಾರ ಇವುಗಳನ್ನು ಒಪ್ಪಿದ್ದು ಒಂದು ಬಹುಮುಖ್ಯ ಅಂಶ. ಇದನ್ನು ಸ್ವತಃ ಮಾಜಿ ಸಚಿವ ಚಂದ್ರೇಗೌಡರು, ಮಾಜಿ ಸಚಿವ ನಜೀರ್ ಅಹ್ಮದ್, ಮಾಜಿ ಕೇಂದ್ರ ಸಚಿವ ಜಾಫರ್ ಶರೀಫ್ ನ್ಯಾಯಾಲಯದ ಆದೇಶದಂತೆ 1975 ರ ಹಿಂದಿನ ಆಚರಣೆ ಪಾಲಿಸದೆ ವಿಕೃತಿ ಆದದ್ದನ್ನು ಒಪ್ಪಿದರು. ಆ ಸಂದರ್ಭದಲ್ಲಿಯೇ ಮುಖ್ಯಮಂತ್ರಿ ಧರಂಸಿಂಗರವರು 'ಇಷ್ಟೆಲ್ಲದರಿಂದ ಹೈರಾಣಾಗಬೇಕಾಯ್ತು' ಎಂದು ಧ್ವನಿಗೂಡಿಸಿದರು. ಇವುಗಳನ್ನು ಸರಿಪಡಿಸುವ ಗಟ್ಟಿ ಧ್ವನಿ ಸರ್ಕಾರಕ್ಕೆ ಇದೆಯನ್ನಿಸಿತು.

ಸಭೆಯ ಕುರಿತಾಗಿ ಮುಖ್ಯಮಂತ್ರಿಗಳ ಪ್ರಸ್ತಾವಿಕವಾಗಿ ಮಾತನಾಡುತ್ತಿದ್ದಂತೆ ದಿಢೀರನೆ ಎದ್ದುನಿಂತ ಬಜರಂಗದಳದ ನಾಯಕ, ಬಿಜೆಪಿ ಶಾಸಕ ಸಿ.ಟಿ.ರವಿ, ಸುನೀಲ್ ಕುಮಾರ್ 'ಈ ಸಭೆಯ ಅಜೆಂಡಾ ಸ್ಪಷ್ಟಪಡಿಸುವಂತೆ, ಬಾಬಾ ಬುಡನ್‌ಗಿರಿ ಎಂಬುದೇ ಇಲ್ಲ' ಎಂದೂ ಗೊಂದಲ ಹುಟ್ಟಿಸಲೆತ್ನಿಸಿದರು. ಆ ಕೂಡಲೇ ಮಧ್ಯಪ್ರವೇಶಿಸಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು, ಉಭಯ ಕಮ್ಯುನಿಸ್ಟ್ ಪಕ್ಷಗಳ ಮುತುವರ್ಜಿ ಪ್ರಸ್ತಾವನ್ನು ಸಭೆಯನ್ನು ಕರೆದುದಕ್ಕೆ ಧನ್ಯವಾದ ಹೇಳುತ್ತಾ, ಬಾಬಾಬುಡನ್‌ಗಿರಿಯ ಸಾಮರಸ್ಯದ ಪರಂಪರೆ ಮತ್ತದರ ಸ್ವರೂಪ ಬದಲಾಯಿಸದಂತೆ, ಅದನ್ನು ಕಾಪಾಡುವಂತೆ ಕ್ರಮವಹಿಸುವುದು ಅಗತ್ಯ, ನ್ಯಾಯಾಲಯದ ನಿರ್ದೇಶನದಂತೆ ಧಾರ್ಮಿಕ ದತ್ತಿ ಆಯುಕ್ತರು ಪಟ್ಟಿ ಮಾಡಿದ 1975 ರ ಹಿಂದಿನ ಆಚರಣೆಗಳಷ್ಟೇ ಅವಕಾಶ ನೀಡಬೇಕು. ಅವುಗಳನ್ನು ಜನರಿಗೆ ವ್ಯಾಪಕವಾಗಿ ತಿಳಿಸಬೇಕು.

ಕೋಮುವಾದಿಗಳು ಹುಟ್ಟಿಸಿರುವ ಸುಳ್ಳು-ಗೊಂದಲಗಳನ್ನು ಬಯಲಿಗೆಳೆದು ಸತ್ಯ ಸಂಗತಿ ಬಹಿರಂಗ ಪಡಿಸಬೇಕು. ಹಿಂದಿನ ಎಲ್ಲಾ ವಿಕೃತಿಗಳನ್ನು

ಪುಟ 4 ಕ್ಕೆ

ರಾಜ್ಯಾದ್ಯಂತ ಡಿಸೆಂಬರ್ 20 ರಿಂದ 26
ಕೋಮು ಸೌಹಾರ್ದತಾ ಕಾರ್ಯಕ್ರಮಗಳು

ಬಾಬಾ ಬುಡನ್‌ಗಿರಿಯಲ್ಲಿನ ಸೌಹಾರ್ದತಾ ಸೂಫಿ ಸಂತರ ಪರಂಪರೆಯ ಸ್ವರೂಪ ಕಾಪಾಡಬೇಕು, ನ್ಯಾಯಲಯದ ನಿರ್ದೇಶನದಂತೆ 1975 ರ ಆಚರಣೆಗಳಿಗಷ್ಟೇ ಸೀಮಿತವಾಗಬೇಕು ಹಾಗೂ ಕೋಮು ಸೌಹಾರ್ದತೆ ಕಾಪಾಡಬೇಕೆಂದು ಇದೇ ಡಿಸೆಂಬರ್ 20 ರಿಂದ 26 ರವರೆಗೆ ಕಳೆದ ವರುಷಗಳಂತೆ ಈ ಬಾರಿಯೂ ಡಿವೈಎಫ್ಐ ಮತ್ತು ಎಸ್‌ಎಫ್ಐ ನ ಸಂಘಟನೆಗಳು ರಾಜ್ಯಾದ್ಯಂತ ಹಲವಾರು ಕಾರ್ಯಕ್ರಮ ಹಮ್ಮಿಕೊಂಡಿವೆ.

ಜಿಲ್ಲಾ - ತಾಲ್ಲೂಕು ಕೇಂದ್ರಗಳಲ್ಲಿ ಈ ಅವಧಿಯಲ್ಲಿ ದ್ವಿಚಕ್ರ ವಾಹನ ಜಾಥಾ, ಮೆರವಣಿಗೆ, ಸಭೆ, ಪ್ರದರ್ಶನ ನಡೆಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮಕ್ಕೆ ನಾಡಿನ ಗಣ್ಯ ಬುದ್ಧಿಜೀವಿಗಳು, ಸಾಮೂಹಿಕ ಸಂಘಟನೆಗಳ ಬೆಂಬಲ ವ್ಯಕ್ತಪಡಿಸಿ, ಭಾಗವಹಿಸುತ್ತಿವೆ. ಬೆಂಗಳೂರಿನಲ್ಲಿ ಅಂತಹ ವಿಶಾಲವಾದ ಸಿದ್ಧತಾ ಸಮಿತಿಯು ಜರುಗಿದ್ದು, ಎಲ್ಲರೂ ಭಾಗವಹಿಸಲು ಸಂಘಟಕರು ಮನವಿ ಮಾಡಿದ್ದಾರೆ.

ಭಾಗ್ಯಜ್ಯೋತಿ ಬಾಕಿಮನ್ನಾ ಆಗ್ರಹಿಸಿ ಪ್ರತಿಭಟನೆ

ಭಾಗ್ಯಜ್ಯೋತಿಗೆ ಮೀಟರ್ ಅಳವಡಿಸುವ ಕ್ರಮ ವಿರೋಧಿಸಿ ಹಾಗೂ ಬಾಕಿ ಮನ್ನಾ ಮಾಡಬೇಕು ಎಂದು ಆಗ್ರಹಿಸಿ ಡಿಸೆಂಬರ್ 7 ರಂದು ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿ ಡಿವೈಎಫ್‌ಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೆಸ್ಕಾಂನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿ ಎದುರು ನಡೆದ ಪ್ರತಿಭಟನೆಯ ಮುಂಚೂಣಿಯಲ್ಲಿ ರಾಜ್ಯ ಸಹಕಾರ್ಯದರ್ಶಿ ಎನ್.ಎಲ್. ಭರತ್ ರಾಜ್, ತಾಲ್ಲೂಕು ಸಂಚಾಲಕರಾದ ಎ.ಆರ್.ರಮೇಶ, ಜಿಲ್ಲಾ ಮುಖಂಡ ಆರ್.ಕೃಷ್ಣ ಹಾಗೂ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಹಕಾರ್ಯದರ್ಶಿ ದೇವಿ ಇದ್ದರು.

ಮೂರು ವರ್ಷಗಳ ಸತತ ಬರಗಾಲದಿಂದ ಜನಸಾಮಾನ್ಯರು ನಲುಗಿದ್ದಾರೆ. ಸರ್ಕಾರ ಈ ಗಾಯದ ಮೇಲೆ ಬರೆ ಎಳೆದಂತೆ ಭಾಗ್ಯಜ್ಯೋತಿಗೆ ಮೀಟರ್ ಅಳವಡಿಸಿ ಹಿಂಸೆ ನೀಡುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬಾಕಿ ಪಾವತಿ ಮಾಡದವರನ್ನು ಜೈಲಿಗೆ ಅಟ್ಟುವ ಬೆದರಿಕೆಯನ್ನೂ ಹಾಕಲಾಗುತ್ತಿದೆ. ಬಿಲ್ ಪಾವತಿಸಿದರೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡಲಾಗುವುದು ಎಂಬ ಹುಸಿ ಪ್ರಚಾರಗಳನ್ನು ಮಾಡಲಾಗುತ್ತಿದೆ ಎಂದು ಟೀಕಿಸಿದರು.

ಜನರನ್ನು ದಿಕ್ಕುತಪ್ಪಿಸುತ್ತಿರುವ ನಾಟಕದಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಬೆಂಬಲವಾಗಿ ನಿಂತಿದ್ದಾರೆ. ಬಂಡವಾಳಶಾಹಿಗಳಿಂದ ಬರಬೇಕಾಗಿರುವ ನೂರಾರು ಕೋಟಿ ರೂ.ಬಾಕಿಯನ್ನು ವಸೂಲಿ ಮಾಡಲಾಗದ ಸರ್ಕಾರ ಬಡವರು ಕಟ್ಟಲಾಗದ ರೂಪಾಯಿಗೆ ಶಿಕ್ಷೆ ನೀಡಲು ಟೊಂಕಕಟ್ಟಿ ನಿಂತಿದೆ ಎಂದು ಲೇವಡಿ ಮಾಡಿದರು.

ಪ್ರತಿಭಟನಾಕಾರರು ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟು ಪಟ್ಟಣದ ಪ್ರಮುಖ



ಬೀದಿಗಳಲ್ಲಿ ಸಂಚರಿಸಿದ ನಂತರ ಮೆಸ್ಕಾ
ಎದುರು ಧರಣಿ ನಡೆಸಿದರು.

ಮುಖಂಡರಾದ ಪದ್ಮ, ಹೊಂ
ಮಲ್ಲಿಕಾರ್ಜುನ್, ವೆಂಕಟೇಶ್, ಜ
ಸಿದ್ದರಾಜು, ಗೋವಿಂದೇಗೌಡ ಪಾಲ್ಗೊ

ಪುಟ 3 ರಿಂದ

... ವಿಕೃತಿಗಳು ನಲ್ಲದು

ತೊಡೆದುಹಾಕಬೇಕು, ದತ್ತ ಜಯಂತಿ ಹೆಸರಿನಲ್ಲಿ ಶಾಂತಿ, ಸೌಹಾರ್ದತೆ ಕದಡಲು ಎಳ್ಳಷ್ಟು ಅವಕಾಶ ನೀಡಕೂಡದು, ಜಿಲ್ಲಾಡಳಿತ ಹೊರಡಿಸಿರುವ ಆದೇಶ ಜಾರಿಗೆ ನಾವು ಬೆಂಬಲಿಸುತ್ತೇವೆ, ಸೌಹಾರ್ದತೆ, ಕಾನೂನು ಪಾಲಿಸಲು ಸರ್ಕಾರದ ನಿಲುವಿನಲ್ಲಿ ಸಹಕರಿಸುತ್ತೇವೆ' ಎಂದರು. ನಂತರ ಮಾತನಾಡಿದ ಸಿಪಿಐನ ರಾಜ್ಯ ಕಾರ್ಯದರ್ಶಿ ಡಾ. ಸಿದ್ದನಗೌಡ ಪಾಟೀಲರು 'ಸರ್ಕಾರದ ಈ ಮುತುವರ್ಜಿಗೆ ಧನ್ಯವಾದ ಹೇಳುತ್ತಾ, ಸೌಹಾರ್ದ ಪರಂಪರೆಗೆ ಹೇಗೆಲ್ಲಾ ಧಕ್ಕೆ ಒದಗಿದೆಯೆಂದೂ, ವಿವರಿಸಿ ನ್ಯಾಯಾಲಯದ ಆದೇಶ ಪಾಲನೆ, ಸರ್ಕಾರದ ನಿರ್ಧಾರಗಳನ್ನು ಪ್ರಸ್ತಾಪಿಸಿ, ಜಿಲ್ಲಾಡಳಿತದ ನಿರ್ಧಾರಕ್ಕೆ ಬೆಂಬಲಿಸಿದರು. ಜಾತ್ಯತೀತ ಜನತಾದಳದ ರಾಜ್ಯಾಧ್ಯಕ್ಷರಾದ ಎನ್.ತಿಪ್ಪಣ್ಣನವರು 'ಸೂಫಿ - ಸಂತ ಪರಂಪರೆ ಭಿನ್ನ - ವೈಧಿಕ ಆಚರಣೆ ಬೇರೆ. ಯಜ್ಞ ವೈದಿಕ ಆಚರಣೆಯೆಂಬುದು ಅಲ್ಲಿ ಇಲ್ಲ. ಆದ್ದರಿಂದ ಕಾನೂನು-ಸಂವಿಧಾನತ್ಮಕವಾಗಿ ನಿರ್ಧಾರಗಳನ್ನು ಜಾರಿ ಮಾಡಲು ಸರ್ಕಾರಕ್ಕೆ ಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದರು. ಕಾಂಗ್ರೆಸ್‌ನ ವಕ್ತಾರ, ಶಾಸಕ ಉಗ್ರಪ್ಪ 'ಕೋಮುಸೌಹಾರ್ದತಾ ಪರಂಪರೆ ರಕ್ಷಣೆಗಾಗಿ ತಮ್ಮ ಪಕ್ಷ ಬದ್ಧ, ಸರ್ಕಾರದ ಈಗಿನ ನಿರ್ಧಾರವನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ಪ್ರಕಟಿಸಿದರು. ಸಂಯುಕ್ತ ಜನತಾದಳದ ಅಧ್ಯಕ್ಷ, ಮಾಜಿ ಸಚಿವ ಬಿ.ಸೋಮಶೇಖರ್‌ರವರು 'ಸರ್ಕಾರದ ತೀರ್ಮಾನ ಸರಿಯಾದುದು. ಅಲ್ಲಿ ಸೌಹಾರ್ದತೆಗೆ ಹಾನಿ ಮಾಡುವ ಯಾವ ಆಚರಣೆಗಳೂ ಬೇಡ. ಕಾನೂನು, ಸಂವಿಧಾನ ಎಲ್ಲರಿಗೂ ಒಂದೇ. ಸರ್ಕಾರದ ನಿರ್ಧಾರಕ್ಕೆ ಬೆಂಬಲ' ಎಂದರು. ಮಾಜಿ ಸಚಿವ ಚಂದ್ರೇಗೌಡರು 'ಬಾಬಾ ಬುಡನ್ ಗಿರಿ ವಿವಾದ ಪರಿಹರಿಸಲು ಕಾನೂನು, ಕೋರ್ಟ್ ಆದೇಶ ಇದೆ. ಹಿಂದೆ ವಿಕೃತಿಗಳು ಆಗಿವೆ ನಿಜ. ಅವು ವೈಯಕ್ತಿಕ ನೆಲೆಯಲ್ಲಿ ಅಲ್ಲ. ರಾಜ್ಯ ಸರ್ಕಾರದ ಮಟ್ಟದಲ್ಲಿ ನಿರ್ಧಾರಗಳು. ಜಿಲ್ಲಾಡಳಿತದ ತೀರ್ಮಾನ. ಕಾನೂನು ಉಲ್ಲಂಘನೆಯಾಗಬಾರದೆಂದು ಜಿಲ್ಲಾಮಟ್ಟದ ಸಮಿತಿ ರಚಿತವಾಯಿತು. ಅದರ ನೇತೃತ್ವದಲ್ಲಿ ನಡೆದವು. ಈಗ ಪ್ರಸಕ್ತವಾಗಿ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶ ಸರಿ ಇದೆ' ಎಂದರು. ಇನ್ನೊಬ್ಬ ಮಾಜಿ ಸಚಿವ ಕಾಂಗ್ರೆಸ್ ಮುಖಂಡ ಸಗೀರ್ ಅಹ್ಮದ್ ರವರು 'ಅಲ್ಲಿ ದತ್ತಜಯಂತಿ ಶಾಂತಿಯಿಂದ ನಡೆಯುತ್ತಿದೆ ಎಂಬುದು ಹಸಿ ಸುಳ್ಳು. ಶೋಭಾ ಯಾತ್ರೆ, ಮೆರವಣಿಗೆ - ಬಹಿರಂಗ ಸಭೆಯಲ್ಲಿ ಅಲ್ಪಸಂಖ್ಯಾತರನ್ನು ಮಹಿಳೆಯರನ್ನು ಅತ್ಯಂತ ಅವಾಚ್ಯ, ಹೀನಾಯವಾದ ಘೋಷಣೆಗಳನ್ನು ಕೂಗಿ ಅವಮಾನಿಸಲಾಗುತ್ತಿದೆ. ಅತ್ಯಂತ ಹೇಸಿಗೆ ಹುಟ್ಟಿಸುವ ಘೋಷಣೆಗಳಿವೆ. ಹೊರಗಿನಿಂದ ಜನರನ್ನು ಕರೆದುತರುತ್ತಾರೆ. ಪ್ರಚೋದಿಸುತ್ತಾರೆ. ಇದರ ನಿರ್ವಹಣೆಗೆಂದು ಕನಿಷ್ಠ 100 ಕೋಟಿ ರೂಪಾಯಿಗಳು ಸರ್ಕಾರದಿಂದ ಖರ್ಚಾಗುತ್ತದೆ. ಹಿಂದೆ ಏನೋ ನಡೆದಿದೆ. ಈಗ ಅವಕಾಶ ಕೊಡಬೇಡಿ. ಈಗಿನ ಜಿಲ್ಲಾಡಳಿತ ಕ್ರಮಕ್ಕೆ ಬೆಂಬಲಿಸುತ್ತೇವೆ. ನಮಗೆ ಯಾವ ಧರ್ಮದ ಬಗೆಗೂ ಮತ್ಸರವಿಲ್ಲ. ನಾವೆಲ್ಲ ಒಂದೇ ಎಂದೇ ಭಾವಿಸಿದ್ದೇವೆ' ಎಂದರು. ಇದಕ್ಕೆ ಮೊದಲು ಮಾತನಾಡಿದ್ದ ಯಡಿಯೂರಪ್ಪನವರು ಅತ್ಯಂತ ಶಾಂತಿಯುತವಾಗಿ ದತ್ತಜಯಂತಿ ನಡೆಯುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಚಿಕ್ಕಮಗಳೂರಿನ ಜೆಡಿ(ಎಸ್) ಮುಖಂಡ ಬೋಜೇಗೌಡರವರು 'ಹಿಂದೂ ಆಗಿಯೇ ಹೇಳುವೆ, ಶೋಭಾ ಯಾತ್ರೆ - ಸಭೆಯ ದಿನಗಳಲ್ಲಿ ಕೂಗುವ ಘೋಷಣೆಗಳು ಕಿವಿಯಿಂದ ಕೇಳಲು ಆಗಲಾರದಂಥವು. ಅಲ್ಪಸಂಖ್ಯಾತರನ್ನು, ಮನುಷ್ಯರನ್ನು ಗುರಿಯಾಗಿರಿಸಿಕೊಂಡತಹವು. ಶಾಂತಿಯಿಂದ ಎಂದೂ ನಡೆದೇ ಇಲ್ಲ. ಅಲ್ಪಸಂಖ್ಯಾತರು ಪ್ರಚೋದಿತರಾಗಿ ಪ್ರತಿಕ್ರಿಯಿಸದೇ ಸುಮ್ಮನಿದ್ದಾರೆ ಎಂಬುದನ್ನು ಗಮನಿಸಬೇಕು. ಇದಕ್ಕೆ ತಡೆಯೊಡ್ಡಿ. ಜಿಲ್ಲಾಧಿಕಾರಿಗಳ ಆದೇಶ ಸರಿ ಇದೆ. ಪೂರ್ಣ ಬೆಂಬಲ ಎಂದವರು ಹೇಳಿದರು. ಜಾಫರ್ ಶರೀಫ್ 'ತಾವು ಬಾಲಕನಾಗಿದ್ದಾಗ ಬಾಬಾಬುಡನ್ ಗಿರಿ - ದರ್ಗಾಪೀಠದಲ್ಲಿ ಕೂದಲು ತೆಗೆಸಿದ್ದು ನೆನಪಿಸಿಕೊಂಡು 'ಇಲ್ಲಿ ಉರುಸ್ - ಆಚರಣೆ ಮಾತ್ರ ಸೀಮಿತವಾಗಿದ್ದವು. ನಮ್ಮಸರ್ಕಾರವೇ ಈಗಿನ ವಿಕೃತಿಗಳಿಗೆ ಪ್ರಚೋದನೆ ಕೊಟ್ಟೆವು. ನಾವು ಎಲ್ಲ ಧರ್ಮ ಗೌರವಿಸುತ್ತೇವೆ. ಮಹಿಳೆಯ ಬಗ್ಗೆ ಅವಾಚ್ಯ ಘೋಷಣೆ ಕೂಗುವ - ರೇಗಿಸುವ ಮೂಲಕ ಮುಂದಿನ ಪೀಳಿಗೆಗೆ ಎಂತಹ ಸಂಸ್ಕೃತಿ ಕಲಿಸುತ್ತೇವೆ ಎಂದು ಯೋಚಿಸಬೇಕು' ಎಂದರು. ಇನ್ನೊಬ್ಬ ಹಿರಿಯ ನಾಯಕ, ಮಾಜಿ ಸಭಾಪತಿ ಬಿ.ಎಲ್.ಶಂಕರ್‌ರವರು 'ವೈದಿಕ ಆಚರಣೆ ನಿರಾಕರಿಸಿದ್ದು ದತ್ತಪಂಥ, ಬಾಬಾ ಬುಡನ್‌ಗಿರಿ ಸೂಫಿ, ದತ್ತ ಪಂಥದ ಅನುಯಾಯಿಗಳಿಗೆ ಮಾತ್ರ ಶ್ರದ್ಧಾಕೇಂದ್ರ. ಈಗಿನ ಒಟ್ಟು ವಿಷಯ - ವಿವಾದಗಳ ಬಗ್ಗೆ ತಜ್ಞರಿಂದ ಸಲಹೆ ಪಡೆಯಬೇಕು. ಜಿಲ್ಲಾಡಳಿತ ಕ್ರಮ ವಹಿಸಲಿ. ಸಹಕಾರ ನೀಡುತ್ತೇವೆ. ದತ್ತ ಜಯಂತಿ ಶಾಂತಿಯುತವಾಗಿ ನಡೆಯಲಿ' ಎಂದರು. ಮಾಜಿ ಕೇಂದ್ರ ಸಚಿವ ಇಬ್ರಾಹಿಂ, ಶಾಸಕ ಕೃಷ್ಣಮೂರ್ತಿ, ಧರ್ಮೇಗೌಡ, ಸಹ ಮಾತನಾಡಿದರು. ಜೆಡಿ(ಎಸ್)ನ ಶಾಸಕ ಕೃಷ್ಣಮೂರ್ತಿ ಮಾತನಾಡುವಾಗ ಕೆ.ಎಸ್.ಈಶ್ವರಪ್ಪ ನಡುವೆ ಬಾಯಿ ಹಾಕಿದ್ದಲ್ಲದೆ ಅನಾಗರೀಕತನದಿಂದ ವರ್ತಿಸಿ ಎಲ್ಲಾರೆದುರೇ ಬೆದರಿಕೆ ಹಾಕಿದ್ದು ಹೇಸಿ ತರುವಂತಿತ್ತು. ಕಂದಾಯ ಸಚಿವರಾದ ಎಂ.ಪಿ.ಪ್ರಕಾಶ್ ರವರು 'ಇಡೀ ವಿವಾದದ ಬಗ್ಗೆ ಚರ್ಚೆ ಈಗಿಲ್ಲ. ಕಾನೂನಿಗೆ ಅನುಗುಣವಾಗಿಯೇ ನಡೆಯಬೇಕಾಗುತ್ತದೆ. ನಾವು ಎಡವದಂತೆ ನಡೆಯಬೇಕು. ಕೋರ್ಟ್ ಆದೇಶ - ಕಾನೂನು ಪ್ರಕಾರ ನಡೆಯಬೇಕು' ಎಂದರಲ್ಲದೆ
ಹೆಸರಿನ ಬಗೆಗಿನ ವಿವಾದವೇ ಅಥ
ಎಂದರು. ದಲಿತ ಸಂಘರ್ಷ ಸಮಿ
ಸೋಮಶೇಖರ್, ಸೌಹಾರ್ದ ವೇ
ಗೌರಿಲಂಕೇಶ್, ಸಿಪಿಐನ ಲೋ
ಮಾತನಾಡಿದರು. ಯಡಿಯೂರಪ್ಪ
'ಸಾವಿರಾರು ವರ್ಷಗಳಿಂದ ದತ್ತ ಜ
ಆಚರಿಸಲಾಗುತ್ತಿದೆ ಎಂದೂ ಮುಖ್ಯಮಂ
ಪ್ರತಿವರುಷ ನಡೆದಂತೆ ನಡೆಯಲಿ ಎಂ
ಎಂದು ತಿರುಚಲು ಯತ್ನಿಸಿದಾಗ ತೀವ್ರ ಪ್ರತಿ
ಎದುರಿಸಬೇಕಾಯ್ತು. ಸಭೆಯಲ್ಲಿ ಬಿಜೆಪಿ-
ಪರಿವಾರ ಮೂಲೆಗುಂಪಾಗುತ್ತಿರುವು
ಗಮನಿಸಿದ ಬಿಜೆಪಿ ರಾಮಚಂದ್ರೇ
ಕೆ.ಎಸ್.ಈಶ್ವರಪ್ಪನವರು ಜಗಳಕ್ಕೆ ಇಳಿ
ಒಂದು ಹಂತದಲ್ಲಿ ದತ್ತ ಜಯ
ಶಾಂತಿಯುತವಾಗಿಯೇ ನಡೆದಿದೆ ಎಂ
'ಪೋಲೀಸರಲ್ಲಿ ದಾಖಲೆಗಳಿವೆ, ಇಲ್ಲಿ ನೋಡಿ
ಕ್ಯಾಸೆಟ್' ಎಂದಾಗ ಬಾಯಿಮುಚ್ಚಬೇಕಾಯ
ಬಿಜೆಪಿ ಪಡೆ.

ಒಟ್ಟಾರೆ ಈ ಸಭೆ ಹಿಂದಿನ ವಿಕೃತಿಗ
ಸರಿಪಡಿಸುವ, ಸೌಹಾರ್ದತೆ ಪರಂಪರೆ ರಕ್ಷ
ದೃಢ ಕ್ರಮ ವಹಿಸಲು ಸರ್ಕಾರಕ್ಕೆ ಪೂ
ಬೆಂಬಲಿಸಿದ ಮಹತ್ವದ ಸಭೆ. ಹ
ಕೋಮುವಾದಿ ಅಜೆಂಡಾ ಹಿಡಿದು ರಾಜ್ಯಕ್ಕೆ
ಹಚ್ಚಲು ಯತ್ನಿಸುವ ಬಿಜೆಪಿ - ಸಂಘ ಪರಿವಾ
ಯತ್ನ ಪ್ರತ್ಯೇಕಗೊಂಡ ಸಂದರ್ಭ ತಂದಿದೆ. ಧ
ಸರ್ಕಾರ ಈಗ ನುಡಿದಂತೆ ದೃಢವ
ಕಾರ್ಯಪ್ರವೃತ್ತರಾಗಬೇಕಿದೆ.

ಒಂದು ದಿನದ ದತ್ತ ಜಯಂತಿ ಎಂದರೆ ಏನು? ಹೇಗೆ?

ವಿವರಗಳನ್ನು ಸಾರ್ವಜನಿಕರೆದುರು ತೆರೆದಿಡಿ - ಸಿಪಿಐ(ಎಂ) ಒತ್ತಾಯ

ಬಾಬಾ ಬುಡನ್‌ಗಿರಿಯಲ್ಲಿ ದತ್ತಜಯಂತಿಗೆ ಸಂಬಂಧಿಸಿ ಬಿಗಿ ನಿಲುವು ತಳೆಯುವುದಾಗಿ ಹೇಳಿದ ಸರ್ಕಾರ 1975 ರ ಹಿಂದಿನ ಆಚರಣೆಗಾಗಿ ಸೀಮಿತವಾಗುವಂತೆ ನೋಡಿಕೊಳ್ಳುವುದಾಗಿ ಹೇಳದೆ. ಈ ಬಾರಿ ಡಿಸೆಂಬರ್ 26 ರಂದು ಒಂದು ದಿನ ಮಾತ್ರ ಸರ್ಕಾರದ ಮುಜರಾಯಿ ಇಲಾಖೆಯಿಂದಲೇ ದತ್ತ ಜಯಂತಿ ಆಚರಿಸುವುದಾಗಿ ಪ್ರಕಟಿಸಿದ್ದು, ಇದು ಅಧಿಕೃತ ಎಂದಿದ್ದಾರೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ರಾಜೇಂದ್ರಕುಮಾರ್ ಕಠಾರಿಯವರು.
ಹಿಂದಿನಂತೆ ಬಜರಂಗದಳ, ವಿಶ್ವಹಿಂದೂ ಪರಿಷತ್‌ನವರ ಆಚರಣೆ ಅವಕಾಶ ಇಲ್ಲ ಎಂಬುದು ಅವರ ವಿವರಣೆ.
ಈ ದತ್ತ ಜಯಂತಿ ಹಿಂದೆ ಇತ್ತೇ? ಎಂಬ ಪ್ರಶ್ನೆ ಎದ್ದಿದೆ. ಇದ್ದರೆ ಅದು ಯಾವ ಸ್ವರೂಪದಲ್ಲಿತ್ತು? ಇದು 1975 ರ ಹಿಂದಿನ ಆಚರಣೆಗಳಲ್ಲಿ ನಮೂದಾಗಿದೆಯೇ? ಆದ್ದರಿಂದ ಈಗ ಆಚರಿಸುವ ದತ್ತ ಜಯಂತಿ ಹೇಗೆ ಆಚರಿಸಲಾಗುವುದು? ಆದ್ದರಿಂದ ಈ ಅಂಶಗಳನ್ನು ಕೂಡಲೇ ಸರ್ಕಾರ ಸ್ಪಷ್ಟಪಡಿಸಿ, ಜನರಿಗೆ ಮಾಹಿತಿ ನೀಡಿ ಜಾಗ್ರತಗೊಳಿಸಬೇಕಿದೆ. ಇಲ್ಲವಾದಲ್ಲಿ ಬಜರಂಗದಳ ಹೇಳಿದ್ದೇ ಸತ್ಯವೆಂಬಂತಾದೀತು. ಆದ್ದರಿಂದ ವಿಷಯ ಸತ್ಯವನ್ನು ಬಹಿರಂಗಪಡಿಸಿ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದೆ.
ದತ್ತ ಚೈತನ್ಯ ಯಾತ್ರೆ ಆರಂಭಿಸಿ ಪ್ರಚೋದನಾತ್ಮಕವಾಗಿ ಗಲಭೆ ಎಬ್ಬಿಸಲು ಹಾಗೂ ಪೊಲೀಸರ ಮೇಲೆ ಬಜರಂಗದಳದ ಕಾರ್ಯಕರ್ತರು ಹಲ್ಲೆ ಮಾಡಿದಾಗ ಕೊಪ್ಪದಲ್ಲಿ ಪೋಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಬಿಜೆಪಿ ಶಾಸಕರಾದ ಜೀವರಾಜ್‌ರವರನ್ನು ಬಂಧಿಸಿದ್ದಾರೆ. ಸಂಘ ಪರಿವಾರ ಬೇಕೆಂದೇ ಶಾಂತಿ-ಕಾನೂನು ವ್ಯವಸ್ಥೆ ಕದಡಲು ಯತ್ನಿಸುತ್ತಿದೆ. ಆಡಳಿತ ದೃಢವಾಗಿರುವಂತೆ ಕಾಣುತ್ತದೆ. ಇನ್ನೊಂದು ಪ್ರಕರಣದಲ್ಲಿ 1975 ರ ಹಿಂದಿನ ಆಚರಣೆ ಎಂದಾಗ, ದರ್ಗಾ-ಪೀಠದ ಹೊರ ಆವರಣದಲ್ಲಿ ನಿರ್ಮಾಣವಾಗಿದ್ದ ಮಸೀದಿಯನ್ನು ಸ್ಥಳಾಂತರಿಸಿದ್ದಾರೆ, ಅಲ್ಲಿ ಹಿಂದೆ ನಮಾಜು ಇರಲಿಲ್ಲ ಎಂಬುದು ಆಡಳಿತ ವಿವರಣೆ.
ಹೀಗಾಗಿ ಆ ಮಸೀದಿ ಕಟ್ಟಡವನ್ನು ಆಡಳಿತ ಕಛೇರಿಯೆಂದು ಪರಿವರ್ತಿತವಾಗದೆ.
ಆಡಳಿತ ವಸ್ತುನಿಷ್ಠವಾಗಿ, ನಿಷ್ಪಕ್ಷಪಾತವಾಗಿ ಕಾರ್ಯವೆಸಗುತ್ತಿದೆ ಎಂಬುದನ್ನು ತೋರಿಸುವಂತಹ ಬೆಳವಣಿಗೆಗಳು ಇವೆ.

ರಕ್ಷಣಾ ಸಾಮಗ್ರಿಗಳನ್ನು ಖರೀದಿಸುವ ವ್ಯವಹಾರ ಕುದುರಿಸುವ ಸಲುವಾಗಿ ಪಕ್ಷದ ಕಾರ್ಯಕರ್ತರಿಗೆ 2 ಲಕ್ಷ ತೆಗೆದುಕೊಳ್ಳುವಂತೆ ಆದೇಶ ನೀಡಿದ ಜಯಾ 'ಬಲಿಪಶು' ಹೇಗೆ ಆಗುತ್ತಾರೆ? ಗರಿ ಗರಿಯಾದ ನೋಟುಗಳನ್ನು, ನಗು ನಗುತ್ತಾ ಸ್ವೀಕರಿಸಿದ ಬಂಗಾರು ಲಕ್ಷ್ಮಣ್, ಮುಂದಿನ ಕಂತುಗಳನ್ನು ಅಮೆರಿಕಾದ ಡಾಲರುಗಳಲ್ಲೇ ನೀಡಿ ಎಂದು ಆದೇಶಿಸಿದ್ದರು.

ತೆಹೆಲ್ಕಾ: ಸ್ವಾಗತಾರ್ಹ ನಿಲುವು

ದೇಶದಾದ್ಯಂತ ಬಿರುಗಾಳಿ ಎಬ್ಬಿಸಿದ ತೆಹೆಲ್ಕಾ ಹಗರಣ, ರಕ್ಷಣಾ ಇಲಾಖೆಯಲ್ಲಿನ ವ್ಯಾಪಕ ಭ್ರಷ್ಟಾಚಾರಕ್ಕೆ ಹಿಡಿದ ಕನ್ನಡಿಯಾಗಿತ್ತು. ಆ ಸಂದರ್ಭದಲ್ಲಿ ಬಿಜೆಪಿಯ ಅಧ್ಯಕ್ಷಗಾದಿಯಲ್ಲಿದ್ದ ಬಂಗಾರು ಲಕ್ಷ್ಮಣ್ ಪದವಿ ಕಳೆದಕೊಂಡರೂ ಅವರ ವಿರುದ್ಧವಾಗಲೀ ಸಮತಾ ಪಾರ್ಟಿ ಅಧ್ಯಕ್ಷೆ ಜಯಾ ಜೇಟ್ಲಿ ವಿರುದ್ಧವಾಗಲೀ ಸಿಬಿಐ ತನಿಖೆ ನಡೆಸಿರಲಿಲ್ಲ. ಅಂದಿನ ರಕ್ಷಣಾ ಸಚಿವ ಹಾಗೂ ಸಮತಾ ಪಕ್ಷದ ಮುಖಂಡ ಜಾರ್ಜ್ ಫರ್ನಾಂಡಿಸ್‌ರವರ ಅಧಿಕೃತ ನಿವಾಸದಲ್ಲೇ ನಡೆದ ಈ ಹಗರಣಕ್ಕೆ ಸಂಬಂಧಿಸಿದಂತೆ, ಫರ್ನಾಂಡೀಸ್ ರಾಜೀನಾಮೆ ನೀಡಿದ್ದರು. ಆರೋಪಮುಕ್ತನಾಗುವವರೆಗೂ ಸಚಿವ ಪದವಿಗೆ ಹಿಂತಿರುಗುವುದಿಲ್ಲವೆಂದು ಆಶ್ವಾಸನೆ ನೀಡಿದ್ದರು. ಆದರೆ ಆರೋಪಮುಕ್ತರಾಗುವ ಮೊದಲೇ ಪುನಃ ಅಧಿಕಾರ ಹೊಂದಿ 'ಕಳಂಕಿತರ' ಸಾಲಿಗೆ ಸೇರಿದರು.





ಇದೀಗ ತೆಹೆಲ್ಕಾ ಹಗರಣ ನಡೆದ ಮೂರೂವರೆ ವರ್ಷಗಳ ಬಳಿಕ ಕೇಂದ್ರ ತನಿಖಾ ಆಯೋಗ (ಸಿಬಿಐ) ಅಂದಿನ ಬಿಜೆಪಿ ಅಧ್ಯಕ್ಷ ಬಂಗಾರು ಲಕ್ಷ್ಮಣ ಮತ್ತು ಸಮತಾ ಪಕ್ಷ (ಇಂದು ಜೆಡಿಯು)ದ ಅಧ್ಯಕ್ಷೆ ಜಯಾ ಜೇಟ್ಲಿ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿದೆ.

ತೆಹೆಲ್ಕಾ ಹಗರಣದಲ್ಲಿ ಬಹಿರಂಗಗೊಂಡ ವ್ಯಕ್ತಿಗಳ ಭ್ರಷ್ಟಾಚಾರದ ಕುರಿತು ತನಿಖೆ ನಡೆಸುವುದರ ಬದಲಾಗಿ ಅಂದಿನ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ, ಭ್ರಷ್ಟಾಚಾರ ಬಯಲಿಗೆಳೆದ ತೆಹೆಲ್ಕಾ ತಂಡದ ಉದ್ದೇಶವೇನಿತ್ತು ಎಂಬುದರ ಬಗ್ಗೆ ತನಿಖೆಯನ್ನು ನಡೆಸಲು ಆದೇಶಿಸಿತ್ತು. **ಕಳ್ಳತನ ಮಾಡಿದವರನ್ನು ಬಂಧಿಸುವ ಬದಲು ಕಳ್ಳನನ್ನು ತೋರಿಸಿದವನನ್ನೇ ಬಂಧಿಸಿದಂತಾಯ್ತು, ಬಿಜೆಪಿ ಸರಕಾರದ ನೀತಿ.**

ಇದೀಗ ಯುಪಿಎ ಸರಕಾರವು ಕೈಗೊಂಡ ಪರಿಣಾಮಕಾರಿ ಹೆಜ್ಜೆಗಳ ಪರಿಣಾಮವಾಗಿ ಸಿಬಿಐ ಐದು ಮೊಕದ್ದಮೆಗಳನ್ನು ದಾಖಲಿಸಿದೆ. ಇಂಡಿಯನ್ ಪೆನಲ್ ಕೋಡ್‌ನ ಭಾಗ 20-ಬಿ ಅಡಿಯಲ್ಲಿ ಕ್ರಿಮಿನಲ್ ಕುತಂತ್ರ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆಯ ಅಡಿಯಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ.

ಬಲಿಪಶು ಹೇಗೆ?

ಬಿಜೆಪಿ ಮತ್ತು ಜೆಡಿ(ಯು) ಮುಖಂಡರು ತಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ. ಜಯಾ ಜೇಟ್ಲಿಯವರು ಸಿಬಿಐಗೆ ಬರೆದ ಪತ್ರದಲ್ಲಿ ತನ್ನನ್ನು 'ಬಲಿಪಶು' ಮಾಡಲಾಗಿದೆ ಎಂದು ದೂರಿದ್ದರೆ. ರಕ್ಷಣಾ ಸಚಿವರ ಮನೆಯಲ್ಲೇ ಇದ್ದುಕೊಂಡು, ರಕ್ಷಣಾ ಸಾಮಗ್ರಿಗಳನ್ನು ಖರೀದಿಸುವ ವ್ಯವಹಾರ ಕುದುರಿಸುವ ಸಲುವಾಗಿ ಪಕ್ಷದ ಕಾರ್ಯಕರ್ತರಿಗೆ 2 ಲಕ್ಷ ತೆಗೆದುಕೊಳ್ಳುವಂತೆ ಆದೇಶ ನೀಡಿದ ಜಯಾ 'ಬಲಿಪಶು' ಹೇಗೆ ಆಗುತ್ತಾರೆ? ಗರಿ ಗರಿಯಾದ ನೋಟುಗಳನ್ನು, ನಗು ನಗುತ್ತಾ ಸ್ವೀಕರಿಸಿದ ಬಂಗಾರು ಲಕ್ಷ್ಮಣ್, ಮುಂದಿನ ಕಂತುಗಳನ್ನು ಅಮೆರಿಕಾದ ಡಾಲರುಗಳಲ್ಲೇ ನೀಡಿ ಎಂದು ಆದೇಶಿಸಿದ್ದರು. ಇವರು ಬಲಿಪಶುವೆ? ಇವರೆಲ್ಲ ಸೇರಿ ದೇಶವನ್ನು, ದೇಶದ ಜನತೆಯನ್ನು ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ. ಇವರನ್ನು ತನಿಖೆಗೆ ಗುರಿಪಡಿಸುವುದು ಮಾತ್ರವಲ್ಲ, ಆದಷ್ಟು **ಬೇಗನೆ ತನಿಖೆಯನ್ನು ಮುಗಿಸಿ, ಆರೋಪಿಗಳನ್ನು ಶಿಕ್ಷಿಸಿದಾಗಲೇ, ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ನಂಬಿಕೆ ಬರುತ್ತದೆ.** ಆ ಮೂಲಕ ರಾಜಕೀಯ ನೈತಿಕತೆಯನ್ನು ದೈನಂದಿನ ಬದುಕಿನಲ್ಲಿ ಅಳವಡಿಸಲು ಸಾಧ್ಯವಾಗುತ್ತದೆ.

ಹಸೆಯಲ್ಲಿ ಉಚ್ಚಿ

ತೆಹೆಲ್ಕ ಹಗರಣವು ಹೋದದ್ದು ಮುಚ್ಚಿ
ಮತ್ತೀಗಬರುತಿಹುದು ಸುರುಳಿಯನು ಬಿಚ್ಚಿ
ಈ ಸುದ್ದಿ ಬಂದೊಡನೆ ಕೆಲವೊಬ್ಬರ ಬೆಚ್ಚಿ
ಮಾಡಿಕೊಂಡರು ಗೊತ್ತೆ ಹಸೆಯಲ್ಲಿ ಉಚ್ಚಿ?

- ವಿಡಂಬಾರಿ

ಆಸಿಯನ್ ಶೃಂಗಸಭೆಯಲ್ಲಿ ಭಾರತ

ಆಸಿಯನ್ ದಕ್ಷಿಣಪೂರ್ವ ಏಶ್ಯಾದ ದೇಶಗಳ ಸಂಘಟನೆ (ASEAN - Association of South East Asian Nations) ಹತ್ತು ದೇಶಗಳು - ಲಾವೋಸ್, ಮಲೇಶ್ಯಾ, ಕಾಂಬೋಡಿಯಾ, ಇಂಡೋನೇಶ್ಯಾ, ಮ್ಯನಾಮಾರ್, ಫಿಲಿಪೈನ್ಸ್, ಸಿಂಗಾಪೂರ, ಥ್ಯಾಯ್ಲೆಂಡ್, ವಿಯೆಟ್ನಾಮ್ ಮತ್ತು ಬ್ರೂನೆಯ್. ಭಾರತ ಮೊದಲ ಬಾರಿಗೆ (ಚೀನಾ, ಜಪಾನ್ ಮತ್ತು ದಕ್ಷಿಣ ಕೊರಿಯಾ ಜತೆ) ಈ ಹತ್ತು ದೇಶಗಳ ಆರ್ಥಿಕ ಕೂಟದಲ್ಲಿ ಜತೆಗಾರನಾಗಿ ಭಾಗವಹಿಸುತ್ತಿದೆ.

ಈ ಬಾರಿ ಲಾವೋಸ್‌ನಲ್ಲಿ ನಡೆದ ಆಸಿಯನ್‌ನ ಶೃಂಗಸಭೆಯಲ್ಲಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಭಾಗವಹಿಸಿದ್ದರು. ಆ ಸಮಯದಲ್ಲಿ ಭಾರತ ಆಸಿಯನ್ ಕೂಟದ ಜತೆ ಶಾಂತಿ, ಪ್ರಗತಿ ಮತ್ತು ಸಮೃದ್ಧಿಗಾಗಿ ಅಂತರ್ರಾಷ್ಟ್ರೀಯ ಭಯೋತ್ಪಾದಕತೆ ನಿಗ್ರಹಕ್ಕೆ, ಸಹಭಾಗಿತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದು, ಚಾರಿತ್ರಿಕ ಬೆಳವಣಿಗೆ.

21 ನೇ ಶತಮಾನ ಏಶ್ಯಾದನ್ನಾಗಿ ಮಾಡುವತ್ತ...

ಭಾರತದ ಮೊದಲ ಪ್ರಧಾನಿ 1947 ರಲ್ಲಿ ಸಂಘಟಿಸಿದ ಏಶ್ಯನ್ ಸಂಬಂಧಗಳ ಸಮ್ಮೇಳನದಿಂದ ಏಶ್ಯನ್ ದೇಶಗಳ ನಡುವೆ ಸಹಕಾರ ಆರಂಭವಾಗಿತ್ತು. ಇದನ್ನು ಪ್ರಸ್ತಾಪಿಸುತ್ತಾ ಪ್ರಧಾನಿ ಮನಮೋಹನ್ ಸಿಂಗ್ 21ನೇ ಶತಮಾನವನ್ನು ಏಶ್ಯಾದ ಶತಮಾನ ಮಾಡಲು ಸಹಕಾರವನ್ನು ಬಲಪಡಿಸಬೇಕು ಎಂದರು.

ಸಹಭಾಗಿತ್ವ ಒಪ್ಪಂದ ಮತ್ತು ಕಾರ್ಯಯೋಜನೆ ಹಲವು ಮಹತ್ವದ ಹೊಸ ವಿಷಯಗಳನ್ನು ಒಳಗೊಂಡಿದೆ. ಡಬ್ಲ್ಯುಟಿಓ ದಂತಹ ಬಹು-ದೇಶೀಯ ವೇದಿಕೆಗಳಲ್ಲಿ ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿ ಎತ್ತಿ ಹಿಡಿಯಲು ಸಂಯೋಜಕ ಕಾರ್ಯಾಚರಣೆ, ಆರ್ಥಿಕ - ಆಹಾರ - ಶಕ್ತಿಯ ಭದ್ರತೆಯಂತಹ ಸಾಮಾನ್ಯ ಕಾಳಜಿಗಳ ಪರಿಹಾರಕ್ಕೆ ಸಹಕಾರ - ಇವುಗಳಲ್ಲಿ ಮುಖ್ಯವಾದವು.

ಚೀನಾ - ಭಾರತ ಪ್ರಧಾನಿ ಭೇಟಿ

ಈ ಶೃಂಗಸಭೆಯಲ್ಲಿ ಗಮನಸೆಳೆದ ಇನ್ನೊಂದು ಘಟನೆಯೆಂದರೆ ಚೀನಾ ಮತ್ತು ಭಾರತದ ಪ್ರಧಾನಿಗಳ 40 ನಿಮಿಷಗಳ ಭೇಟಿ 'ನಮ್ಮಿಬ್ಬರ ಕೈಕುಲುಕುವಿಕೆ ಇಡೀ ಜಗತ್ತಿನ ಗಮನ ಸೆಳೆಯಲಿದೆ' ಎಂಬ ಚೀನಿ ಪ್ರಧಾನಿ ಉದ್ಗಾರ ನಿಜವಾಗಿತ್ತು.

ಇಬ್ಬರು ಪ್ರಧಾನಿಗಳ ಭೇಟಿಯಲ್ಲಿ ಭಾರತ - ಚೀನಾ ವಾಣಿಜ್ಯವನ್ನು 12 ರಿಂದ 100 ಶತಕೋಟಿ ಡಾಲರಿಗೆ ಏರಿಸುವ ಗುರಿ ಬಗ್ಗೆ ನಿರ್ಧಾರವಾಯಿತು. ಗಡಿ ಸಮಸ್ಯೆಯನ್ನು ಚಾರಿತ್ರಿಕ ಸಮಸ್ಯೆ ಎಂದು ಗುರುತಿಸಿ ಆ ಬಗ್ಗೆ ಮಾತುಕತೆ ನಡೆಸುತ್ತಲೇ, ಬೇರೆ ರಂಗಗಳಲ್ಲಿ ಸಂಬಂಧ ಉತ್ತಮಪಡಿಸುವ ಪ್ರಯತ್ನಗಳಿಗೆ ಅದು ಅಡ್ಡಿಯಾಗಬಾರದು ಎಂಬ ಸಾಮಾನ್ಯ ಅಭಿಪ್ರಾಯ ವ್ಯಕ್ತವಾಯಿತು. ವಾಣಿಜ್ಯ, ತಂತ್ರಜ್ಞಾನ ಮತ್ತು ಆರ್ಥಿಕ ಕೊಡು-ಕೊಳ್ಳುವಿಕೆ



ಹೆಚ್ಚಾಗಬೇಕು ಎಂದೂ ನಿರ್ಧರಿಸಲಾಯಿತು.

ಮುಂದಿನ ವರ್ಷ ಮಾರ್ಚ್‌ನಲ್ಲಿ ಚೀನಿ ಪ್ರಧಾನಿಯವರ ಭಾರತ ಭೇಟಿಯನ್ನು ದೃಢಪಡಿಸಿದ್ದಲ್ಲದೆ, ಅದರ ವಿವರಗಳ ಬಗ್ಗೆ ಚರ್ಚಿಸಲಾಯಿತು. ನನ್ನ ಮುಂದಿನ ವರ್ಷದ ಕಾರ್ಯಕ್ರಮ ಪಟ್ಟಿಯಲ್ಲಿ ಭಾರತ ಭೇಟಿ ಅತ್ಯಂತ ಪ್ರಮುಖ ಕಾರ್ಯಕ್ರಮ. ಇದು ಇಡೀ ಜಗತ್ತಿನಲ್ಲಿ ಸಕಾರಾತ್ಮಕ ಬೆಳವಣಿಗೆಗೆ ಹಾದಿ ಮಾಡಿಕೊಡುತ್ತದೆ ಎಂದು ಚೀನಿ ಪ್ರಧಾನಿ ಹೇಳಿದರೆಂಬ ವರದಿಯಾಗಿದೆ.

ಕುವೆಂಪು

ಎತ್ತರದ ಸುಜ್ಞಾನ ಗುಡ್ಡ ತಾನಾಗಿ
ಪುಟ್ಟಪ್ಪ ಹೊರಬಂದ ರಾಷ್ಟ್ರಕವಿಯಾಗಿ
ಇಲ್ಲವಾದರೆ ಈ ಜಾತಿವಾದಿಗಳ ಕೂಟ
ದಕ್ಕಲೇ ಬಿಡುತ್ತಿರಲಿಲ್ಲ ಜ್ಞಾನ ಪೀಠ

ಕುವೆಂಪು ಹೇಳಿದ್ದು

ಆಂಗ್ಲೇಷರು ಭಾರತಕೆ ಬರುವುದಕು ಹಿಂದೆ
ಅಕ್ಷರವು ದಕ್ಕಿದ್ದು ಮೇಲ್ವರ್ಗಕ್ಕೊಂದೆ
ಈ ರೀತಿ ಜ್ಞಾನವನ್ನು ಬಚ್ಚಿಟ್ಟುಕೊಂಡು
ಶೂದ್ರನನು ತುಳಿ ತುಳಿದು ಮೆಟ್ಟಿದರು ಹಿಂದು

- ವಿಡಂಬಾರಿ

ಉದ್ಯೋಗ ಭರವಸೆ ಮಸೂದೆಗಾಗಿ ಧರಣಿ

ಕರ್ನಾಟಕ ಪ್ರಾಂತ ಕೂಲಿಗಾರರ ಸಂಘದ ಉಡುಪಿ ತಾಲೂಕು ಮತ್ತು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಡಿಸೆಂಬರ್10 ರಂದು 'ಸಾಮೂಹಿಕ ಧರಣಿ' ನಡೆಸುವ ಮೂಲಕ ಉದ್ಯೋಗ ಭರವಸೆ ಕಾಯ್ದೆಯನ್ನು ಜಾರಿಗೆ ತರುವಂತೆ ಒತ್ತಾಯಿಸಲಾಯಿತು.

ತಹಶೀಲ್ದಾರರ ಕಛೇರಿಯ ಎದುರು ನಡೆಸಲಾದ ಧರಣಿಯನ್ನು ಉದ್ಘಾಟನೆ ಮಾಡಿ ಮಾತನಾಡಿದ ಸ್ವಾತಂತ್ರ್ಯ ಹೋರಾಟಗಾರರಾದ ಶಂಭೂ ಶೆಟ್ಟಿಯವರು ಇಂದಿನ ಆಳುವ ವರ್ಗಗಳು ಯಾವುದೇ ಜನಪರವಾದ ಬೇಡಿಕೆಗಳಿಗೆ ಸ್ಪಂಧಿಸದಿರುವುದು ಶೋಚನೀಯ. ಅತ್ಯಂತ ಕೆಳ ಹಂತದ ಕೃಷಿ ಕಾರ್ಮಿಕರ ಬದುಕು ಸುಧಾರಿಸಲು ಮಸೂದೆ ಅಗತ್ಯವಿದೆ. 'ಗ್ರಾಮೀಣ ಉದ್ಯೋಗ ಖಾತರಿ ಮಸೂದೆ' ಬೇಗನೇ ಜಾರಿಗೆ ಬರಲಿ ಎಂದು ಅಗ್ರಹಿಸಿದರು.

ದೆಹಲಿಗೆ ಕಳುಹಿಸಲಿರುವ 'ಉದ್ಯೋಗ ಖಾತರಿ ಮಸೂದೆಗೆ 2 ಮೀಟರ್ ಉದ್ದದ ಬಟ್ಟೆಯಲ್ಲಿ ಸಹಿ ಹಾಕುವ ಕಾರ್ಯಕ್ರಮವನ್ನು ಇನ್ನೋರ್ವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹಿರಿಯ ವಕೀಲರೂ ಆದ ಯೋಗೀಶ ಹೊಳರವರು ಸಹಿ ಹಾಕುವ ಮೂಲಕ ನೆರವೇರಿಸಿ ಕೃಷಿ ಕಾರ್ಮಿಕರ ಬದುಕು ಉತ್ತಮಗೊಳ್ಳುವಂತಾಗಲು ಹೋರಾಟ ಯಶಸ್ವಿಯಾಗಲಿ ಎಂದರು.

ಧರಣಿಯ ನೇತೃತ್ವವನ್ನು ಡೇವಿಡ್ ಎ.ಕರ್ಕಡ, ದೋಗು ಸುವರ್ಣ, ಯು.ದಾಸಭಂಡಾರಿ, ಪಿ.ವಿಶ್ವನಾಥ ರೈ, ಎನ್.ಸಾಧು ಅಮಿನ್, ಹೆಚ್.ವಿಠಲ, ರಮೇಶ ಮೆಂಡನ್, ಕೃಷ್ಣ ಅಮೀನ್, ಗೋಡ್ವಿನ್ ಡೇನಿಸ್ ಫೆರ್ನಾಂಡಿಸ್, ಕೆ.ಚಂದಪ್ಪ ಮೊದಲಾದವರು ವಹಿಸಿದರು.

ಭಾಷಣಗಾರರೆಲ್ಲರೂ, ಕೃಷಿ ಕೂಲಿಗಾರರ ಶೋಚನೀಯವಾದ ಬದುಕಿಗೆ ಕೊನೆಯಾಗುವಂತೆ ಈಗ ಸಂಸತ್ತಿನ ಮುಂದೆ ತರಲಾಗುವ ಗ್ರಾಮೀಣ ಉದ್ಯೋಗ ಖಾತರಿ ಮಸೂದೆಯನ್ನು ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೊಳಿಸುವಂತೆ ಒತ್ತಾಯಿಸಿದರು.

ಮುಂಬರುವ ಏಪ್ರಿಲ್‌ನ ಮೊದಲೆರಡು ವಾರಗಳಲ್ಲಿ ಸಿಪಿಐ(ಎಂ)ನ ಹದಿನೆಂಟನೆ ಮಹಾಧಿವೇಶನ ನಡೆಯಲಿದೆ. ಪಕ್ಷದಲ್ಲಿ ನಿರ್ಣಯ ಕೈಗೊಳ್ಳುವ ಅತ್ಯುನ್ನತ ಸಂಸ್ಥೆಯಾದ ಈ ಮಹಾಧಿವೇಶನ ವಿಶ್ವ ಇತಿಹಾಸದ ಒಂದು ಅತ್ಯಂತ ನಿರ್ಣಾಯಕ ಸಂದರ್ಭದಲ್ಲಿ ನಡೆಯುತ್ತಿದೆ. ಇದು ಸದ್ಯದ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸನ್ನಿವೇಶಗಳಿಂದ ಉಂಟಾಗಿರುವ ವಿವಿಧ ಪ್ರಶ್ನೆಗಳನ್ನು ಚರ್ಚಿಸಿ ಇಂದಿನ ಸವಾಲುಗಳನ್ನು ಎದುರಿಸಲು ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವ ಪಕ್ಷದ ಮಹಾಧಿವೇಶನದ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದೆ.



ಈ ಬಗ್ಗೆ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ವಿಶ್ಲೇಷಿಸಿದ್ದಾರೆ.

ಹದಿನೆಂಟನೇ ಸಿಪಿಐ(ಎಂ) ಮಹಾಧಿವೇಶನ...

ಪ್ರಸಕ್ತ ಸನ್ನಿವೇಶ ನಮ್ಮ ಮೇಲೆ ಭಾರಿ ಕರ್ತವ್ಯಗಳನ್ನು ವಹಿ...

ನಮ್ಮ ಪಕ್ಷದ ಕಾರ್ಯನಿರ್ವಹಣೆಯ ವಿಧಾನದಂತೆ ನಮ್ಮ ಹದಿನೆಂಟನೆ ಮಹಾಧಿವೇಶನದಲ್ಲಿ ಏನೇನು ನಿರ್ಣಯಗಳನ್ನು ಕೈಗೊಳ್ಳುತ್ತವೆಯೋ, ಅವು ಮುಂದಿನ ಸುಮಾರು ಮೂರು ವರ್ಷಗಳಲ್ಲಿ ಮುಂದಿನ ಮಹಾಧಿವೇಶನದವರೆಗೆ ವಿವಿಧ ಘಟನಾವಳಿಗಳ ಸಂದರ್ಭದಲ್ಲಿ ಸಿಪಿಐ(ಎಂ) ಅನುಸರಿಸಬೇಕಾದ ಕಾರ್ಯತಂತ್ರಗಳಿಗೆ ಮಾರ್ಗದರ್ಶನ ನೀಡುತ್ತವೆ.

ಅಮೇರಿಕಾದ ಯುದ್ಧಕೋರತನ ಮತ್ತು ಪ್ರತಿರೋಧ

ಬಹಳ ನಿರ್ಣಾಯಕವಾಗಿರುವುದು ಇಂದಿನ ಅಂತರ್ರಾಷ್ಟ್ರೀಯ ಸನ್ನಿವೇಶ. ಅಮೇರಿಕಾ ಮೂರನೆ ಜಗತ್ತಿನ ದೇಶಗಳ ಮೇಲೆ ಮತ್ತು ಸಂಕ್ರಮಣ ಸ್ಥಿತಿಯಲ್ಲಿದೆ ಎನ್ನಲಾಗುವ ಆರ್ಥಿಕಗಳ ಮೇಲೆ ತನ್ನ ಯಜಮಾನಿಕೆ ಹೇರುವ ಭರಾಟೆಯುನ್ನು ತೀವ್ರಗೊಳಿಸುತ್ತಿದೆ. ಈ ಭರಾಟೆ ಎರಡನೇ ಮಹಾಯುದ್ಧ ಮುಗಿದಂದಿನಿಂದಲೂ ಇದ್ದಿರುವಂತದ್ದೇ ಆದರೂ ಸೋವಿಯತ್ ಒಕ್ಕೂಟದ ಪತನದ ನಂತರ ಅದು ತೀವ್ರಗೊಂಡಿದೆ. ಏಕೆಂದರೆ ಅದುವರೆಗೆ ಸೋವಿಯೆತ್ ಒಕ್ಕೂಟ ಸಾಮ್ರಾಜ್ಯಶಾಹೀ ತಂತ್ರಗಳಿಗೆ ಎದುರಾಗಿ ಸರಿಗಟ್ಟುವ ಶಕ್ತಿಯಾಗಿ ಕೆಲಸ ಮಾಡುತ್ತಿತ್ತು. ಸೋವಿಯೆತ್ ಒಕ್ಕೂಟವನ್ನು ಕಳಕೊಂಡದ್ದು ಹಿಂದಿನ ಸೋವಿಯೆತ್ ಗಣತಂತ್ರಗಳನ್ನು ಮತ್ತು ಹಿಂದಿನ ಪೂರ್ವ ಯುರೋಪಿನ ಸಮಾಜವಾದಿ ದೇಶಗಳನ್ನು ದಿವಾಳಿಯೆಬ್ಬಿಸುವ ಕ್ರಮಗಳನ್ನು ಘೋಷಿಸಿದೆಯಷ್ಟೇ ಅಲ್ಲ, ಮೂರನೆ ಜಗತ್ತಿನ ದೇಶಗಳನ್ನು ಧಾಳಿಗಳಿಗೆ ತೆರೆದಿಟ್ಟಿದೆ.

ಸಾಮ್ರಾಜ್ಯಶಾಹೀ ಬಣ ಈ ಪರಿಸ್ಥಿತಿಯ ಪೂರ್ಣ ಪ್ರಯೋಜನ ಪಡೆದು ಅಭಿವೃದ್ಧಿಶೀಲ ದೇಶಗಳ ಮೇಲೆ ಷರತ್ತುಗಳನ್ನು ಹೇರುತ್ತಿವೆ. ಕಳೆದ ಹನ್ನೆರಡು ವರ್ಷಗಳಲ್ಲಿ ಬ್ರೆಟನ್ ವುಡ್ಸ್ ಸಂಸ್ಥೆಗಳ ಮೂಲಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಷರತ್ತುಗಳನ್ನು ಹೇರುತ್ತಿರುವುದನ್ನು ನಾವು ಕಂಡಿದ್ದೇವೆ; ಸೋವಿಯೆತ್ ಒಕ್ಕೂಟದ ಅವಸಾನದ ನಂತರ ಉರುಗ್ವೇ ಸುತ್ತಿನ ಮಾತುಕತೆಗಳ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ಡಬ್ಲ್ಯು.ಟಿ.ಒ ಮೂಲಕವು ಒಂದು ಮಟ್ಟದವರೆಗೆ ಹೀಗೆ ಮಾಡಲಾಗುತ್ತಿದೆ. ಅದೇ ವೇಳೆಗೆ ಅಮೇರಿಕಾ ವಿಪರೀತ ಆಕ್ರಮಣಕಾರಿಯಾಗುತ್ತಿದ್ದು ಮೂರು ಯುದ್ಧಗಳನ್ನು (ಯುಗೋಸ್ಲಾವಿಯಾ, ಅಫಘಾನಿಸ್ತಾನ ಮತ್ತು ಇರಾನ್ ವಿರುದ್ಧ) ನಡೆಸಿದೆ. ಅಲ್ಲದೆ ಅಫಘಾನಿಸ್ತಾನದ ಮೇಲೆ ಅದರ ಮೊದಲು ಸೂಡಾನ್ ಮೇಲೆ ಅಲ್ಪ ಕಾರಣಕ್ಕಾಗಿ ಬಾಂಬು ಹಾಕಿದೆ.

ಅಲ್ಲದೆ, ಈ ಶತಮಾನದ ಆರಂಭದಲ್ಲಿ ಅಮೇರಿಕನ್ ಅಧ್ಯಕ್ಷ ಜಾರ್ಜ್ ಬುಶ್ ಒಂದು ವಿಚಿತ್ರ ಸಿದ್ಧಾಂತ ಪ್ರತಿಪಾದಿಸಿದ್ದಾರೆ. "ದುಷ್ಟರ ಅಕ್ಷ" - ಅಮೇರಿಕನ್ ಆದೇಶಗಳಿಗೆ ತಲೆಬಾಗಲು ಸಿದ್ಧವಿಲ್ಲದ ದೇಶಗಳನ್ನು ಹೆದರಿಸಿ-ಬೆದರಿಸಿ ಬಗ್ಗಿಸುವ ಪ್ರಯತ್ನ ಇದು. ಈಗ ಬುಶ್ ಮತ್ತೆ ಶ್ವೇತಭವನಕ್ಕೆ ಚುನಾಯಿತರಾಗಿರುವುದು ಹಲವು ಸಾರ್ವಭೌಮ ದೇಶಗಳಿಗೆ ಬೆದರಿಕೆಯನ್ನು ಹಲವು ಪಾಲು ಹೆಚ್ಚಿಸಿದೆ. ಅಮೇರಿಕನ್ ಯುದ್ಧಕೋರರು ಈಗಾಗಲೇ ಇರಾಕನ್ನು ಧೂಳೀಪಟ ಮಾಡಿದ್ದಾರೆ. ಬಾಗ್ದಾದ್‌ನಲ್ಲಿ ಒಂದು ಕೈಗೊಂಬೆ ಸರಕಾರವನ್ನು ಭದ್ರವಾಗಿ ಇರಿಸಿದ ಮೇಲೆಯೇ ಹಿಂದಿರುಗುವ ಯೋಚನೆಯಲ್ಲಿದ್ದಾರೆ. ಅದೇ ವೇಳೆಗೆ ಪರಮಾಣು ಪ್ರಶ್ನೆಯ ಮೇಲೆ ಉತ್ತರ ಕೋರಿಯಾಕ್ಕೆ ಮತ್ತೆ ಬೆದರಿಕೆ ಹಾಕಿದ್ದಾರೆ. ಇತ್ತೀಚೆಗೆ ಇರಾನನ್ನೂ ಈ ಪ್ರಶ್ನೆಯ ಮೇಲೆ ಬೆದರಿಸಲಾರಂಭಿಸಿದ್ದಾರೆ. ಇದಕ್ಕೆ ಅವರು ವಿಶ್ವಸಂಸ್ಥೆಯ ಅಡಿಯಿರುವ ಅಂತರ್ರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (IAEA)ಯನ್ನು ದುರುಪಯೋಗಪಡಿಸಿಕೊಳ್ಳಲು ಕೈಲಾದ ಪ್ರಯತ್ನವನ್ನೆಲ್ಲಾ ನಡೆಸಿದರು. ಈರಾನ್ ಗುಪ್ತ ರೀತಿಯಲ್ಲಿ ಪರಮಾಣು ಅಸ್ತ್ರ ಕಾರ್ಯಕ್ರಮದಲ್ಲಿ ತೊಡಗಿದೆ ಎಂದು ಈ ಸಂಸ್ಥೆಯ ಮುಖ್ಯಸ್ಥರಾದ ಮಹಮ್ಮದ್ ಎಲ್‌ಬರದ್ಯೆರವರು ಒಂದು ವರದಿ ನೀಡುವಂತೆ ಬಲವಂತ ಮಾಡುವುದು, ಅದನ್ನು ನೆಪವಾಗಿಟ್ಟುಕೊಂಡು ಇರಾನಿನ ಮೇಲೆ ಧಾಳಿ ಮಾಡುವುದು ಅವರ ಉದ್ದೇಶವಾಗಿತ್ತು. ಆದರೆ ಅವರು ಇಂತಹ ಕಾರ್ಯಕ್ರಮದ ಬಗ್ಗೆ ಏನೂ ಸಾಕ್ಷ್ಯ ದೊರೆತಿಲ್ಲ ಎಂದಾಗ ಅಮೇರಿಕನ್‌ರಿಗೆ ಭಾರೀ ಸಿಟ್ಟು ಬಂದು ಆತನ ಮೇಲೆಯೇ ಈಗ ಕಣ್ಣಿಡಲಾಗಿದೆ. ಆತ ಇರಾನೀ ರಾಜತಾಂತ್ರಿಕರೊಡನೆ ನಡೆಸಿದ ದೂರವಾಣಿ ಮಾತುಗಳನ್ನು ಪರೀಕ್ಷಿಸಿ ಆತ ಮೂರನೆ ಅವಧಿಗ ಆ ಸಂಸ್ಥೆಯ ಮುಖ್ಯಸ್ಥನಾಗಿ ಮುಂದುವರೆಯದಂತೆ ತಡೆಯಲು ಸಾಧ್ಯವೇ ಎಂದು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ಒಂದು ಅಪಪ್ರಚಾರವನ್ನೇ ನಡೆಸಲಾಗಿದೆ ಎಂದು 'ವಾಶಿಂಗ್‌ಟನ್ ಪೋಸ್ಟ್' ಪತ್ರಿಕೆ ಹೇಳಿದೆ. ಇಲ್ಲಿ ಕಾಣಬರುತ್ತಿರುವುದರಲ್ಲಿ ಹೊಸತೇನೂ ಇಲ್ಲ. ಬಹಳ ಸಮಯದಿಂದ ಅಮೇರಿಕಾ ವಿಶ್ವಸಂಸ್ಥೆಯನ್ನು ಹೈಜಾಕ್ ಮಾಡಲು ಪ್ರಯತ್ನಿಸಿದೆ, ಕೆಲವೊಮ್ಮೆ ಯಶಸ್ವಿಯೂ ಆಗಿದೆ. 1991ರ ಮೊದಲ ಕೊಲ್ಲಿ ಯುದ್ಧದ ನಂತರ ಈ ವಿಶ್ವಸಂಸ್ಥೆಯ ಮೂಲಕವೇ ಇರಾಕ್ ವಿರುದ್ಧ ರಾಕ್ಷಸೀ ನಿರ್ಬಂಧಗಳನ್ನು ಹೇರಲು ಅದಕ್ಕೆ ಸಾಧ್ಯವಾಗಿತ್ತು. ನಂತರ ಅಲ್ಲಿ ಸಾಮೂಹಿಕ ವಿನಾಶದ ಅಸ್ತ್ರಗಳಿವೆಯೇ ಎಂದು ಪರಿಶೀಲಿಸಲು ಒಂದು ತನಿಖಾ ತಂಡವನ್ನು ಕಳಿಸುವಂತೆ ಮಾಡಲಾಯಿತು. ಇಂತಹ ಯಾವುದೇ ಅಸ್ತ್ರ ಕಂಡುಬರಲಿಲ್ಲ ಎಂದು ಆ ತಂಡ ನೀಡಿದ ವರದಿಯನ್ನು ಮೂಲೆಗೆ ತಳ್ಳಿ ಮಾರ್ಚ್ 2003 ರಲ್ಲಿ ಇರಾಕ್ ಮೇಲೆ ಧಾಳಿ ನಡೆಸಲಾಯಿತು. ಒಂದಂತೂ ಖಂಡಿತ- ಈ ತಂಡದ ಮುಖ್ಯಸ್ಥ ಹಾಗೂ ಸ್ವೀಡನ್ನಿನ ರಾಜತಾಂತ್ರಿಕ ಹಾನ್ಸ್ ಬ್ಲಿಕ್ಸ್ ತಾನು ಬರೆಯುತ್ತಿರುವ ಪುಸ್ತಕವನ್ನು ಪ್ರಕಟಿಸಿದ ದಿನ ಜಗತ್ತು ಅಮೇರಿಕನ್ ಯುದ್ಧಮಂತ್ರದ ವಿರುದ್ಧ ಒಂದು ದೊಡ್ಡ ಬೊಬ್ಬೆಯನ್ನೇ ಕಾಣಲಿದೆ.

ಹರ್ಕಿಶನ್‌ಸಿಂಗ್ ಸುರ್ಜಿತ್

ಈಗ ಇರಾನಿನ ವಿರುದ್ಧ ತನ್ನ ದುಷ್ಟ ಹಂಚಿಕೆಗಳಿಗಾಗಿ ಪರಮಾಣು ಸಂಸ್ಥೆ IAEA ಯನ್ನು ಹೈಜಾಕ್ ಮಾಡಲು ಅಮೇರಿಕಾ ಪ್ರಯತ್ನಿಸುತ್ತಿದೆ. ಈಜಿಪ್ತಿನ ರಾಜತಾಂತ್ರಿಕ ಮಹಮ್ಮದ್ ಎಲ್‌ಬರದ್ಯೆ ಹಿಂದೆ ಹಾನ್ಸ್ ಬ್ಲಿಕರ್ ಇರಾಕ್‌ಗೆ ಹೋದ ನಂತರ ಸದಸ್ಯರಾಗಿದ್ದು ಇರಾಕ್ ಕುರಿತ ಗುಪ್ತ ವರದಿಗಳನ್ನು ಬಹಿರಂಗವಾಗಿ ಪ್ರಶ್ನಿಸಿದ್ದು ಅಮೇರಿಕಾಕ್ಕೆ ಕೋಪ ತಂದಿತ್ತು.

ನಾಟೋವನ್ನು ವಿಸ್ತರಿಸಿದ ನಂತರ ಅಮೇರಿಕಾ ಇತ್ತೀಚೆಗೆ ಉಕ್ರೇನನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದೆ. ಪ್ಯಾಲೆಸ್ತೀನಿಯನ್ನರ ಮೇಲೂ ಅವರ ಹಿತಾಸಕ್ತಿಗಳ ವಿರುದ್ಧವಾದ, ಇಸ್ರೇಲಿಗಳು ಇಷ್ಟಪಡುವ ಒಂದು ಒಪ್ಪಂದವನ್ನು ಹೇರಲು ಪ್ರಯತ್ನಿಸುತ್ತಿದ್ದಾರೆ. ಈ ಸಂದರ್ಭದಲ್ಲೇ ವಿಶ್ವಸಂಸ್ಥೆಯ ಸುಧಾರಣೆಯ ಪ್ರಶ್ನೆ ಮಹತ್ವದ್ದಾಗುತ್ತದೆ. ನಾವು ಈಗ ಚರ್ಚಿಸುತ್ತಿರುವ ಸುಧಾರಣೆಗಳು ಬಹಳ ಹಂಗಾಮಿ ಅಥವಾ ತೀವ್ರವಾದುದೇನೂ ಅಲ್ಲ. ವಿಟೋ ಅಧಿಕಾರವನ್ನು ತೆಗೆದೇಬಿಡಬೇಕು, ಭದ್ರತಾ ಮಂಡಳಿಯ ಸಾಮಾನ್ಯ ಅಸ್ಸೆಂಬ್ಲಿಯ ಒಂದು ಕಾರ್ಯಕಾರಿ ಸಂಸ್ಥೆಯಾಗಿಯಷ್ಟೇ ಕೆಲಸ ಮಾಡಬೇಕು, ಯುದ್ಧ ಮತ್ತು ಶಾಂತಿ ಕುರಿತಾದ ಅದರ ಎಲ್ಲಾ ನಿರ್ಣಯಗಳನ್ನು ಸಾಮಾನ್ಯ ಅಸ್ಸೆಂಬ್ಲಿ ಸ್ಥಿರೀಕರಿಸಬೇಕೆಂದಿರಬೇಕು ಎಂಬುದು ಹಲವರ ಅಭಿಪ್ರಾಯ. ಆದರೂ ಈಗ ಪ್ರಸ್ತಾಪಿಸಿರುವ ಸುಧಾರಣೆಗಳನ್ನು ವಿಶ್ವಸಂಸ್ಥೆಯ ವ್ಯವಸ್ಥೆಯ ಸುಧಾರಣೆಯ ಹೋರಾಟದಲ್ಲಿ ಒಂದು ಮಧ್ಯಂತರ ಹೆಜ್ಜೆ ಎಂದು ಪರಿಗಣಿಸಬಹುದು

ಎಲ್ಲವೂ ಕರಾಳವಾಗಿಲ್ಲ

ಆದರೆ ಅಂತರ್ರಾಷ್ಟ್ರೀಯ ರಂಗದಲ್ಲಿ ಎಲ್ಲವೂ ಕರಾಳವಾಗಿಲ್ಲ. ಅಮೇರಿಕಾದ ಯಜಮಾನಿಕೆಯ ಭರಾಟೆ ತೀವ್ರಗೊಳ್ಳುತ್ತಿರುವಂತೆ ವಿಶ್ವದ ವಿವಿಧ
ಭಾಗಗಳಲ್ಲಿ ಅದರ ವಿರುದ್ಧ ಪ್ರ...
ತೀವ್ರಗೊಳ್ಳುತ್ತಿವೆ. ಲ್ಯಾಟಿನ್ ಅಮೆ...
ಈಗ ಸಾಮ್ರಾಜ್ಯಶಾಹಿ- ವಿರೋಧಿ...
ಕೋಟೆಯಂತೆ ಕಾಣುತ್ತಿದೆ. ಅಮ...
ಮಧ್ಯಪ್ರವೇಶಿಸಲು ಪ್ರಯತ್ನಿಸಿದ...
ಸೋಲುಗಳನ್ನು ಅನುಭವಿಸಬೇಕಾ...
ವೆನೆಜುವೆಲಾ, ಬ್ರೆಜಿಲ್, ಬೊಲಿವಿ...
ಈಗ ಉರುಗ್ವೇ ಅಮೇರಿಕಾ- ವಿ...
ಗಂಭೀರ ಪರಾಭವ ಅನುಭವಿಸಿ...
ಪಟ್ಟಿಯಲ್ಲಿ ಸೇರಿದೆ.

ಅದೇ ವೇಳೆಗೆ ಬೇರೆ ಭಾ...
ಸಾಮ್ರಾಜ್ಯಶಾಹಿ- ವಿರೋಧಿ...
ಒಂದಿಲ್ಲೊಂದು ರೀತಿಯಲ್ಲಿ ಹೆಚ್ಚುತ್ತಿ...
ವಿರುದ್ಧ ಅಮೇರಿಕನ್ ಯುದ್ಧವನ್ನು...
ವಿಶ್ವದ ಹೆಚ್ಚಿನ ರಾಜಧಾನಿಗಳ...
ಮತಪ್ರದರ್ಶನಗಳು ನಡೆದಿವೆ. ಕ...
ವರ್ಷಗಳಿಂದ ಐಎಂಎಫ್ ಮತ್ತು ವಿ...
ವಾರ್ಷಿಕ ಸಭೆಗಳೂ ಕೋ...
ಪ್ರದರ್ಶನಗಳನ್ನು ಎದುರಿಸಬೇಕಾಗಿ...
ಲ್ಯಾಟಿನ್ ಅಮೇರಿಕಾ, ಯುರೋ...
ಏಷ್ಯಾದಲ್ಲಿ ಪ್ರಾದೇಶಿಕ ವೇದಿಕೆಗ...
ಮುಂಬೈಯಲ್ಲಿ ವಿಶ್ವ ಸಾಮಾಜಿ...
ವಿಶ್ವದಾದ್ಯಂತ ಜನಗಳನ್ನು...
ಸಾಮ್ರಾಜ್ಯಶಾಹೀ ವಿರೋಧಿ ಸಿಟ್ಟು...
ಕ್ರೋಧವನ್ನು ಎತ್ತಿ ತೋರಿದೆ.

ನಿಜ, ಈ ಹೆಚ್ಚಿನ ಹೋರಾ...
ಸಮನ್ವಯತೆ ಇಲ್ಲದೆ ನಡೆಯುತ್ತಿವೆ, ...
ದಿಕ್ಕು ಇಲ್ಲ. ಆದರೆ ಸಂಕೇತಗಳು ಸ್ಪ...
ಈ ಪ್ರತಿಭಟನಾ ಕಾರ್ಯಾಚರ...
ಒಂದಿಲ್ಲೊಂದು ದಿನ ಏಕೀಭವಿಸಿ ಒಂ...
ಸಾಮ್ರಾಜ್ಯಶಾಹಿ-ವಿರೋಧಿ ಸ್ವರ...
ಪಡೆಯಲೇಬೇಕು. ಘಟನೆಗಳೇ ಈ ದಿ...
ಕಾರ್ಯಾಚರಣೆಗಳು ನಡೆಯುವಂತೆ ಮ...
ಇದು ಎಷ್ಟು ಬೇಗನೇ ಸಂಭವಿಸುತ್ತದೆ...
ವಿಶ್ವದ ದೇಶಗಳಿಗೆ ಒಳ್ಳೆಯದು. ನಮ್ಮ...
ಸಿಪಿಐ(ಎಂ) ಮತ್ತು ಇತರ ಎಡಪಕ್ಷ...
ಪ್ರಕ್ರಿಯೆಯ ವೇಗವನ್ನು ಹೆಚ್ಚಿಸಲು...

ಬಿಜೆಪಿ ಅಧಿಕಾರಕ್ಕೇರುವುದನ್ನು ವಿಫಲಗೊಳಿಸಿ ಯುಪಿಎ ಸರ...





ಪ್ರಯತ್ನಗಳನ್ನೆಲ್ಲಾ ಮಾಡುತ್ತಿವೆ.

ರಾಷ್ಟ್ರೀಯ ಸನ್ನಿವೇಶ

ರಾಷ್ಟ್ರೀಯ ಸನ್ನಿವೇಶಕ್ಕೆ ಬರುವು...
ಮಾರ್ಚ್ 2002 ರಲ್ಲಿ ಹೈದರಾಬಾದಿನ...
ಮಹಾಧಿವೇಶನದ ವೇಳೆಗೆ ಇದ್ದ ಪರಿ...
ಈಗಿನ ಪರಿಸ್ಥಿತಿ ತೀರಾ ಭಿನ್ನವಾಗಿದೆ. ...
ಒಂದು ಮೈತ್ರಿಕೂಟದ ಮುಖ್ಯಸ್ಥನಾಗಿದ್ದ...
ಆಳುತ್ತಿತ್ತು. ಬಿಜೆಪಿ ಆಳ್ವಿಕೆಯ ಗುಜರಾತದ...
ಸರಕಾರದ ಪೂರ್ಣ ಬೆಂಬಲದ...
ಮುಸ್ಲೀಮರ ಭೀಕರ ಹತ್ಯಾಕಾಂಡ ನಡೆ...
ಅಷ್ಟೇ ಅಲ್ಲ, ಈ ಹತ್ಯಾಕಾ...

ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟ





ಸೂತ್ರದಾರನಾಗಿದ್ದ ನರೇಂದ್ರ ಮೋದಿಯವರನ್ನು ಕೇಂದ್ರದಲ್ಲಿ ಆಳುತ್ತಿದ್ದ ವಾಜಪೇಯಿ, ಅಡ್ವಾಣಿಯವರಿಂದ ಹಿಡಿದು ಫರ್ನಾಂಡೀಸ್ ರವರೆಗೆ ಎಲ್ಲರೂ ಹಾಡಿಹೊಗಳುತ್ತಿದ್ದರು.

ಆದರೆ ಈಗ ನಮ್ಮ ಜನತೆ ಆ ಮೈತ್ರಿಕೂಟವನ್ನು ಫ್ಯಾಸಿಸ್ಟ್ ಮಾದರಿಯ ಆರ್‌ಎಸ್.ಎಸ್ ತನ್ನ ಕೋಮುವಾದಿ, ಸೋದರ ಹತ್ಯಾಕಾರಿ ಅಜೆಂಡಾವನ್ನು ತೂರಿಸಲು ಬಳಸುತ್ತಿದ್ದ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿದ್ದಾರೆ. ಈ ವರ್ಷ ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರರು ಪರಾಜಯವುಂಡಿದ್ದಾರೆ. ಎಷ್ಟೆಂದರೆ 1977 ರ ನಂತರ ಎಂದೂ ಇಷ್ಟೊಂದು ಸಂಖ್ಯೆಯಲ್ಲಿ ಮಂತ್ರಿಗಳು ಮಣ್ಣುಮುಕ್ಕಿದ್ದಿಲ್ಲ. ಎನ್‌ಡಿಎ ಸರಕಾರವನ್ನು ಹೊರಗಿನಿಂದ ಬೆಂಬಲಿಸುತ್ತಿದ್ದ ತೆಲುಗು ದೇಶಂ ಪಕ್ಷ ಆಂಧ್ರಪ್ರದೇಶದಲ್ಲಿ ಲೋಕಸಭಾ ಚುನಾವಣೆಗಳಲ್ಲೂ, ವಿಧಾನಸಭಾ ಚುನಾವಣೆಗಳಲ್ಲೂ ಭಾರೀ ಸೋಲು ಅನುಭವಿಸಿತು. ನಂತರ ಮತ್ತೆ ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನೆ ಕೂಟ ವಿಧಾನಸಭಾ ಚುನಾವಣೆಗಳಲ್ಲಿ ಸೋತಿತು.

ನಮಗೆ ಗೊತ್ತಿರುವಂತೆ, ಲೋಕಸಭಾ ಚುನಾವಣೆಗಳು ಇನ್ನೊಂದು ಮೈತ್ರಿಕೂಟವನ್ನು, ಸಂಯುಕ್ತ, ಪ್ರಗತಿಪರ ಮೈತ್ರಿಕೂಟ (ಯು.ಪಿ.ಎ)ವನ್ನು ಕಾಂಗ್ರೆಸ್ ನೇತ್ರತ್ವದಲ್ಲಿ ಅಧಿಕಾರಕ್ಕೆ ತಂದಿವೆ. ಆದರೆ ಮಹತ್ವದ ಸಂಗತಿಯೆಂದರೆ ಲೋಕಸಭೆಯಲ್ಲಿ ಎಡಪಕ್ಷಗಳ ಪ್ರತಿಷ್ಟೆ ಹೆಚ್ಚಿದರೆ, ಭಾರತ ಗಣತಂತ್ರವಾದಂದಿನಿಂದ ಅತೀ ಹೆಚ್ಚು ಪ್ರಾತಿನಿದ್ಯವನ್ನು ಎಡಪಕ್ಷಗಳು ಪಡೆದಿವೆ. ಎಷ್ಟೆಂದರೆ ಯುಪಿಎ ಆಡಳಿತ ಇಂದು ಎಡ ಬೆಂಬಲದ ಮೇಲೆ ನಿರ್ಣಾಯಕವಾಗಿ ನಿಂತಿದೆ.

ಎಡಪಕ್ಷಗಳ ಜವಾಬ್ದಾರಿ

ಆದರೆ ಈ ಸನ್ನಿವೇಶ ಎಡಪಕ್ಷಗಳ ಮೇಲೆ ಭಾರೀ ಜವಾಬ್ದಾರಿಯನ್ನು ಹೊರಿಸಿದೆ. ಮುಖ್ಯವಾಗಿ ಎರಡು ಅಂಶಗಳನ್ನು ನಾವು ಎದುರಿಸಬೇಕಾಗಿದೆ. ಒಂದೆಡೆ ಯುಪಿಎ ಸರಕಾರ ಸಮಾನ ಕನಿಷ್ಟ ಕಾರ್ಯಕ್ರಮ (ಸಿಎಂಪಿ)ದ ವಿವಿಧ ಭರವಸೆಗಳನ್ನು ಉಲ್ಲಂಘಿಸುವ ಕೆಲವು ಕ್ರಮಗಳನ್ನು ಕೈಗೊಂಡಿದೆ. ಇತ್ತೀಚಿನ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ಸಿಎಂಪಿಯ ಭಾವನೆಗಳಿಗೆ ಅನುಗುಣವಾಗಿರಲಿಲ್ಲ. ಅಡುಗೆ ಅನಿಲದ ಬೆಲೆಯ ಮೇಲಿನ (ತಥಾಕಥಿತ) ಸಬ್ಸಿಡಿಯನ್ನು ಸಂಪೂರ್ಣ ತೆಗೆಯುವವರೆಗೆ ಪ್ರತಿ ತಿಂಗಳು ಅದನ್ನು ಬೆಲೆ 5 ರೂ.ನಂತೆ ಹೆಚ್ಚಿಸುವ ಬೆದರಿಕೆಯನ್ನು ಸರಕಾರ ಎಡಪಕ್ಷಗಳ ಒತ್ತಡದಿಂದಾಗಿ ಹಿಂತೆಗೆದುಕೊಳ್ಳಬೇಕಾಯಿತು. ಅಡುಗೆ ಅನಿಲದ ಬೆಲೆ ಸಿಲಿಂಡರ್‌ಗೆ 492 ರೂ. ಆದರೆ ಒಳ್ಳೆಯದು ಎಂದು ಮಣಿಶಂಕರ ಅಯ್ಯರ್ ಇತ್ತೀಚೆಗೆ ಸಂಸತ್ತಿನಲ್ಲಿ ಹೇಳಿದ್ದರು. ಅಂದರೆ ಸರಕಾರದ ಮಾತು ನಡೆಯುತ್ತಿದ್ದರೆ ಅದರ ಬೆಲೆ ಈ ಮಟ್ಟ ತಲುಪುತ್ತಿತ್ತು. ಅಂದರೆ ಸುಮಾರು 200 ರೂಗಿಂತಲೂ ಹೆಚ್ಚಿನ ಏರಿಕೆ. ಆದ್ದರಿಂದ ಇತ್ತೀಚೆಗೆ ಈ ಏರಿಕೆಯನ್ನು ಹಿಂತೆಗೆದುಕೊಳ್ಳುವ ಸರ್ಕಾರದ ಪ್ರಕಟಣೆ ಎಡಪಕ್ಷಗಳಿಗೆ ಸಣ್ಣ ವಿಜಯವೇನೂ

ಪುಟ 10 ಕ್ಕೆ

ಯುವತಿಯ ಮೇಲೆ ಅಮಾನವೀಯ ದೌರ್ಜನ್ಯ

ಯರಡೋಣಿದಲ್ಲೊಂದು ಪಾಳೆಯಗಾರಿ ವಿಕೃತ ಕೃತ್ಯ

ರಾಯಚೂರು ಆರ್ಥಿಕ-ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಜಿಲ್ಲೆ. ಆದರೆ ಇಲ್ಲಿ ಪುರುಷ ಪ್ರಾಧಾನ್ಯತೆಗೆ, ಪಾಳೇಗಾರಿಕೆ ಮೌಲ್ಯಗಳಿಗೆ ಕೊರತೆ ಇಲ್ಲ. ಬಡವರ ಮೇಲೆ - ಮಹಿಳೆಯರ ಮೇಲೆ ದೌರ್ಜನ್ಯ ನಿರಂತರ. ಇಂತಹ ದೌರ್ಜನ್ಯದ ಬಗ್ಗೆ ಒಂದು ವರದಿ.

'ನನ್ನ ಮಾನ ಏನೂ ಉಳಿದಿಲ್ರಿ. ನಾ ಬದಕೋಕ್ಕಿಂತ ವಿಷ ತಗೊಂಡು ಸಾಯೋದ್ ಒಂದ್ ಉಳಿದೈತ್ರಿ. ನಾ ಯಾ ಮಾರಿ ಇಟ್ಕಂಡು ಊರಾಗ ಕಾಲಿಡಲಿ ನೀವ ಹೇಳ್ರಿ' ಎಂದು ರಾಯಚೂರಿನ ಪತ್ರಿಕಾ ಗೋಷ್ಠಿಯಲ್ಲಿ ಗಳಗಳನೆ ಅಳುತ್ತಾ ಕುಳಿತ 18 ರಿಂದ 20 ವರ್ಷದ ತರುಣಿ ಯರಡೋಣಿ ಗ್ರಾಮದ ಹುಸೇನ್‌ಭಿ ಸ್ಥಿತಿ ಕಣ್ಣಾರೆ ಕಂಡ ಯಾರಿಗಾದರು ಕರುಳು ಚುರ್ರ ಎನ್ನದೆ ಇರಲಾರದು.

ರಾಜಕಾರಣಿಗಳ ಒತ್ತಡದಿಂದ ಮುಚ್ಚಿಹೋಗಲಿದ್ದ ಪ್ರಕರಣವನ್ನು ಬಯಲಿಗೆಳೆದವರು ಲಿಂಗಸೂಗೂರಿನ ದಿಟ್ಟ ಪತ್ರಕರ್ತರು. ಹುಸೇನಭಿ ಕುಟುಂಬಕ್ಕೆ ಆಸರೆಯಾಗಿ ನಿಂತವರು ಮಹಿಳಾ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ನಿರ್ಮಲ ಪಾಟೀಲ. ತಕ್ಷಣದಲ್ಲೇ ಅಲ್ಲಿಗೆ ಧಾವಿಸಿದಿವರು ಹಟ್ಟಿಯ ಸಿಪಿಐ(ಎಂ) ಸಂಗಾತಿಗಳು.

ಪತ್ರಿಕೆಯಲ್ಲಿ ಬಂದ ಮಾಹಿತಿ ಆಧರಿಸಿ ಈ ಪ್ರಕರಣದಲ್ಲಿನ ಹುಸೇನಭಿಗೆ ನ್ಯಾಯ ಸಿಗಬೇಕೆಂದು ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಯಚೂರು ಜಿಲ್ಲಾ ಘಟಕ ಕರೆ ಕೊಟ್ಟಿತು. ಅಷ್ಟೆ ಅಲ್ಲದೆ ಯರಡೋಣಿ ಘಟನೆಯ ಸತ್ಯಾಂಶ ಕಂಡುಕೊಳ್ಳಲು ಕಾಂ। ಬಿ.ಲಿಂಗಪ್ಪನವರ ನೇತೃತ್ವದಲ್ಲಿ ಮಲ್ಲಯ್ಯ ಜಾಲಹಳ್ಳಿ, ಆರ್.ಕೆ. ದೇಸಾಯಿ, ಶಿವಾನಂದ, ಎಂ.ಸಿ.ನಿಂಗಪ್ಪನವರನ್ನೊಳಗೊಂಡ ನಿಯೋಗ ರಚಿಸಲಾಯಿತು.

ಈ ನಿಯೋಗವು ಯರಡೋಣಿ ಗ್ರಾಮಕ್ಕೆ 12-12-2004 ರಂದು ಭೇಟಿ ಮಾಡಿತು. ಆದರೆ ಅಂದು ಹುಸೇನಭಿಯನ್ನು ಡಿ.ಎನ್.ಎ. ಪರೀಕ್ಷೆಗೆಂದು ಪೋಲಿಸರು ರಾಯಚೂರಿಗೆ ಕರೆದುಕೊಂಡು ಹೋಗಿದ್ದರು. ಯರಡೋಣಿ ಗ್ರಾಮ ಲಿಂಗಸೂಗೂರು ತಾಲೂಕಿನಲ್ಲಿದ್ದು ಅದು ಲಿಂಗಸೂಗೂರು ಪಟ್ಟಣದಿಂದ ಏಳೆಂಟು ಕಿ.ಮೀ. ಅಂತರದಲ್ಲಿರುವ ಸಾಧಾರಣ ಹಳ್ಳಿ. ಈ ಹಳ್ಳಿ ಬೀದರ-ಶ್ರೀರಂಗಪಟ್ಟಣದ ಮುಖ್ಯರಸ್ತೆಗೆ ಹೊಂದಿ ಕೊಂಡಿದ್ದು ಹಟ್ಟಿ ಚಿನ್ನದಗಣಿಯ ಅಡ್ಡರಸ್ತೆಯಲ್ಲಿ ಇದೆ. ಅಲ್ಲದೆ ಇದು ಪ್ರಸಿದ್ಧ ಶರಣರಾದ ಶ್ರೀ ಅಮರೇಶ್ವರ ಹುಟ್ಟೂರು. ಈ ಭಾಗದ ಜನ ಈ ಗ್ರಾಮವನ್ನು ಶರಣರ ಜನ್ಮಸ್ಥಳವೆಂಬ ಗೌರವದಿಂದ ಕಾಣುತ್ತಾರೆ. ಇಂತಹ ಗ್ರಾಮದಲ್ಲಿ ಪಾಳೆಯಗಾರಿಯ ವಿಕೃತ ಪ್ರವರ್ತಕ ರುದ್ರಪ್ಪನಂತವರು ಇರುವುದು ವಿಪರ್ಯಾಸ ಎನ್ನುತ್ತಾರೆ ಜನ.

ನಮ್ಮ ನಿಯೋಗಕ್ಕೆ ಮೊದಲು ಹುಸೇನ್‌ಭಿಯ ಚಿಕ್ಕತ್ತೆ ಆಶಾಭಿ ಮತ್ತು ನಾದಿನಿ ಇಸ್ಮಾಯಲಭಿ ಅವರು ಪ್ರಕರಣವನ್ನು ವಿವರಿಸಿದ್ದು ಹೀಗೆ :- 'ಅವತ್ತು ಶನಿವಾರ (4-12-04) ಇತ್ರಿ ನಾವು ಜನಾನು ನಮ್ಮ ನಮ್ಮ ಹೊಲಗಳಿಗೆ ಹೋಗಿದದಿ. ಮನೇಲಿ ನಮ್ಮ ಹುಡುಗಿ ಬಂದ್ ಅಡಿಗಿ ಮಾಡ್ಕಂಡ ಇದ್ರಿ. ಅವಾಗ ಹನ್ನೊಂದ ಗಂಟಿ ಆಜು-ಬಾಜು ಇರಬೇಕ್ರಿ. ಅವ ರುದ್ರಪ್ಪನ ಹೆಣ್ತಿ ಬಸ್ಲಿಂಗವ್ವ ಅಡುಗಿ ಮನ್ಯಾಗ ಹೋಗಿ ನೀರು ತುಂಬಾಗ ನನ್ನ ಸೂಳಿ ಅಂದೆಲಲೇ ನಿನ್ನ ಸೂಳಿ ಮಾಡಾಕ ನಿನ್ನ ಮಿಂಡನ್ನ ಕರಕೊಂಡು ಬಂದೀನಿ ಬಾರಲೆ ಸೂಳಿ ಅಂತ ನಮ್ಮ ಹುಡುಗಿ ತುರಬ ಹಿಡ್ಕೊಂಡ ದರದರ ಎಳಕೊಂಡ ಅಂಗ್ಳಕ್ಕ ತಂದಳಂತ್ರಿ. ಅಲ್ಲೆ ಕಾಯ್ಕಂಡ ನಿಂತ ರುದ್ರಪ್ಪ ನಮ್ಮ ಹುಡುಗಿನ ಅನಾಮತ್ ಎತ್ಕೊಂಡ್ ತನ್ನ ಮನಿ ದನದ ತೊಟ್ಟಿಗಿಗೆ ತಗೊಂಡು ಹೋಗ್ಯಾನ್ರಿ. ಅಲ್ಲಿ ದನಕ್ಕೆ ಕಟ್ಟೊ ಕಣ್ಣೆಗಳಿಂದಾನ ಎರಡೂ ಕೈಗಳನ್ನ ಕಟ್ಟಿ ಹಾಕ್ಯಾನ್ರಿ. ಹುಡುಗಿ ಚೀರಾಡೋದನ್ನ ನೋಡಿ ಆಜು ಬಾಜು ಮಂದಿ ಬಂದಾರ್ರಿ. ಆಕಿನ್ನ ಬಿಡೋ ರುದ್ರಪ್ಪ ಅಂತ ಬೇಡಿಕೊಂಡಾರ್ರಿ. ಅವಾಗ ಬಸ್ಲಿಂಗವ್ವ ಮನ್ಯಾಗ ಹೋಗಿ ಕಾರದ ಪುಡಿ ತಂದು ಯಾ ಸೂಳ್ಯಾರ ನನ್ನ ಅಂಗಳದಾಗ ಬರ್ತಿರಿ ಬರ್ರಿ. ಕಾರ ಹಾಕ್ತಿನಿ ಬರ್ತೆರ್ರೇ ಸೂಳೇರೆ ಎಂದೆಲ್ಲಾ ಓಣಿ ಮುಂದಿನ ಅಂಜಿಸ್ಯಾಳ್ರಿ. ನಮ್ಮ ಹುಡುಗಿ ಕುಬಸ ಬಿಚ್ಯಾನ್ರಿ ಲಂಗ ಬಿಚ್ಚಿ ಬತ್ಲೆ ಮಾಡ್ಯಾನ್ರಿ ಅಂದ ಮ್ಯಾಲ ಏನ್ ಉಳದೈತ ಹೇಳ್ರಿ ನಮ್ಮ ಹುಡುಗಿ ಮಾನ ಹೋಗ್ಯಾದ್ರಿ ಅರ್ಧ ಗಂಟೆ ಹೊತ್ತ ಬತ್ತಲ ಮಾಡಿ ಹೋಡ್ಯಾನ್ರಿ ಬಡ್ಯಾನ್ರಿ. ಬಾಯಲಿ ಹೇಳಾತ ಬರವಲ್ದು ಅಂತಂತ ಹಲ್ಕಾ ಮಾತು ಬಯ್ಯಾನ್ರಿ. ಹುಡುಗಿ ಮೈತುಂಬ ಬರಿ ಅದವ್ರಿ. ಅಂತಾಪರಿ ಮಾಡ್ಯಾನ್ರಿ. ಇನ್ನ ಏನೂ ಉಳಿದಿಲ್ರಿ ಸಾಯಬರ್' ಎಂದೆಲ್ಲಾ ನಡೆದ ಇನ್ನಿತರ ಸಂಗತಿ ನೆನಸಿಕೊಂಡು ಆಶಾಭಿ ಅಳುತ್ತಲೆ ಇದ್ದಳು. 'ಊರಾನ ಜನ ಬಿಡಸ್ಲಿಕ್ ಹೋದ್ರ ಕೊಡ್ಲಿ ತೋರಿಸ್ಯಾನ್ರಿ. ಬಸ್ಲಿಂಗವ್ವ ಕಾರದಪುಡಿ ತೋರಿಸ್ಯಾಳ್ರಿ ಜನ ಬಿಡಿಸ್ಲಿಕ ಅಂಜಾರ್ರಿ. ಓಡಿಬಂದು ರುದ್ರಪ್ಪ, ಬಸ್ಲಿಂಗವ್ವನ ದಬ್ಬಿ ಬಿರೆಸಿಗಂಡು ಬಟ್ಟೆ ಮುಚ್ಚಿ ನಮ್ಮ ಮನ್ಯಾಗ ಕರಕೊಂಡು ಬಂದು ಹಾಕ್ಯಾಳ್ರಿ. ಇದಾಗಿ ಸ್ವಲ್ಪ ಹೊತ್ತಿಗ್ಗಿ ಸುದ್ದಿ ಕೇಳಿ ನಾನು ನನ್ನ ಮನೆ ಮಂದಿ ಎಲ್ಲಾ ಓಡಿ ಬಂದಿವ್ರಿ. 'ಮಾನ' ಉಳಿದಿಲ್ಲಂದ ಮ್ಯಾಲ ಮುಲಾಜ ನಮ್ಮ ಹುಡುಗಿನ್ನ ಅಕಿನ್ರ ಗಂಡ ಬಂದೆ ನವಾಜನ್ನ ಪೋಲಿಸ ಸ್ಟೇಷನಿಗೆ ಕಳಿಸಿದಿದ್ರಿ. ಅವ್ರು ಕೇಸ ಬರ್ಕಂಡು ಊರಿಗೆ ಬಂದ್ರು. ಜಾಗ ಎಲ್ಲಾ ತಿರುಗಾಡಿ ನೋಡಿದ್ರಿ. ರುದ್ರಪ್ಪನ ತಂದಿ ಅವ ಇರಲಿಲ್ರಿ. ಬಸ್ಲಿಂಗವ್ವನ ಕರದ್ರಿ. ಕರೆಬಂದ್ಲರಿ. ನಾಳೆ ಮುಂಜ್ಯಾನಿ 9ಕ್ಕೆ ನಿನ್ನ ಗಂಡನ ಕರಕೊಂಡು ಪೋಲಿಸ ಸ್ಟೇಶನ್ನಿಗಿ ಬರಬೇಕು. ಅಂಗ ಬರಲಿಲ್ಲಾಂದ್ರ ಆ ಹುಡುಗಿಗಿ ಮಾಡಿದ್ದ ನಿನಗ ಮಾಡಬೇಕಾಗ್ತದ ಅಂದರ್ರಿ. ಆಕಿ ಸುಮ್ಮನ ನಿಂತಿದ್ಲರಿ. ಆದ್ರ ಮರುದಿನ ನಾವು ಪೋಲಿಸ್ ಸ್ಟೇಷನ್ನಿಗೆ ಹೋಗಿದಿವ್ರಿ, ಪೋಲಿಸರು ನಮಗ ಗದರಿಸಿ ಮಾತಾಡತ ಶುರು ಮಾಡಿದ್ರಿ. ಅಲ್ಲಿ ಬಸ್ಲಿಂಗವ್ವ ಇದ್ದಳ್ರಿ. ಆಕಿಗಿ ಬಹಳ ಮರ್ಯಾದೆ ಇಂದ ಮಾತಾಡ್ಸತ್ತಿದ್ರಿ. ಕೊನೆಗೆ ಅಕಿನ್ನ ಪೋಲೀಸರು ತಮ್ಮ ಜೀಪಿನ್ಯಾಗ ತಂದು ಊರಾಗ ಬಿಟ್ಟು ಹೋದಿರಿ. ರಾತ್ರಿ ಹೋಗಿ ಬೆಳಕಾ ಗೋಧ್ರಾಗ ಪೋಲಿಸರ ರೀತಿ-ನೀತಿನ ಬದಲಾಗಿದ್ದುವು. ನಮಗ ದಿಕ್ಕ್ ತಪ್ಪಿದಂಗ ಆತ್ರಿ. ನಮಗ ಮಾತ ಮಾತಿಗಿ ಗದರಸಕ ಹತ್ತಿದ್ರಿ. ನಮ್ಮ ತಪ್ಪಾಗೇದಿ ಅನ್ನಂಗ ಮಾತಾಡ್ಕ ಹತ್ತಿದ್ರಿ. ಡಾಕ್ಟರಲ್ಲಿಗಿ ಕರಕೊಂಡ ಹೋದ್ರೆ ಆತ ನಮ್ಮ ಹುಡುಗಿ ಕಡಿಗಿ ತಿರುಗಿನೂ ನೋಡಲಿಲ್ರಿ. ಒಂದು



ಪುಟ 8ಕ್ಕೆ



ಬಂಧಿಸದಿದ್ದರೆ ಹೋರಾಟ : ಮಹಿಳಾ ಸಂಘಟನೆ ಎಚ್ಚರಿಕೆ

ಯರಡೋಣಿ ಗ್ರಾಮದ ಮಹಿಳೆಯ ಮೇಲೆ ಜರುಗಿದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮೇಲೆ ಪುನಃ ಅಪಹರಣ- ಅತ್ಯಾಚಾರ, ಕೊಲೆಗೆ ಯತ್ನ ಪ್ರಕರಣವನ್ನು ಪೊಲೀಸರು ದಾಖಲಿಸಿ ಈ ಕೂಡಲೇ ರುದ್ರಪ್ಪನನ್ನು ಬಂಧಿಸುವಂತೆ ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ಕೆ.ನೀಲಾ ಒತ್ತಾಯಿಸಿದ್ದಾರೆ.

ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಥಳೀಯ ಪೊಲೀಸರು ವೈದ್ಯಾಧಿಕಾರಿಗಳು ರಾಜಕೀಯ ಒತ್ತಡಕ್ಕೆ ಮಣಿದಿದ್ದು, ಆರೋಪಿಯ ಮೇಲೆ ಕ್ಷುಲ್ಲಕ ಪ್ರಕರಣ ದಾಖಲಿಸಿ ಜಾಮೀನಿನ ಮೇಲೆ ಬಿಡುಗಡೆಯಾಗಿ ರುದ್ರಪ್ಪ ರಾಜಾರೋಷವಾಗಿ ತಿರುಗಾಡುತ್ತಿದ್ದಾನೆ ಎಂದಿದ್ದಾರೆ.

ನಾವು ಅತ್ಯಾಚಾರಕ್ಕೊಳಗಾದ ಮಹಿಳೆ ಹಾಗೂ ಅವರ ಕುಟುಂಬದವರನ್ನು ಭೇಟಿಯಾಗಿ ವಿಚಾರಿಸಿದಾಗ ಇದೊಂದು ಅಮಾನವೀಯ ಕೃತ್ಯವಾಗಿದೆ. ಇತ್ತೀಚೆಗೆ ರಾಜಕೀಯ ವೈಮನಸ್ಸು, ಕುಟುಂಬ ಕಲಹಗಳು ಯಾವುದೇ ಪ್ರಕರಣ ಜರುಗಿದರೆ ಮಹಿಳೆಯು ಮೇಲೆ ಸೇಡು ತೀರಿಸಿಕೊಂಡು ಬಲಿಪಶು ಮಾಲಾಗುತ್ತದೆ ಎಂದು ಅವರು ಆರೋಪಿಸಿದರು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪಾಳೆಗಾರಿಕೆ ಆಳುವ ಜನರಿಂದ ಜರುಗುತ್ತಿವೆ. ಆಡಳಿತ ವ್ಯವಸ್ಥೆ ಪಾರದರ್ಶಕವಾಗಿರಬೇಕು. ಆದರೆ ಅಧಿಕಾರಿಗಳು ಕೆಲವರು ಏಜೆಂಟರಂತೆ ವರ್ತಿಸುವುದು ಸಲ್ಲ.

ಹುಸೇನಬಿ ಮೇಲೆ ಜರುಗಿದ ಘಟನೆ ಇಡೀ ಸ್ತ್ರೀ ಕುಲಕ್ಕೆ ಮಾಡಿದ ಅಪಮಾನವಾಗಿದೆ. ಕೂಡಲೇ ರುದ್ರಪ್ಪನನ್ನು ಬಂಧಿಸಿ ಶಿಕ್ಷೆ ನೀಡದಿದ್ದರೆ ರಾಜ್ಯಾದ್ಯಂತ ಮಹಿಳಾ ಸಂಘಟನೆಗಳು ಹೋರಾಟ ಮಾಡ ಬೇಕಾಗುತ್ತದೆಂದು ಕೆ.ನೀಲಾ ತಿಳಿಸಿದರು.

ಜನಪ್ರತಿನಿಧಿಗಳು ಘಟನೆ ಬಗ್ಗೆ ಮೌನವಹಿಸಿರುವುದು ಏಕೆ? ಎಂದರು.

ಜನತೆಯ ಪ್ರಬಲ ಚಳುವಳಿ, ಸಂಘಟನೆ ಕಟ್ಟಲು ನಿರ್ಧಾರ

ರಾಯಚೂರು ತಾಲ್ಲೂಕು ಸಿಪಿಐ(ಎಂ) ಸಮ್ಮೇಳನ

ತುಂಗಭದ್ರಾ ಅಚ್ಚುಕಟ್ಟು ಎಡದಂಡೆ ವ್ಯಾಪ್ತಿಯ ರೈತರಿಗೆ ಎರಡನೇ ಬೆಳೆ ಬೆಳೆಯಲು ಸಮರ್ಪಕ ನೀರು ಹರಿಸುವಂತೆ ಹಾಗೂ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಿಸಲು ಸಿಪಿಐ(ಎಂ) ರಾಯಚೂರು ತಾಲ್ಲೂಕು ಸಮ್ಮೇಳನ ಒತ್ತಾಯಿಸಿದೆ

ನವೆಂಬರ್ 30, ಡಿಸೆಂಬರ್ 1,2004 ರಂದು ರಾಯಚೂರು ನಗರದಲ್ಲಿ ನಡೆದ ಸಿಪಿಐ(ಎಂ) ಪಕ್ಷದ 8ನೇ ತಾಲ್ಲೂಕು ಸಮ್ಮೇಳನ, ಕಳೆದ 4 ವರ್ಷಗಳಿಂದ ಬರಗಾಲ, ಬೆಲೆ ಕುಸಿತದಿಂದ ತತ್ತರಿಸಿದ ರೈತರಿಗೆ ಈ ವರ್ಷ ಉತ್ತಮ ಮಳೆ ಹರ್ಷದಾಯಕವಾಗಿತ್ತು.



ಆದರೆ ಜಿಲ್ಲೆಯ ಜನ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ನಿರ್ಲಕ್ಷತನದಿಂದ ಸಕಾಲಕ್ಕೆ ಕಾಲುವೆ ದುರಸ್ತಿಯಾಗದೆ ನೀರು ಹರಿಸಲು ವಿಳಂಬ ಮತ್ತು 2 ನೇ ಬೆಳೆಗೆ ಸಮರ್ಪಕ ನೀರು ದೊರೆಯದ ಕಾರಣ ರೈತರು ಆತಂಕದಲ್ಲಿದ್ದಾರೆ. ರೈತ ವಿರೋಧಿ ನೀತಿಯನ್ನು ಸಮ್ಮೇಳನ ಖಂಡಿಸಿದೆ. ತುಂಗಭದ್ರಾ ಎಡದಂಡೆ ಕಾಲುವೆ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯ ಮಲ್ಲಟ್, ಡಂಕನಕಲ್ ಹಾಗೂ ಗಂಗಾವತಿ ಬಳಿ ನಿರ್ಮಿಸಲು ಉದ್ದೇಶಿಸಿರುವ ಬ್ಯಾಲೆನ್ಸಿಂಗ್ ರಿಜರ್ವಾಯರ್ ನಿರ್ಮಾಣವನ್ನು ಕೈಗೆತ್ತುಕೊಳ್ಳಬೇಕು ಇದರಿಂದ ತುಂಗಭದ್ರಾ ಆಣೆಕಟ್ಟಿನಲ್ಲಿ ತುಂಬಿರುವ ಹೂಳುನಿಂದಾಗಿ ವ್ಯರ್ಥವಾಗಿದ್ದ 32 ಟಿ.ಎಂ.ಸಿ. ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳ ಬಹುದಾಗಿದೆ. ಕಾರಣ ಈ ನಿಟ್ಟಿನಲ್ಲಿ ಕೂಡಲೇ ಕಾರ್ಯಪ್ರವೃತ್ತರಾಗಬೇಕೆಂದು ಸಮ್ಮೇಳನವು ಆಗ್ರಹಿಸಿದೆ.

ನಾರಾಯಣಪುರ ಬಲದಂಡೆ ಕಾಲುವೆ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಅದನ್ನು ರಾಯಚೂರು ತಾಲ್ಲೂಕಿಗೂ ವಿಸ್ತರಿಸುವ ನಿಟ್ಟಿನಲ್ಲಿ ಕಾಮಗಾರಿಯನ್ನು ಶೀಘ್ರ ಮುಂದುವರಿಸಬೇಕು. ರಾಯಚೂರು ನಗರದ ಜನತೆಗೆ ಕುಡಿಯುವ ನೀರಿಗಾಗಿ ಗಣೇಕಲ್ ಬ್ಯಾಲೆನ್ಸಿಂಗ್ ರಿಜರ್ವಾಯರ್‌ಗೆ ಲಿಂಕ್ ಕಾಲುವೆಯನ್ನು ನಿರ್ಮಿಸಲು ಸಮ್ಮೇಳನ ಒತ್ತಾಯಿಸಿದೆ.

ರಾಯಚೂರು ನಗರದ ಅಭಿವೃದ್ಧಿಗಾಗಿ ಬಿಡುಗಡೆಯಾದ ಹಣವು ಸ್ಥಳೀಯ ಶಾಸಕರ ಹಾಗೂ ನಗರ ಸಭಾ ಸದಸ್ಯರ ವೈಯಕ್ತಿಕ ಪ್ರತಿಷ್ಠೆಯಿಂದ ಅಭಿವೃದ್ಧಿ ಕಾರ್ಯಗಳಿಗೆ ಬಳಕೆಯಾಗದೆ, ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿದೆ. ಈ ಹಿನ್ನೆಲೆಯಲ್ಲಿ ಇಬ್ಬರು ವೈಯಕ್ತಿಕ ಪ್ರತಿಷ್ಠೆಯನ್ನು ಬದಿಗೊತ್ತಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ಸಮ್ಮೇಳನ ಒತ್ತಾಯ ಪಡಿಸಿತು.

ಉಳ್ಳಾಗಡ್ಡೆ, ಭತ್ತ, ಮಕ್ಕೆ ಜೋಳ, ಇತ್ಯಾದಿ ಬೆಳೆಗಳಿಗೆ ಬೆಂಬಲಿತ ಬೆಲೆ ರೈತರಿಗೆ ತಲುಪುವಂತಾಗಬೇಕು. ಭ್ರಷ್ಟಾಚಾರವೆಸಗುತ್ತಿರುವ ಸಂಬಂಧಪಟ್ಟ ಅಧಿಕಾರಿ ಮತ್ತು ದಲ್ಲಾಳಿಗಳನ್ನು ಶಿಕ್ಷಿಸಬೇಕು. ರಾಯಚೂರು ಸಹಕಾರಿ ನೂಲಿನ ಗಿರಣಿಯನ್ನು ಪುನರಾರಂಭಿಸಬೇಕು. ರಾಯಚೂರು ತಾಲ್ಲೂಕಿನ ರಸ್ತೆಗಳನ್ನು ದುರಸ್ತಿಗೊಳಿಸಬೇಕು ಎಂಬ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಮ್ಮೇಳನದಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯದರ್ಶಿ ಬಿ.ಲಿಂಗಪ್ಪ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಲ್ಲಯ್ಯ ಜಾಲಹಳ್ಳಿ ಭಾಗವಹಿಸಿ ಮಾರ್ಗದರ್ಶನ ನೀಡಿದರು.

ಸಿಪಿಐ(ಎಂ) ಪಕ್ಷದ 8ನೇ ತಾಲ್ಲೂಕು ಸಮ್ಮೇಳನದ ಅಂಗವಾಗಿ ನವೆಂಬರ್ 30 ರಂದು ನಗರದ ಸೂಪರ್ ಮಾರ್ಕೆಟ್ ಬಳಿ ಭಹಿರಂಗ ಸಭೆಯನ್ನು ನಡೆಸಲಾಯಿತು. ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನ ಕುಮಾರ್‌ರವರು ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ನೀತಿಯನ್ನು ಟೀಕಿಸಿದರು.

ಪಕ್ಷದ ಜಿಲ್ಲಾ ಸಮಿತಿ ಮುಖಂಡರಾದ ಮಲ್ಲಯ್ಯ ಜಾಲಹಳ್ಳಿ ಮಾತನಾಡಿ, ಜಿಲ್ಲೆಯ ಜ್ವಲಂತ ಸಮಸ್ಯೆಗಳು ಹಾಗೆಯೇ ಉಳಿದಿ... ಜಿಲ್ಲೆಯ, ತಾಲ್ಲೂಕಿನ ಅಭಿವೃದ್ಧಿಗೆ ಭಾಜ... ಜನತಾದಳ, ಕಾಂಗ್ರೆಸ್ ಪಕ್ಷಗಳಿಂದ ಆಯ್ಕೆಗೊ... ಜನ ಪ್ರತಿನಿಧಿಗಳು ಅಭಿವೃದ್ಧಿ ಕಾರ್ಯಗಳ... ಕೈಗೆತ್ತಿಕೊಳ್ಳದೇ ಅಭಿವೃದ್ಧಿಯನ್ನು ನಿರ್ಲಕ್ಷಿಸಲಾ... ಎಂದು ಆರೋಪಿಸಿದರು. ಬಹಿರಂಗ ಸಭೆ... ಅಧ್ಯಕ್ಷತೆಯನ್ನು ಪಕ್ಷದ ಜಿಲ್ಲಾ ಸಮಿ... ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿಯವ... ವಹಿಸಿದ್ದರು. ವೇದಿಕೆಯ ಮೇಲೆ ಪಕ್ಷ... ಮುಖಂಡರಾದ ತಿಪ್ಪಣ್ಣ ಶಾಖವಾದಿ, ಖಾ... ಹುಸೇನ್, ರಸೂಲ್ ಅಹ್ಮದ್ ಉಪ... ರಿದ್ದರು. ಜಿ.ಎಸ್.ವೀರಭದ್ರ ಪ್ರಾಸ್ತಾ... ವಾಗಿ ಮಾತನಾಡಿದರು. ವೈ.ಈರ... ಕಾರ್ಯಕ್ರಮ ನಿರೂಪಿಸಿದರು. ಕೆ.... ವೀರೇಶ್ ವಂದಿಸಿದರು. ಇದಕ್ಕೆ ಪೂರ್ವಭಾ... ಯಾಗಿ ಪಕ್ಷದ ರ್‍ಯಾಲಿಯನ್ನು ಆಯೋಜಿಸಲಾಗಿ...

ನೂತನ ಸಮಿತಿ ಆಯ್ಕೆ : ಕಾರ್ಯದರ್ಶಿಯಾಗಿ ಶರಣಬಸವ ಆಯ್ಕೆ

ಈ ಸಮ್ಮೇಳನದಲ್ಲಿ ನೂತನವಾಗಿ ... ಸದಸ್ಯರ ರಾಯಚೂರು ತಾಲ್ಲೂಕು ಸ್ಥಳೀಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸ... ಸದಸ್ಯರಾಗಿ, ವೈ.ಈರಣ್ಣ, ಸಿ.ಬಸಪ್ಪ, ಕೆ.ಜಿ.ವಿರೇಶ್, ಮನೋಹರ, ಎಸ್. ತಿಪ್ಪಣ್ಣ, ಖಾಜಾ ಹುಸೇನ್, ಜಿ.ಎಸ್.ವೀರಭದ್ರ, ರಸೂಲ್ ಅಹ್ಮದ್, ಡಿ.ಎಸ್.ಶರಣಬಸವ ಇವರುಗಳನ್ನು ಆಯ್ಕೆ ಮಾಡಲಾಯಿತು. ಸ್ಥಳೀಯ ಸಮಿತಿ ಕಾರ್ಯದರ್ಶಿಗಳಾಗಿ ಡಿ.ಎಸ್.ಶರಣಬಸವ ಇವರನ್ನು ಆಯ್ಕೆ ಮಾಡಲಾಯಿತು. ಪಕ್ಷದ ಹಿರಿಯ ಸದಸ್ಯರಾದ ಡಾ.ಎನ್.ಕುಮಾರ್ ಇವರು ಪಕ್ಷದ ಧ್ವಜಾರೋಹಣವನ್ನು ಮಾಡುವುದರ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು.

.........ಯರಡೋಣಿದಲ್ಲೊಂದು ಪಾಳೆಯಗಾರಿ ವಿಕೃತ ಕೃತ್ಯ

ಪುಟ 7 ರಿಂದ

ಚೀಟಿ ಕೊಟ್ಟು ಇಂಜೆಕ್ಷನ ಹಾಕ್ತಾರ. ಮಾಡಿಕೊಂಡು ಹೋಗ್ರಿ ಅಂದರ್ರಿ. ನಮಗ ಅನ್ಯಾಯ ಆಗ್ತಾ ಇರೋದೆ ಕಣ್ಣಿಗಿ ಕಾಣ್ತಿದ್ರಿ. ಆದರ ನಾವು ಹೋಗಿ ನಿರ್ಮಲ ಪಾಟೀಲರನ್ನ ಕರ್ಕೊಂಡು ಬಂದಿದ್ರಿ. ಅವ್ರು ಬಂದು ಡಾಕ್ಟಗ್ಗೆ ಬಯ್ದ ಮ್ಯಾಲೇನ ಡಾಕ್ಟರ ನಮ್ ಹುಡುಗಿನ ಪರೀಕ್ಷೆ ಮಾಡಿ ದವಾಖಾನ್ಯಾಗ ಸೇರಿಸಿಕೊಂಡಾರ್ರಿ. ಗಂಡಸರು ಹೋಗಿ ಪೇಪರ್‍ನವರಿಗೆ ತಿಳಿಸಿದ್ರಿ. ಅವ್ರು ಬಂದು ಎಲ್ಲಾ ನಮ್ಮ ಹುಡುಗಿ ಬಾಯ್ಲ ಕೇಳಿ ಪೇಪರದಾಗ ಬರದಾರ್ರಿ. ಅದು ಪೇಪರದಾಗ ಬಂದ ಮ್ಯಾಲೆ ದಲಿತ ಸಂಘದೋರು ಇನ್ನಾರ್‍ಯಾರೋ ಸ್ಟ್ರೈಕ್ ಮಾಡ್ಯಾರಂತ್ರಿ. ಇವತ್ತ ಸಿಪಿಎಂ ದೋರಂತ ಪೇಪರದಾಗ ದೊಡ್ಡದು ಹಾಕ್ಯಾರ್ರಿ. ನಮಗ ಏನು ತಿಳಿವಲ್ದ ಆಗ್ಯಾದ್ರಿ' ಎಂದು ಮಾತು ಮುಗಿಸಿದಳು.

ಆಶಾಭಿಯ ಮಾತಿನ ಸತ್ಯಾಸತ್ಯತೆ ಅರಿಯಲು ನಾವು ಗ್ರಾಮದಲ್ಲಿ ಹಲವರನ್ನು ಮಾತನಾಡಿಸಿದೆವು. ರುದ್ರಪ್ಪ ಜಾತಿಯವನೆ ಆದ ದುರಗಪ್ಪನನ್ನು ಒಳಗೊಂಡು ಎಲ್ಲರು ಹೇಳಿದ್ದು ಆಶಾಭಿ ಹೇಳಿದ್ದು ಒಂದೆ ಆಗಿತ್ತು. ರುದ್ರಪ್ಪ ನಾಯಕ ಜನಾಂಗಕ್ಕೆ ಸೇರಿದ ಸಾಮಾನ್ಯ ಮನುಷ್ಯ. ವಯಸ್ಸು 40 ಇರಬಹುದು. ಬಸ್ಲಿಂಗಮ್ಮ 35 ವಯಸ್ಸಿನಾಕೆ. ಕಾಲೇಜು ಓದುವ ಮಕ್ಕಳಿದ್ದಾರೆ. ಜನತಾ ಮನೆಯಲ್ಲಿ ವಾಸ. 2 ಎಕರೆ ಜಮೀನು. 3 ಎಮ್ಮೆ ಕಟ್ಟಿಕೊಂಡಿದ್ದು ಹಾಲು ಮಾರಿ ಜೀವಿಸುತ್ತಾರೆ. ರುದ್ರಪ್ಪ ಮಾತ್ರ ದುಡಿಯುತ್ತಿಲ್ಲ. ಊರಲ್ಲಿ ಉಂಡಾಡಿಯಾಗಿದ್ದು ಕಾಂಗ್ರೆಸ್ ಏಜೆಂಟನಾಗಿರುವವನು ಎನ್ನುತ್ತಾರೆ. ಊರಲ್ಲಿಯ ಜನ ದುಡಿದು ತಿನ್ನುವ ಕಷ್ಟಜೀವಿಗಳು. ಅವರ ಸಂಭಾವಿತನದ ದೌರ್ಬಲ್ಯ ಬಳಸಿಕೊಂಡು ರೌಡಿತನ ಮೈಗೂಡಿಸಿಕೊಂಡಿದ್ದಾನೆ.

ಇಂತಹ ಕ್ರೂರ ಕೃತ್ಯಗಳನ್ನು ಹಿಂದೆ ಸಹ ಮಾಡಿದ್ದಾನೆ. ತನ್ನ ಜಾತಿಯವಳೆ ಆದ ಗುಡ್ಡದ ಬಾಲವ್ವನ್ನ ಬತ್ತಲೆ ಮಾಡಿದಾಗ ಕೇರಿಯವರೆಲ್ಲಾ ಸೇರಿ ಛೀಮಾರಿ ಹಾಕಿದ್ದಾರೆ ಎಂಬುದು ತಿಳಿಯಿತು. ಇಸ್ಮಾಯಲಭಿಯನ್ನು ದನಕ್ಕೆ ಹೊಡೆದಂತೆ ಹೊಡೆದಿದ್ದಾನಂತೆ. ಎಲ್ಲವನ್ನು ಧಕ್ಕಿಸಿಕೊಂಡು ಜನರನ್ನು ಅಂಜಿಸುತ್ತಾ ಮರಿ ಪಾಳೆಯಗಾರನಂತೆ ಮೆರೆಯುತ್ತಿದ್ದಾನೆ. ಈತನ ತಮ್ಮಂದಿರೆಲ್ಲಾ ದುಡಿದು ತಿನ್ನುವ ಕಷ್ಟ ಜೀವಿಗಳು. ಆದರೆ ಈತನ ಹೆಂಡತಿ ಕೂಡ ಗಂಡನ ಸ್ವಭಾವ ರೂಢಿಸಿಕೊಂಡಾಕೆ. 4-12-04 ರಂದು ನಳದ ನೀರು ಹಿಡಿಯುವಾಗ ಹುಸೇನಭಿ ಬಸ್ಲಿಂಗಮ್ಮನಿಗೆ ಎದುರು ಆಡಿದ್ದೆ ಇಷ್ಟೆಲ್ಲಾ ಹಗರಣಕ್ಕೆ, ಅತ್ಯಾಚಾರಕ್ಕೆ ಕಾರಣವಾಗಿದ್ದದು. ಬಸ್ಲಿಂಗಮ್ಮ ಸಾರ್ವಜನಿಕ ನಳಕ್ಕೆ ನೀರಿಗೆ ಬಂದಾಗ ಎಲ್ಲರೂ ದೂರ ಸರಿದು ಆಕೆಗೆ ನೀರು ಹಿಡಿಯಲು ಬಿಟ್ಟಿಕೊಡುತ್ತಿದ್ದರು. ಹುಸೇನಭಿ ಆ ಗೌರವ ಕೊಡಲಿಲ್ಲ. ಪರಿಣಾಮ ದೌರ್ಜನ್ಯಕ್ಕೆ ಬಲಿಯಾದಳು ಎನ್ನುತ್ತಾರೆ ಹಳ್ಳಿ ಜನ.

ಇವೆಲ್ಲದರ ಮಧ್ಯೆ ಕೆಲವು ಪ್ರಶ್ನೆಗಳು ಹಾಗೆ ಉಳಿದಿವೆ. ಡಿಸೆಂಬರ-4ರಂದು ಸರಿಯಾಗಿ ವರ್ತಿಸಿದ ಪೋಲಿಸರು 5 ರಂದು ಬದಲಾದರೇಕೆ? ವೈದ್ಯಾಧಿಕಾರಿಗಳು ಮೆಡಿಕಲ್ ಮಾಡಲು ಹಿಂಜರಿದುದು ಏಕೆ?. ಸಿಪಿಎಂ. ಹೋರಾಟಕ್ಕಿಳಿದ ಮೇಲೆ ಅಂದರೆ ವಾರದ ನಂತರ ಡಿಎನ್‌ಎ ಮಾಡಿಸಿದುದು ಏಕೆ? ಡಿಎನ್‌ಎ 24 ತಾಸಿನೊಳಗೆ ಮಾಡಬೇಕಲ್ಲವೆ? ಅದನ್ನು ನಿರ್ಲಕ್ಷಿಸಲು ಏನು ಕಾರಣ? ಇವಕ್ಕೂ ರುದ್ರಪ್ಪ ಕಾಂಗ್ರೆಸ್ ಸಂಸತ್ ಸದಸ್ಯರಾದ ವೆಂಕಟೇಶ್ ನಾಯಕರವರ ಮಗನ ಹತ್ತಿರ ಹೋಗಿ ಆಶ್ರಯ ಪಡೆದಿರುವದಕ್ಕೂ ಸಂಬಂಧವಿದೆ ಎನ್ನುತ್ತಾರೆ ಜನ.

ಐ.ಪಿ.ಸಿ. 350ರ ಪುಕಾರ ದಾಖಲಾಗಬೇಕಾದ ಪ್ರಕರಣದ ಐಪಿಸಿ 34ರ ಪ್ರಕಾರ ದಾಖಲು ಮಾಡಿ ಅಪಾದಿತನಿಗೆ ಸ್ಟೆಶನ್‌ನಲ್ಲಿಯೇ ಜಾಮೀನು ಸಿಗುವಂತೆ ತಿರುಚಲಾಗಿದೆ. ಐಪಿಸಿ 34 ರಲ್ಲಿ 341, 323, 354, 504, 448 ರಂತಹ ಸಾಧಾರಣ ಕೇಸು ಹಾಕಲಾಗಿದೆ. ಹುಸೇನಭಿ ದೂರಿನ ಪ್ರಕಾರ ಹಚ್ಚಲೇಬೇಕಾದ 376, 307, 366 ದಂತಹ ಸೆಕ್ಷನ್ ಹಚ್ಚಲಿಲ್ಲ. ಆಕೆಯನ್ನು ಆಕೆಯ ಮನೆಯಿಂದ ಬಲಾತ್ಕಾರವಾಗಿ ಹೊತ್ತು ಒಯ್ಯಲಾಗಿದೆ. ಕಿಡ್ನಾಪ ಸೆಕ್ಷನ್ ಹಾಕಬಹುದಿತ್ತು. ಬೆತ್ತಲೆ ಮಾಡಿ ದೌರ್ಜನ್ಯ ಮಾಡಲಾಗಿದೆ. ಆಕೆಯ ಕತ್ತು ಹಿಸುಕಿ ಸಾಯಿಸಲು ಯತ್ನಿಸಲಾಗಿದೆ. ಕೊಡಲಿಯನ್ನು ತೋರಿಸಲಾಗಿದೆ, ಕೊಲೆ ಯತ್ನದ ಕೇಸ್ ಹಚ್ಚಾಬಹುದಾಗಿತ್ತು. ಇವಾವು ಆಗಿಲ್ಲದಿರುವುದನ್ನು ನೋಡಿದರೆ ಕಾಂಗ್ರೆಸ್ ಮುಖಂಡರು ತಮ್ಮ ಏಜೆಂಟನನ್ನೂ ರಕ್ಷಿಸಲು ತೀವ್ರ ಪ್ರಯತ್ನದಲ್ಲಿದ್ದಾರೆ. ಅಧಿಕಾರಿಗಳು ಸಹಕರಿಸುತ್ತಿದ್ದಾರೆ. ಹುಸೇನಭಿಗೆ ಅನ್ಯಾಯ ನಡೆಯುತ್ತಲಿದೆ.

ಸಿಪಿಎಂ ಜಿಲ್ಲಾ ಸಮಿತಿ ಜಿಲ್ಲಾ ರಾಯಚೂರು ಕೇಂದ್ರದಲ್ಲಿ 13.12.04 ರಂದು ಧರಣಿ ಸತ್ಯಾಗ್ರಹ ಮಾಡಿದೆ. ಅಂದೆ ಲಿಂಗ ಸೂಗೂರು ಮತ್ತು ದೇವದುರ್ಗದಲ್ಲಿ ಹೋರಾಟ ಜರುಗಿದೆ. ಜನವಾದಿ ಮಹಿಳಾ ಸಂಘದ ರಾಜ್ಯಾಧ್ಯಕ್ಷೆ ಕಾ|| ನೀಲಾ ಮತ್ತಿತರ ನಾಯಕರ ನಿಯೋಗ ಭೇಟಿ ಮಾಡಿ ಬಂದಿದೆ. ಅಂದು ಜಿಲ್ಲಾ ಕೇಂದ್ರದಲ್ಲಿ ಧರಣಿಯಲ್ಲಿ ಭಾಗವಹಿಸಿ ಜಿಲ್ಲಾಡಳಿತಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ವಿವಿಧ ಸಂಘಟನೆಗಳು ಬೆಂಬಲಿಸಿ ಹೋರಾಟದ ಪಾಲ್ಗೊಂಡಿವೆ. 15 ರಂದು ಜಿಲ್ಲಾ ಪೋಲೀ... ಅಧಿಕಾರಿಗಳು ಗ್ರಾಮಕ್ಕೆ ಭೇಟಿ ಮಾಡುವುದಾ... ಹೇಳಿದ್ದರು. ಈಗ ಗ್ರಾಮದ ಜನರೆಲ್ಲಾ ಕಾದು ಕೂತಿದ್ದರು. ಆದರೆ ಬರಲಿಲ್ಲ. ಸಿಪಿಐ(ಎಂ)ನ ರಾ... ಕಾರ್ಯದರ್ಶಿ ಮಂಡಳಿ ಸದಸ್ಯರಾ... ಎಸ್.ಪ್ರಸನ್ನಕುಮಾರ್, ರಾಯಚೂರಿನಲ್ಲಿ ಪತ್ರಿ... ಗೋಷ್ಠಿ ನಡೆಸಿ ಈ ದೌರ್ಜನ್ಯಕಾರರಿ... ಕಾಂಗ್ರೆಸ್‌ನವರ ಆಶ್ರಯವಿರುವುದನ್ನು ಖಂಡಿಸಿದ್ದಾರೆ. ಸ್ಥಳೀಯ ಶಾಸಕ ಗಮನ ಕೊಡ... ಗುರುತಿಸಿದ್ದಾರೆ. ಜನತೆ ಹೋರಾ... ಮುಂದುವರಿಸಿದ್ದಾರೆ.

- ಮಲ್ಲಯ್ಯ ಜಾಲಹ...

ಮಾನವ ಹಕ್ಕುಗಳ ರಕ್ಷಣೆಗಾಗಿ ಆಗ್ರಹ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಉಡುಪಿ ತಾಲೂಕು ಸಮಿತಿಯು ಮಾನವ ಹಕ್ಕುಗಳ ರಕ್ಷಣೆಗಾ... ಡಿಸೆಂಬರ್ 10 ರಂದು ಮೆರವಣಿಗೆ ಧರಣಿಯ ಮೂಲಕ ಒತ್ತಾಯಿಸುವ ಚಳುವ... ನಡೆಸಿತು.

ಚಳುವಳಿಯ ನೇತೃತ್ವವನ್ನು ಜ... ಮಹಿಳಾ ಸಂಘಟನೆಯ ಉಡುಪಿ ... ಸಮಿತಿಯ ಕಾರ್ಯದರ್ಶಿ ವಿಮಲಿ... ಫೆರ್ನಾಂಡಿಸ್ ತಾಲ್ಲೂಕು ಸಮಿ... ಕಾರ್ಯದರ್ಶಿ ಯಶೋಧ, ಲೀ... ಮೊದಲಾದವರು ನೇತೃತ್ವ ನೀಡಿದರು.

ವಿಶ್ವ ಪಂಜಾಬಿ ಸಮ್ಮೇಳನ

ಭಾರತ-ಪಾಕ್ ಶಾಂತಿ-ಸಹಬಾಳ್ವೆಯತ್ತ

ಗಮನಾರ್ಹ ಹೆಜ್ಜೆ

ಡಿಸೆಂಬರ್ ಮೊದಲವಾರದಲ್ಲಿ ಭಾರತ-ಪಾಕ್ ಶಾಂತಿ - ಸಹಬಾಳ್ವೆ ಮತ್ತು ಎರಡು ದೇಶದ ಜನತೆಯ ನಡುವೆ ಸಂಬಂಧ ಬಲಪಡಿಸುವ ದಿಕ್ಕಿನಲ್ಲಿ ಗಮನಾರ್ಹ ಹೆಜ್ಜೆ ಇಡಲಾಯಿತು. ಇದು ಪಂಜಾಬಿನ ಪಟಿಯಾಲದಲ್ಲಿ ನಡೆದ ವಿಶ್ವಪಂಜಾಬಿ ಸಮ್ಮೇಳನದ ಮಹತ್ವದ ಹೆಜ್ಜೆ ಕೂಡಾ. ಇದರಲ್ಲಿ ಭಾರತ ಮತ್ತು ಪಾಕಿಸ್ತಾನದ ಎರಡೂ ದೇಶಗಳಿಂದ ದೊಡ್ಡ ಸಂಖ್ಯೆಯಲ್ಲಿ ಪಂಜಾಬಿಗಳು ಭಾಗವಹಿಸಿದರು. ಈ ಸಮ್ಮೇಳನದ ಮಹತ್ವವನ್ನು ಗುರುತಿಸುವ ಲೇಖನ ಸುರ್ಜಿತ್‌ರವರಿಂದ...



ವಿಶ್ವ ಪಂಜಾಬಿ ಸಮ್ಮೇಳನವನ್ನು ಪ್ರತಿವರ್ಷ ನಡೆಸಲಾಗುವುದು. ಈ ಸಮ್ಮೇಳನವನ್ನು ಒಂದು ವರ್ಷ ಭಾರತದಲ್ಲಿ, ಇನ್ನೊಂದು ವರ್ಷ ಪಾಕಿಸ್ತಾನದಲ್ಲಿ ಸಂಘಟಿಸಲಾಗುವುದು. ಮುಂದಿನ ವರ್ಷದ ವಿಶ್ವ ಪಂಜಾಬಿ ಸಮ್ಮೇಳನ ಪಾಕಿಸ್ತಾನದ ಲಾಹೋರ್‌ನಲ್ಲಿ ಜರುಗಲಿದೆ. ಲಾಹೋರ್ ಅವಿಭಜಿತ ಪಂಜಾಬ್ ಪ್ರಾಂತ್ಯದ ರಾಜಧಾನಿಯಾಗಿತ್ತು. ಚಾರಿತ್ರಿಕವಾಗಿಯೂ ಪಂಜಾಬಿನ ರಾಜಧಾನಿಯಾಗಿತ್ತು - ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಕ್ರೀಡಾಕೂಟ ಕೂಡಾ....

120 ಪಾಕಿಸ್ತಾನಿ ಪಂಜಾಬಿಗಳು ಮೂರು ದಿನಗಳ ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಇದರೊಂದಿಗೆ ಭಾರತ-ಪಾಕ್ ಜನತಾ ಸಂಪರ್ಕದಲ್ಲಿ ಇದು ಅತಿ ದೊಡ್ಡ ಘಟನೆಯಾಗಿದೆ. ಎರಡೂ ಪಂಜಾಬ್‌ಗಳ ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖರು. ಮೂರು ದಿನಗಳ ವಿಶ್ವಪಂಜಾಬಿ ಸಮ್ಮೇಳನದ ನಂತರ ಒಂದು ವಾರದ ಭಾರತ-ಪಾಕ್ ಪಂಜಾಬ್ ಕ್ರೀಡಾಕೂಟ 2004 ನ್ನು ಪಾಕಿಸ್ತಾನಿ ಪಂಜಾಬ್ ಮುಖ್ಯಮಂತ್ರಿ ಇಲಾಹಿ ಉದ್ಘಾಟಿಸಿದರು. ಸಮ್ಮೇಳನಕ್ಕೆ ಹಲವು ಪ್ರಮುಖರನ್ನು (ಸಿಪಿಐಎಂನ ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಸೇರಿದಂತೆ) ಆಹ್ವಾನಿಸಲಾಗಿತ್ತು.

ಪಾಕಿಸ್ತಾನದ ಪಂಜಾಬ್ ಮುಖ್ಯಮಂತ್ರಿ ಇಲಾಹಿ ಮತ್ತು ಅವರ ತಂಡಕ್ಕೆ ಚಂಢೀಗರ್ ವಿಮಾನ ನಿಲ್ದಾಣದಲ್ಲಿ ಭವ್ಯ ಸ್ವಾಗತ ನೀಡಲಾಯಿತು. ಅವರನ್ನು ಅಲ್ಲಿಂದ ಅಮೃತಸರದ ಸ್ವರ್ಣದೇವಾಲಯಕ್ಕೆ ಒಯ್ದು ಪಾರಂಪರಿಕ ಸನ್ಮಾನ ಮಾಡಲಾಯಿತು. ಗುರುನಾನಕ ದೇವ್ ವಿಶ್ವವಿದ್ಯಾಲಯ ಇಬ್ಬರು ಮುಖ್ಯಮಂತ್ರಿಗಳಿಗೆ ಭಾರತ-ಪಾಕ್ ಸ್ನೇಹ - ಸಂಬಂಧ ಬಲಗೊಳಿಸಿದ್ದಕ್ಕೆ ವಿಶೇಷ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.

ಜಲಿಯನ್ ವಾಲಾಬಾಗ್ ಜಂಟಿ ಶ್ರದ್ಧಾಂಜಲಿ

ಎರಡೂ ಪಂಜಾಬಿನ ತಂಡಗಳು (ಮುಖ್ಯಮಂತ್ರಿ ಸೇರಿದಂತೆ) ಚಾರಿತ್ರಿಕ ಜಲಿಯನ್ ವಾಲಾಬಾಗ್‌ಗೆ ಭೇಟಿ ನೀಡಿ ಅವಿಭಜಿತ ಭಾರತದ ಸ್ವಾತಂತ್ರ್ಯ ಹೋರಾಟದ ಹುತಾತ್ಮರಿಗೆ ಜಂಟಿಯಾಗಿ ಶ್ರದ್ಧಾಂಜಲಿ ಸಲ್ಲಿಸಿದರು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹಿಂದೂ, ಮುಸ್ಲಿಂ ಮತ್ತು ಸಿಖ್ಖರ ರಕ್ತ ಒಟ್ಟಾಗಿ ಹರಿದಿತ್ತು. ಅದಕ್ಕೆ ಪ್ರತಿರೋಧವಾಗಿ ಆಮೇಲೆ ನಡೆದ ಸ್ವಾತಂತ್ರ್ಯದ ಹೋರಾಟದಲ್ಲೂ ಹಿಂದೂ, ಮುಸ್ಲಿಂ ಮತ್ತು ಸಿಖ್ಖರ ರಕ್ತ ಒಟ್ಟಿಗೇ ಹರಿದಿತ್ತು. ಈ ಹಿನ್ನಲೆಯಲ್ಲಿ ಇದು ಈ ಸಮ್ಮೇಳನದ ಸುತ್ತ ನಡೆದ ಘಟನೆಗಳಲ್ಲಿ ಅತ್ಯಂತ ಮಹತ್ವಪೂರ್ಣ ಘಟನೆಯಾಗಿತ್ತು.

ಪಾಕಿಸ್ತಾನ ಪಂಜಾಬಿ ಮುಖ್ಯಮಂತ್ರಿ ಇಲಾಹಿ ಅಮೃತಸರದ ಸ್ವರ್ಣದೇವಾಲಯದಲ್ಲಿ ಮಾತನಾಡುತ್ತಾ, ಹಲವು ಮಹತ್ವಪೂರ್ಣ ಕ್ರಮಗಳನ್ನು ತೆಗೆದುಕೊಳ್ಳುವ ಆಶ್ವಾಸನೆ ನೀಡಿದರು. ಅಮೃತಸರ-ಲಾಹೋರ್ ಬಸ್ ಸೇವೆಯನ್ನು ನಾನಕ್ ಸಾಹಿಬ್ ಮತ್ತು ಕರತಾರ್‌ಪುರದ ಸಿಖ್ ಪವಿತ್ರ ಸ್ಥಳಗಳಿಗೆ ವಿಸ್ತರಿಸುವುದು, ಪಾಕಿಸ್ತಾನದಲ್ಲಿರುವ ಸಿಖ್ ದೇವಾಲಯಗಳನ್ನು ರಕ್ಷಿಸಿ ಅವುಗಳ ಚಾರಿತ್ರಿಕ ಹಿರಿಮೆ ಕಾಪಾಡುವುದು, ಗುರುನಾನಕ್ ದೇವರ ಜನ್ಮಸ್ಥಳ ನಾನಕ್ ಸಾಹಿಬ್‌ನ್ನು ಮಾದರಿ ಪಟ್ಟಣವಾಗಿ ಬೆಳೆಸುವುದು, ಪಾಕಿಸ್ತಾನದ ಸಿಖ್ ಪವಿತ್ರ ಸ್ಥಳಗಳಿಗೆ ಭೇಟಿ ನೀಡುವ ಭಾರತೀಯರಿಗೆ ವೀಸಾ ಸುಲಭದಲ್ಲಿ ಸಿಗುವಂತೆ ವ್ಯವಸ್ಥೆ ಮಾಡುವುದು, ಪಾಕಿಸ್ತಾನದ ಜೈಲಿನಲ್ಲಿರುವ ಭಾರತೀಯ ಪಂಜಾಬಿಗಳ ಬಿಡುಗಡೆ - ಮುಂತಾದ ಹಲವು ಕ್ರಮಗಳನ್ನು ಇಲಾಹಿ ಘೋಷಿಸಿದರು. ಎರಡೂ ದೇಶಗಳ ಮತ್ತು ಪಂಜಾಬಿಗಳ ನಡುವೆ ಸ್ನೇಹ -ಶಾಂತಿಪೂರ್ಣ ಸಂಬಂಧಗಳಲ್ಲಿ ಮುಳ್ಳಾಗಿದ್ದ ಕೆಲವು ಸಮಸ್ಯೆಗಳಿಗೆ ಇಲಾಹಿಯವರ ಪರಿಹಾರ ಕ್ರಮ ಅತ್ಯಂತ ಮಹತ್ವಪೂರ್ಣ ಬೆಳವಣಿಗೆ.

ಪಾಟಿಯಾಲದ ಪಂಜಾಬಿ ವಿಶ್ವವಿದ್ಯಾಲಯದಲ್ಲಿ ವಿಶ್ವ ಪಂಜಾಬಿ ಕೇಂದ್ರಕ್ಕೆ ಇಲಾಹಿಯವರು ಅಡಿಗಲ್ಲು ಹಾಕಿದ್ದು ಈ ಎಲ್ಲಾ ಮಹತ್ವಪೂರ್ಣ ಆಗುಹೋಗುಗಳಿಗೆ ತಿಲಕವಿಟ್ಟಂತೆ ಇತ್ತು.

ವಿಭಜನೆಯ ಗಾಯ ಮಾಯುವತ್ತ

ಮೊದಲ ವಿಶ್ವ ಪಂಜಾಬಿ ಸಮ್ಮೇಳನ ಮತ್ತು ಭಾರತ-ಪಾಕ್ ಪಂಜಾಬಿ ಕ್ರೀಡಾಕೂಟದ ಮಹತ್ವ ಭಾರತ ವಿಭಜನೆಯ ನಂತರ ಪಂಜಾಬಿಗಳು ಅನುಭವಿಸಿದ ನೋವು, ಆಘಾತಗಳ ಹಿನ್ನಲೆ ಗೊತ್ತಿದ್ದವರಿಗೆ ಮಾತ್ರ ಅರ್ಥವಾದೀತು. ಭಾರತವನ್ನು ಧರ್ಮದ ಆಧಾರದ ಮೇಲೆ ವಿಭಜನೆ ಮಾಡಿ ಸ್ವತಂತ್ರ ಭಾರತವನ್ನು ದುರ್ಬಲಗೊಳಿಸುವ ಅಥವಾ ತಮ್ಮ ಅಧಿಪತ್ಯ ಮಂದುವರೆಸುವ ಬ್ರಿಟಿಷ್ ಪಿತೂರಿಯ ಅತ್ಯಂತ ಕಹಿ ಅನುಭವವಾಗಿದ್ದು ಪಂಜಾಬಿಗಳಿಗೆ. ಭಾರತ ವಿಭಜನೆಯ ಭಾರಿ ದುಷ್ಪರಿಣಾಮಗಳ ಸಿಂಹಪಾಲು ಬಂದಿದ್ದು ಪಂಜಾಬಿಗಳಿಗೆ. ಇಡೀ ದೇಶದಲ್ಲಿ ಕೋಮು ಗಲಭೆಗಳು (ಅದೂ ಹೆಚ್ಚಾಗಿ ಉತ್ತರ ಭಾಗದಲ್ಲಿ) ಪಂಜಾಬ್ ಮತ್ತು ಬಂಗಾಳಗಳು ಮಾತ್ರ ಇಬ್ಭಾಗವಾದ ಎರಡು ಪ್ರಾಂತ್ಯಗಳು. ಪ್ರಾದೇಶಿಕ ರಾಷ್ಟ್ರೀಯತೆ ಬೆಳೆಯುವ ಮಹತ್ವದ ಘಟ್ಟಗಳಿದ್ದು ಇವೆರಡರಲ್ಲೂ ಪಂಜಾಬಿಗೆ ಆದ ಆಘಾತ, ನೋವು ಅತ್ಯಂತ ಅಗಾಧವಾದದ್ದು. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ಮತ್ತು ಜನರ ಐಕ್ಯತೆ ಸಹ ಅತ್ಯಂತ ಪ್ರಬಲವಾಗಿದ್ದದ್ದು ಇದೇ ಎರಡು ಪ್ರಾಂತ್ಯಗಳಲ್ಲಿ ಎಂದೂ ನೆನಪಿಸಿ ಕೊಳ್ಳಬಹುದು. ಅದನ್ನು ಮುರಿಯಲು ಬ್ರಿಟಿಷರು ಹರಿಯಬಿಟ್ಟ ಕಾರಸ್ತಾನಗಳ ಫಲವೇ ಭಾರತ ವಿಭಜನೆ.


ಪಂಜಾಬಿನಲ್ಲಿ ಸಾವಿರಾರು ಜನ ಕೊಲೆಯಾಗಿದ್ದು, ಲಕ್ಷಾಂತರ ಜನ ಲೂಟಿ - ದಾಳಿಗೆ ನಿರಾಶ್ರಿತರಾಗಿ ಇನ್ನೊಂದು ಭಾಗಕ್ಕೆ ವಲಸೆ ಹೋದದ್ದು, ಸಾವಿರಾರು ಮಹಿಳೆಯರು ಭೀಕರ ಮಾನಭಂಗ- ಅತ್ಯಾಚಾರಕ್ಕೆ ಬಲಿಯಾದದ್ದು, ಎಲ್ಲರಿಗೂ ಗೊತ್ತಿರುವ ವಿಚಾರ. ಆಗಿನ ನೋವು, ಗಾಯ 57 ವರ್ಷಗಳ ನಂತರವೂ ಮಾಸಿಲ್ಲ. ಪಂಜಾಬಿನ ಆರ್ಥಿಕ - ಸಾಂಸ್ಕೃತಿಕ - ಧಾರ್ಮಿಕ- ಸಾಮಾಜಿಕ ಐಕ್ಯತೆಗೆ ಆದ ಗಾಯ ಇನ್ನೂ ಗಂಭೀರವಾದದ್ದು. ಪಂಜಾಬಿನ ವಿಶಿಷ್ಟ ಹಿರಿಮೆ, ಪರಂಪರೆಗೆ ಆದ ಹಾನಿ ಭಾರತ ಮತ್ತು ಇಡೀ ಜಗತ್ತಿನ ಚರಿತ್ರೆಯಲ್ಲಿ ಪ್ರಾಯಶಃ ಅದ್ವಿತೀಯವಾಗಿದ್ದು, ಮೊಗಲರ ಕಾಲದಲ್ಲಿ ಸೇರಿದಂತೆ ಹಲವು ಶತಮಾನಗಳ ಕಾಲ ನಿರ್ದಿಷ್ಟ ಪ್ರಾಂತ್ಯವಾಗಿ ಬೆಳೆದಿದ್ದ ಪಂಜಾಬು ವಿಶಿಷ್ಟ ಸಾಂಸ್ಕೃತಿಕ - ಸಾಮಾಜಿಕ - ಧಾರ್ಮಿಕ ಪರಿಚಯ ಬೆಳೆಸಿಕೊಂಡಿತ್ತು. ಮೂರು ಪ್ರಮುಖ ಧರ್ಮಗಳ ಸಹಬಾಳ್ವೆ - ಶಾಂತಿಯ ನಾಡಾಗಿತ್ತು. ಸಿಖ್ ಧರ್ಮದ ಹಿಂದೂ ಮತ್ತು ಮುಸ್ಲಿಂ ಧರ್ಮಗಳ ತಿರುಳನ್ನು ಹೊಸೆದು ಮಾಡಿದ ಹೊಸ ಧರ್ಮವಾಗಿತ್ತು. ಪಂಜಾಬ್ ಆರ್ಥಿಕವಾಗಿಯೂ ಮುಂದುವರೆದ ಉದ್ಯಮಶೀಲ ಪ್ರಾಂತ್ಯವಾಗಿತ್ತು. ಎರಡು ದೇಶಗಳ ನಡುವೆ ಇಬ್ಭಾಗದವಾದ ಪಂಜಾಬಿನ ಪ್ರದೇಶಗಳ ನಡುವೆ ಘನಿಷ್ಟ ಆರ್ಥಿಕ ಸಂಬಂಧವಿತ್ತು. ಎರಡೂ ಪ್ರದೇಶಗಳ ಸರಕು-ಸೇವೆಗಳಿಗೆ ಪರಸ್ಪರ ಅವಲಂಬಿಸಿದ್ದವು. ಉದಾಹರಣೆ ಲಾಹೋರ್ ಮತ್ತು ಅಮೃತಸರಗಳ ನಡುವೆ ಜೀವನೋಪಾಯ - ಕೆಲಸ - ವ್ಯಾಪಾರಕ್ಕೆ ಲಕ್ಷಾಂತರ ಜನ ದಿನಾ ಪ್ರಯಾಣ ಮಾಡುತ್ತಿದ್ದರು. ಪಂಜಾಬ್ ಇಬ್ಭಾಗವಾಗಿ ಹೀಗೆ ಪಂಜಾಬಿಗಳ ಜೀವದ ಎಲ್ಲಾ ಆಯಾಮಗಳಿಗೆ ಆಳವಾದ ಗಾಯಗಳಾದವು. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಇನ್ನಷ್ಟು ಬಲಗೊಂಡ ಸಾಮಾಜಿಕ - ಸಾಂಸ್ಕೃತಿಕ-ಧಾರ್ಮಿಕ ಬಿಕ್ಕಟ್ಟು ಒಡೆಯಲು ಮಾಡಿದ ಬ್ರಿಟಿಷ ದಾಳಿಯ ಹಾನಿಗೆ ಇದೂವರೆಗೆ ಪರಿಹಾರ ಸಿಗಲಿಲ್ಲ. ಪಂಜಾಬಿನ ಭಾಷೆ -ಸಾಹಿತ್ಯ-ಹಾಡು - ಸಂಗೀತ-ಕಲೆಗಳ ಬೆಳವಣಿಗೆಗೂ ವಿಭಜನೆ ದೊಡ್ಡ ಅಡ್ಡಿಯಾಯಿತು.

'ಸರ್ಕಾರಿ' ಯಿಂದ 'ಜನತಾ' ಕಡೆಗೆ....

ಈ ಹಿನ್ನೆಲೆಯಲ್ಲಿ 57 ವರ್ಷಗಳ ನಂತರ ಪಂಜಾಬಿನ ಎರಡೂ ಭಾಗಗಳು ಸೇರುವ ಅಪೂರ್ವ ಸನ್ನಿವೇಶ ಮೂಡಿಸಿದ ಈ ಸಮ್ಮೇಳನದ ಮಹತ್ವ ಅರ್ಥಮಾಡಿಕೊಳ್ಳಬೇಕು. ಕ್ರೀಡೆಯಲ್ಲೂ ಎರಡೂ ಪಂಜಾಬ್‌ಗಳು ತಮ್ಮ ದೇಶಗಳಲ್ಲಿ, ಅವಿಭಜಿತ ದೇಶಗಳಲ್ಲೂ ಬೆನ್ನೆಲುಬಾಗಿದ್ದವು. ಪಂಜಾಬಿಗಾದ ಗಾಯ ಮಾಸುವ ದಿಕ್ಕಿನಲ್ಲಿ ಇದು ದೊಡ್ಡ ಹೆಜ್ಜೆ. ಭಾರತ -ಪಾಕಿಸ್ತಾನಗಳ ಸಂಬಂಧಗಳಲ್ಲಿ ಘರ್ಷಣೆ - ಬಿಗುವು ಕಡಿಮೆ ಮಾಡಿ, ಶಾಂತಿ-ಸಹಬಾಳ್ವೆಯತ್ತ ಸಾಗುವುದರಲ್ಲೂ ಇದು ಮಹತ್ವದ ಪಾತ್ರ ವಹಿಸುತ್ತದೆ. ಮುಂದಿನ ವರ್ಷಗಳಲ್ಲಿ ನಡೆಯಲಿರುವ ಸಮ್ಮೇಳನಗಳಲ್ಲಿ ಕ್ರೀಡಾ ಕೂಟಗಳು- ಪಂಜಾಬಿನ ಚಾರಿತ್ರಿಕ ಗಾಯವನ್ನು ಮಾಸಿ ಅದರ ಪಾರಂಪರಿಕ ಹಿರಿಮೆಯನ್ನು ಪುನಃ ಸ್ಥಾಪಿಸಲಿ ಎಂದು ಹಾರೈಸಬೇಕಾಗಿದೆ. ಮೊದಲ ಸಮ್ಮೇಳನ ಬಹಳ ಮಟ್ಟಿಗೆ 'ಸರ್ಕಾರಿ' ಆಗಿತ್ತು. ಮುಂದಿನ ಸಮ್ಮೇಳನಗಳು ವ್ಯಾಪಕ ಜನವಿಭಾಗಗಳು ಪಾಲ್ಗೊಳ್ಳುವಿಕೆಯ 'ಜನತಾ' ಸಮ್ಮೇಳನಗಳಾಗಿ ಪರಿವರ್ತಿತವಾಗಬೇಕು. ☆



ಪಂಜಾಬಿ ಸಮ್ಮೇಳನದಲ್ಲಿ ಪಾಕ್ ಗಾಯಕರು



ಹದಿನೆಂಟನೇ ಸಿಪಿಐ(ಎಂ) ಮಹಾಧಿವೇಶನದತ್ತ

ಪುಟ 7 ರಿಂದ

ಅಲ್ಲ.

ಇನ್ನೊಂದೆಡೆ ಸಿಎಂಪಿ ಯಲ್ಲಿ ಸ್ಪಷ್ಟವಾಗಿ ಹೇಳಿರುವ ಉದ್ಯೋಗ ಭರವಸೆ ಯೋಜನೆಯ ಪ್ರಶ್ನೆಯು ಮೇಲೂ ಸರ್ಕಾರ ಹಿಂದೇಟು ಹಾಕಲಾರಂಭಿಸಿತು. ಎಡಪಕ್ಷಗಳು ಮತ್ತು ರಾಷ್ಟ್ರೀಯ ಸಲಹಾ ಸಮಿತಿಯ ಕೆಲವು ಸದಸ್ಯರ ಒತ್ತಡದ ನಂತರ ಬಹಳ ದುರ್ಬಲಗೊಳಿಸಿದ ಒಂದು ಕಾನೂನನ್ನು ಸಂಸತ್ತಿನಲ್ಲಿ ಮಂಡಿಸುವ ಪ್ರಯತ್ನವನ್ನೀಗ ಮಾಡುತ್ತಿದೆ. ಯುಪಿಎ ಸರ್ಕಾರ 1970 ರ ಪೇಟೆಂಟ್ ಕಾನೂನಿನಲ್ಲಿ ಪ್ರತಿಗಾಮಿ ಬದಲಾವಣೆಗಳನ್ನು ಮಾಡಹೊರಟಿದೆ ಎಂಬ ಸಂದೇಹವೂ ಇದೆ. ಇದು ದೇಶೀ ಔಷಧಿ ಮತ್ತು ಬೀಜ ಉದ್ದಮಗಳ ಮೇಲೆ ಗಂಭೀರ ಪರಿಣಾಮ ಉಂಟು ಮಾಡಿ ದೇಶದ ಜನಸಾಮಾನ್ಯರ ಬದುಕನ್ನು ತಟ್ಟಲಿದೆ. ಸಂಸತ್ತಿನಲ್ಲಿ ವಿರೋಧ ಬರಬಹುದಾದ್ದರಿಂದ ಸರ್ಕಾರ ಡಿಸೆಂಬರ್ 31 ರೊಳಗೆ ಇದನ್ನು ಮಾಡಬೇಕೆಂಬ ಡಬ್ಲ್ಯುಟಿಒ ಸಮಯ ಮಿತಿಯನ್ನು ಪಾಲಿಸಲು ಈ ಬದಲಾವಣೆಗಳನ್ನು ಒಂದು ಸುಗ್ರೀವಾಜ್ಞೆಯ ಮೂಲಕ ತರಬಹುದೆಂಬ ವದಂತಿಗಳೂ ಇವೆ.

ಸಿಎಂಪಿಯಲ್ಲಿ ಸ್ಪಷ್ಟವಾಗಿ ಭರವಸೆ ನೀಡಿದ್ದರೂ ಸರ್ಕಾರ ಕೆಲವು ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಉದ್ದಿಮಗಳನ್ನು ಖಾಸಗೀಕರಿಸುವ ತನ್ನ ಆಶಯವನ್ನು ಬಿಟ್ಟಿಲ್ಲ. ತನ್ನ ಯೋಜನಾ ಸಂಸ್ಥೆಗಳಲ್ಲಿ ಐಎಂಎಫ್- ವಿಶ್ವ ಬ್ಯಾಂಕ್ ಪ್ರತಿನಿಧಿಗಳನ್ನು ನೇಮಿಸಲು, ಈ ಮೂಲಕ ನಮ್ಮ ಆರ್ಥಿಕದಲ್ಲಿ ಅವರು ತೂರಿಕೊಳ್ಳುವ ಅವಕಾಶ ನೀಡಲು ಕೂಡಾ ಸರ್ಕಾರ ಪ್ರಯತ್ನಿಸಿತು. ಭಾರೀ ಗದ್ದಲ ಎಬ್ಬಿಸಿದ ಮೇಲಷ್ಟೇ ಈ 'ಸಹೋದರರನ್ನು' ಹೋಗುವಂತೆ ಹೇಳಲಾಯಿತು. ಈ ಗದ್ದಲದಿಂದ ಕುಪಿತಗೊಂಡು ಆಳರಸರು ಯೋಜನಾ ಆಯೋಗದೊಂದಿಗೆ ಸಂಬಂಧಿತವಾದ ಎಲ್ಲಾ ಸಮಿತಿಗಳನ್ನು ವಿಸರ್ಜಿಸಿದರೆಂಬುದು ಬೇರೆ ಮಾತು.

ಸರಕಾರದ ಈ ಎಲ್ಲಾ ಕ್ರಮಗಳನ್ನು ನೋಡಿದರೆ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದೊಳಗೆ ಸಿಎಂಪಿ ಬುಡಮೇಲು ಮಾಡ ಹೊರಟಿರುವ ಹಾಗೂ ದೇಶೀ - ವಿದೇಶೀ ಬಂಡವಾಳಕ್ಕೆ ಸಾಧ್ಯವಾದ ಎಲ್ಲಾ ಪ್ರಯೋಜನಗಳನ್ನು ಒದಗಿಸಲು ಧಾವಿಸುವ ಒಂದು ಲಾಬ್ಬಿ ಇದೆ ಎಂಬ ಸಂದೇಹ ಪುಷ್ಟಗೊಳ್ಳುತ್ತದೆ. ಯುಪಿಎ ನ ಅಂಗಪಕ್ಷಗಳ ವರ್ಗಸ್ವಭಾವವನ್ನು ಕಂಡಾಗ ಇದರಲ್ಲೇನೂ ಆಶ್ಚರ್ಯವಿಲ್ಲ. ಈ ಪಕ್ಷಗಳ ಆಶಯಗಳ ಬಗ್ಗೆಯೂ ಭ್ರಮೆಯನ್ನಿಟ್ಟುಕೊಳ್ಳಬೇಕಾಗಿಲ್ಲ.

ಆದರೂ ಇನ್ನೊಂದೆಡೆ ಎಡಪಕ್ಷಗಳು ಯುಪಿಎ ಆಳ್ವಿಕೆಯನ್ನು ಹೊರಗಿನಿಂದ ಬೆಂಬಲಿಸುತ್ತಿವೆ. ಇದಕ್ಕೆ ಕಾರಣ ಬಿಜೆಪಿ ಮತ್ತೆ ಅಧಿಕಾರಕ್ಕೆ ಮರಳದಂತೆ ತಡೆಯಬೇಕು ಎಂಬ ಉದ್ದೇಶ. ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹದಿನಾರನೇ ಮಹಾಧಿವೇಶನ (ಕೊಲ್ಕತ್ತಾ, ಅಕ್ಟೋಬರ್ 1998) ಹೇಳಿರುವಂತೆ ಬಿಜೆಪಿ ಹಲವು ಬೂರ್ಜ್ವಾ-ಭೂಮಾಲಕ ಪಕ್ಷಗಳಲ್ಲಿ ಒಂದು ಪಕ್ಷವನ್ನಷ್ಟೇ ಅಲ್ಲ. ಅದೊಂದು ಅತ್ಯಂತ ಕೋಮುವಾದೀ ಪಕ್ಷ, ಅದರ ಹಿಂದೆ ಫ್ಯಾಸಿಸ್ಟ್ ಮಾದರಿಯ, ಪಿತೂರಿ ಸ್ವಭಾವದ ಆರ್‌ಎಸ್‌ಎಸ್ ಇದೆ. ಅದು ದೇಶದ ಮೇಲೆ ಒಂದು ಮತೀಯ ಪ್ರಭುತ್ವವನ್ನು ಹೇರಿ ನಮ್ಮ ಬಹುಮುಖೀ ಹಂದರ ಮತ್ತು ಸಮ್ಮಿಶ್ರ ಸಂಸ್ಕೃತಿಯನ್ನು ಸಾಯಿಸಬಯಸುವಂತದ್ದು. ಆದ್ದರಿಂದ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಪಕ್ಷಗಳ ಒಂದು ಕೂಟದ ಸ್ಥಾನದಲ್ಲಿ ಇನ್ನೊಂದು ಕೂಟ ಬಂದಿದೆಯಷ್ಟೆ ಎನ್ನುವಂತಿಲ್ಲ. ಕೋಮುವಾದಿ ಧಾಳಿಗಳಿಂದ ದೇಶವನ್ನು ರಕ್ಷಿಸುವುದು ಇಂದಿನ ಪರಮಕರ್ತವ್ಯ ಎಂಬ ಸಂಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ರಾಷ್ಟ್ರೀಯ ಐಕ್ಯತೆಯನ್ನು ಕಳಕೊಂಡರೆ, ದೇಶವನ್ನು ಕಳಕೊಂಡಂತೆ ಹಾಗೂ ಎಲ್ಲವನ್ನೂ ಕಳಕೊಂಡಂತೆ. ಈ ದೇಶದ ಜನರು ಧರ್ಮದ ಹೆಸರಿನಲ್ಲಿ ವಿಭಜನೆಗೊಂಡು ಒಬ್ಬರನ್ನೊಬ್ಬರು ಕೊಲ್ಲಲಾರಂಭಿಸಿದರೆ ಯಾರು, ಯಾರ ನೀತಿಗಳಿಗಾಗಿ ಹೋರಾಡುವುದು?

ಮುಳ್ಳಿನ ಹಾದಿ

ಆದ್ದರಿಂದ ಎಡಶಕ್ತಿಗಳು ಮುಳ್ಳಿನ ಹಾದಿಯಲ್ಲಿ ಸಾಗಬೇಕಾಗಿದೆ. ಇನ್ನೊಂದೆಡೆ, ನಮ್ಮ ಆಳರಸರು ಜನ-ವಿರೋಧಿ ನೀತಿಗಳನ್ನು ಅನುಸರಿಸಿದರೆ ಆಗ ಮೂಕಪ್ರೇಕ್ಷಕರಾಗಿರಲು ಸಾಧ್ಯವಿಲ್ಲ. ಅದೇ ವೇಳೆಗೆ ಬಿಜೆಪಿ ಅಧಿಕಾರಕ್ಕೆ ಮರಳಲು ಅವಕಾಶ ಮಾಡಿಕೊಡುವ ಯಾವುದೇ ಕ್ರಮವನ್ನು ಕೈಗೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಸದ್ಯಕ್ಕೆ ಬಿಜೆಪಿ ಹತಾಶಗೊಂಡಿದ್ದರೂ, ಆಂತರಿಕ ಭಿನ್ನಾಭಿಪ್ರಾಯಗಳನ್ನೂ ಅದನ್ನು ಅಲುಗಾಡಿಸಿದ್ದರೂ ಒಂದು ಅತ್ಯಂತ ಕರ್ಕಶ ಕೋಮುವಾದಿ ವೇದಿಕೆಯ ಮೇಲೆ ಮತ್ತೆ ಒಟ್ಟು ಸೇರಲು ಪ್ರಯತ್ನಿಸುತ್ತಿದೆ.

ಎರಡು ನಿರ್ಣಾಯಕ ಅಂಶಗಳಿಂದಾಗಿ ಸಮಸ್ಯೆ ಕ್ಲಿಷ್ಟಗೊಂಡಿದೆ. ಒಂದು, ಆರ್ಥಿಕ ನೀತಿಗಳ ಪ್ರಶ್ನೆಯ ಮೇಲೆ ದೇಶದ ಹೆಚ್ಚಿನ ಪಕ್ಷಗಳು ಒಂದಿಲ್ಲೊಂದು ಮಟ್ಟದವರೆಗೆ ವಿಶ್ವಬ್ಯಾಂಕ್-ಐಎಂಎಫ್ ಮಾರ್ಗವನ್ನು ಅನುಸರಿಸುವ ಒಲವು ಹೊಂದಿವೆ. ಹೀಗೆ ಎಡಶಕ್ತಿಗಳು ಜನಸಾಮಾನ್ಯರ ಜೀವನ ಮಟ್ಟ ಕುಸಿಯದಂತೆ ತಡೆಯಲು ಏಕಾಂಗಿಯಾಗಿಯೇ ಪ್ರಯತ್ನಿಸಬೇಕಾಗಿದೆ. ಎರಡನೆಯದಾಗಿ, ನಮ್ಮ ದೇಶದ ಬಹುಪಾಲು ಜನ ಜಾತ್ಯತೀತರಾದರೂ ನಾವು ಜಾತ್ಯತೀತರೆಂದು ಕರೆಯುವ ಪಕ್ಷಗಳೆಲ್ಲಾ ಒಟ್ಟಿಗಿಲ್ಲ, ಹಲವು ಬಣಗಳಲ್ಲಿ ಹಂಚಿಹೋಗಿದ್ದಾರೆ. ತಾವು ಜಾತ್ಯತೀತರು ಎಂದು ಹೇಳಿಕೊಂಡರೂ, ಬಿಜೆಪಿಯ ಹಿಂದೆ ನಿಂತಿರುವ ಪಕ್ಷಗಳಷ್ಟೇ ಅಲ್ಲ ಎನ್‌ಡಿಎಗೆ ಸೇರಿರದ ಜಾತ್ಯತೀತ ಪಕ್ಷಗಳೂ ಕೂಡಾ ಕೋಮುವಾದಿ ಕೂಟದ ಎದುರು ಹೋರಾಟ ನಡೆಸಲು ಸಾಧ್ಯವಾಗಿಲ್ಲ. ಆದರಿಂದಲೂ ಸಾಕಷ್ಟು ದುಷ್ಪರಿಣಾಮಗಳಾಗಿವೆ. ಜಾತ್ಯತೀತತೆ ಮತ್ತು ರಾಷ್ಟ್ರೀಯ ಐಕ್ಯತೆಯ ಮೇಲೆ ಈ ಎಲ್ಲಾ ಪಕ್ಷಗಳನ್ನು ಒಟ್ಟಿಗೆ ತರುವ ಕೆಲಸ ಅತ್ಯಂತ ಎದೆಗುಂದಿಸುವ ಕೆಲಸವಾದರೂ ಎಡಶಕ್ತಿಗಳು ಈ ದಿಕ್ಕಿನಲ್ಲಿ ತಮ್ಮ ಕೈಲಾದದನೆಲ್ಲಾ ಮಾಡಲೇಬೇಕಾಗುತ್ತದೆ.

ಇನ್ನಷ್ಟು ಸಫಲತೆಗಳತ್ತ

ಇವೆಲ್ಲಾ ಮುಂಬರುವ ಸಿಪಿಐ(ಎಂ) ಮಹಾಧಿವೇಶನ ಗಮನಿಸಬೇಕಾದ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸನ್ನಿವೇಶಗಳು ಹಾಗೂ ಈ ಮೂಲಕ ಬರುವ ಸವಾಲುಗಳನ್ನು ಹೇಗೆ ಎದುರಿಸಬಹುದು ಎಂಬುದನ್ನು ಚರ್ಚಿಸಬೇಕಾಗಿದೆ. ಈಗಾಗಲೇ ಹೇಳಿದಂತೆ ಪರಿಸ್ಥಿತಿ ಅತ್ಯಂತ ಭೀತಿಯುಂಟು ಮಾಡುವಂತದ್ದು, ನಮ್ಮಿಂದ ಇದು ಬಹಳಷ್ಟು ಸಹನೆಯ ಕೆಲಸವನ್ನು ಅಪೇಕ್ಷಿಸುತ್ತದೆ.

> **ಮತದಾತಂಗೆ**
>
> ಬಂಡವಾಳ ಶಾಹಿಗಳ ಆಚೆಕಡೆ ತಳ್ಳಿ
> ಸಮಾನತೆ ಆಡಳಿತ ಬರಬೇಕು ಇಲ್ಲಿ
> ಮತ್ತಿನ್ನು ಕೋಮು ಕುಲ ಅನ್ನುತ್ತ ನೋಡಿ
> ಅಮಾಯಕರ ಕೊಲುವವರ ಹಳ್ಳಕ್ಕೆ ದೂಡಿ
>
> **- ವಿಡಂಬಾರಿ**

ಆದರೂ ಒಂದು ಕಮ್ಯುನಿಸ್ಟ್ ಪಕ್ಷವಾಗಿ ನಮಗೆ ಬೂರ್ಜ್ವಾ-ಭೂಮಾಲಕ ಪಕ್ಷಗಳಿಗೆ ಅವುಗಳ ಪ್ರಕೃತಿಯಿಂದಾಗಿಯೇ ಸಿಗದ ಕೆಲವು ಅನುಕೂಲತೆಗಳಿವೆ. ಇಂತಹ ಒಂದು ಅನುಕೂಲವೆಂದರೆ ನಮಗೆ ಬದ್ಧತೆಯುಳ್ಳ, ಶಿಸ್ತಿನ ಕಾರ್ಯಕರ್ತರ ಒಂದು ಆಧಾರವಿದೆ. ಈ ಬದ್ಧತೆ ಮತ್ತು ಶಿಸ್ತು ಮೇಲಿಂದ ಹೇರಿದ್ದಲ್ಲ, ನಮ್ಮ ಕಾರ್ಯಕರ್ತರೆ ಸ್ವತಃ ಮನಗಂಡದ್ದು. ಇದರ ಫಲವೆಂದರೆ ನಮ್ಮ ಸಮರ್ಪಿತ ಕಾರ್ಯಕರ್ತರು ತಮ್ಮ ಸಂಕುಚಿತ ವೈಯಕ್ತಿಕ ಪ್ರಯೋಜನಗಳ ದೃಷ್ಟಿಯಿಂದ ಯೋಜಿಸದೆ ತಮ್ಮ ನಿಜವಾದ ಹಿತಾಸಕ್ತಿ ಜನಸಮೂಹಗಳ ಹಿತಾಸಕ್ತಿಗಳೊಂದಿಗೆ, ತಮ್ಮ ಉದ್ಧಾರ ಜನಸಾಮನ್ಯರ ಉದ್ಧಾರದೊಂದಿಗೆ ಬೆಸೆದುಕೊಂಡಿದೆ ಎಂದು ಕಾಣುತ್ತಾರೆ. ನಮ್ಮ ಕಾರ್ಯಕರ್ತರ ಈ ದೃಢ ವಿಚಾರವೇ ಅವರು ನಮ್ಮ ಸಮಾಜದ ಮೂಲಭೂತ ಬದಲಾವಣೆಗೆ, ಭಾರತದ ಪುನರುಜ್ಜೀವನಕ್ಕೆ ಶ್ರಮಿಸಲು ಪ್ರೇರೇಪಿಸುತ್ತದೆ.

ಈ ಕಾರ್ಯಕರ್ತರೇ ಈಗ ದೇಶದ ಮೂಲೆ-ಮೂಲೆಗಳಲ್ಲೂ, ನಮ್ಮ ಶಾಖೆಗಳಿರುವ ಎಲ್ಲೆಡೆಗಳಲ್ಲೂ ತೀವ್ರ ಚರ್ಚೆಗಳ ಪ್ರಕ್ರಿಯೆಯಲ್ಲಿದ್ದಾರೆ. ಪಕ್ಷದ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಸ್ಥಳೀಯ, ವಲಯ/ಪ್ರದೇಶ ಮತ್ತು ಜಿಲ್ಲಾ ಸಮ್ಮೇಳನಗಳು ಸುಮಾರಾಗಿ ಈ ವೇಳೆಗಾಗಲೇ ಪೂರ್ಣಗೊಳ್ಳುತ್ತಿವೆ. ರಾಜ್ಯ ಸಮ್ಮೇಳನಗಳ ಪ್ರಕ್ರಿಯೆ ಆರಂಭವಾಗಿದೆ. ಈ ಸಮ್ಮೇಳನಗಳಲ್ಲಿ ಮುಕ್ತ ಮತ್ತು ನೇರ ಚರ್ಚೆಗಳು ಮತ್ತು ಸಮಿತಿಗಳ ಮತ್ತು ಕಾರ್ಯದರ್ಶಿಗಳ ಚುನಾವಣೆಗಳು, ಬೂರ್ಜ್ವಾ ಮಾಧ್ಯಮಗಳು ನಮ್ಮ ಮೇಲೆ ಏನೇನೋ ಬೈಗುಳಗಳ ಮಳೆಗರೆದರೂ ಕೂಡಾ, ಒಂದು ಕಮ್ಯುನಿಸ್ಟ್ ಪಕ್ಷವಾಗಿ ನಾವೊಂದು ಆಮೂಲಾಗ್ರವಾಗಿ ಪ್ರಜಾಸತ್ತಾತ್ಮಕ ಪಕ್ಷ ಎಂದು ಮತ್ತೊಮ್ಮೆ ಸ್ಥಿರಗೊಂಡಿದೆ. ಈ ಪರಂಪರೆಗನುಗುಣವಾಗಿ ನಮ್ಮ ಹದಿನೆಂಟನೇ ಮಹಾಧಿವೇಶನವೂ ಪೂರ್ಣಗೊಳ್ಳಲಿದೆ.



ನಿಜ, ನಾವು ಕಮ್ಯುನಿಸ್ಟರು ಪ್ರತಿದಿನ ಬೂರ್ಜ್ವಾ-ಭೂಮಾಲಕ ಪಕ್ಷಗಳಲ್ಲಿ ಕಾಣುವ ಒಂದು ನಿರ್ದಿಷ್ಟ ರೀತಿ ಪ್ರಜಾಪ್ರಭುತ್ವವನ್ನು ಹೊಂದಿಲ್ಲ. ಈ ಪಕ್ಷಗಳ ಸದಸ್ಯರು, ಅದಕ್ಕಿಂತಲೂ ಹೆಚ್ಚಾಗಿ ಮುಖಂಡರು ತೀವ್ರ ಗುಂಪುಗಾರಿಕೆಯಲ್ಲಿ ಮತ್ತು ಅತ್ಯಂತ ಹೀನ ರೀತಿಯಲ್ಲಿ ಪರಸ್ಪರ ಕೆಸರೆರಚುವುದರಲ್ಲಿಯೇ ಆನಂದ ಪಡೆಯುತ್ತಾರೆ. ಇವೆಲ್ಲವೂ ಅತ್ಯಂತ ಹೀನ ಸ್ವಾರ್ಥದಿಂದಲೇ ಪ್ರೇರಿತವಾದದ್ದು. ಎಷ್ಟೆಂದರೂ ಈ ಸ್ವಾರ್ಥದಿಂದಾಗಿ ಅವರು ಒಂದು ಪಕ್ಷದಿಂದ ಇನ್ನೊಂದಕ್ಕೆ ಹಾರುತ್ತಾ ಇರುತ್ತಾರೆ. ನಿಜ, ಬಿಜೆಪಿ ತಾನೊಂದು ನೀತಿಬದ್ಧ ಪಕ್ಷ ಎಂಬ ಪ್ರಚಾರದಿಂದ ಜನಗಳನ್ನು ತಪ್ಪು ದಾರಿಗೆಳೆಯುವಲ್ಲಿ ಯಶಸ್ವಿಯಾಯಿತು. ಆದ್ದರಿಂದ ಇತ್ತೀಚಿನ ಘಟನೆಗಳು ಪ್ರದರ್ಶಿಸಿರುವಂತೆ ಈ 'ಭಿನ್ನರೀತಿಯ ಪಕ್ಷ' ನಿಜವಾಗಿ 'ಭಿನ್ನಾಭಿಪ್ರಾಯಗಳ ಪಕ್ಷ' ಎಂದು ಸಿದ್ಧಗೊಂಡಿದೆ. ಇನ್ನು, ಅದು ಬಹಳವಾಗಿ ಡಂಗುರ ಸಾರಿದ ಶಿಸ್ತು ಯಾವ ರೀತಿಯದ್ದು? ಬಡ ಅಡ್ವಾಣಿ ನಿದ್ದೆಗೆಟ್ಟು ಬಿಜೆಪಿಯನ್ನು ಅವರೇ ಹೇಳುವ ಈ ಕಾಂಗ್ರೆಸ್ಸೀಕರಣದಿಂದ ಹೇಗೆ ಉಳಿಸುವುದು ಎಂದು ಯೋಚಿಸಬೇಕಾಗಿ ಬಂದಿದೆ. ಖಂಡಿತ, ನಾವು ಕಮ್ಯುನಿಸ್ಟರಿಗೆ ಇಂತಹ ಪ್ರಜಾಪ್ರಭುತ್ವ ಅಥವಾ ಶಿಸ್ತಿಗೆ ಏನೂ ಗೌರವ ನೀಡುವುದಿಲ್ಲ, ಬದಲಾಗಿ ನಮ್ಮ ಶಿಸ್ತು ಎಂದರೆ ಪ್ರಜಾಸತ್ತಾತ್ಮಕ ಕೇಂದ್ರವಾದದ ನಮ್ಮ ಬೆಲೆ ಬಾಳುವ ಪರಿಕಲ್ಪನೆಯಿಂದ

ಮೂಡಿಬಂದದ್ದು. ನಮ್ಮ ಕಾರ್ಯಕ
ಸಂಪೂರ್ಣ ಪ್ರಜಾಪ್ರಭುತ್ವವನ್ನು ಸ
ಮನೋಭಾವದಿಂದ ಚಲಾಯಿಸುತ
ದ್ವೇಷಾಸೂಯೆಗಳಿಲ್ಲದೆ ಟೀಕೆ, ಸ್ವಯಂ
ನಡೆಸುತ್ತಾರೆ, ತಮ್ಮೆದುರು ಇರುವ ಪ್ರಶ್ನೆಗಳು
ಸಮಸ್ಯೆಗಳ ಮೇಲೆ ತೀರ್ಮಾನಕ್ಕೆ ಬ
ನಿರ್ಧಾರ ಕೈಗೊಳ್ಳುವ ಮೊದಲು ಅ
ಆಮೂಲಾಗ್ರವಾಗಿ ಚರ್ಚಿಸುತ್ತಾರೆ, ಆದರೆ
ನಿರ್ಣಯ ಕೈಗೊಂಡ ಮೇಲೆ ಅದು ಸಂಬಂ
ಇಡೀ ಘಟಕಗಳ ನಿರ್ಣಯವಾಗುತ್ತದೆ, ಎ
ಅದನ್ನು ಪ್ರಾಮಾಣಿಕವಾಗಿ ಕಾರ್ಯಗತ ಮ
ಬದ್ಧರಾಗುತ್ತಾರೆ. ಹೀಗೆ ಒಂದು ಕಮ್ಯುನಿಸ್
ಪ್ರಜಾಪ್ರಭುತ್ವ ಮತ್ತು ಕೇಂದ್ರವಾದದ ಬ
ಆರೋಗ್ಯಕರ ಮಿಶ್ರಣ ಹೊಂದಲು ಪ್ರಯತ್ನಿಸ
ಇದರಲ್ಲಿ ವ್ಯಕ್ತಿ ಸಮಷ್ಟಿಗೆ ಒಳಗಾಗುತ
ಅಲ್ಪಮತದವರು ಬಹುಮತಕ್ಕೆ ಬಾಗುತ
ಕೆಳಗಿನ ಸಮಿತಿ ಮೇಲಿನ ಸಮಿತಿಗೆ ಹಾಗೂ
ಪಕ್ಷ ಪಕ್ಷದ ಮಹಾಧಿವೇಶನ ಚುನಾಯಿಸಿದ ಹ
ಎರಡು ಮಹಾಧಿವೇಶನಗಳ ನಡುವೆ ಪ
ಅತ್ಯುನ್ನತ ನಿರ್ಣಯ ಕೈಗೊಳ್ಳುವ ಸಮಿತಿ
ಕೇಂದ್ರ ಸಮಿತಿಗೆ ಅಧೀನವಾಗುತ್ತ

ಈ ಪ್ರಜಾಸತ್ತಾತ್ಮಕ ಕೇಂದ್ರವಾ
ಪರಿಕಲ್ಪನೆ ಒಂದು ನಿರ್ಣಯ
ಪರಾಮರ್ಶಿಸಬೇಕು ಎಂದು ಯಾ
ಸದಸ್ಯರಿಗೆ ಒತ್ತಾಯಿಸುವ ಹ
ನೀಡುತ್ತದೆ, ಆದರೆ ಆ ನಿರ್ಣಯ
ಕಾರ್ಯತಃ ಪರೀಕ್ಷಿಸಲು ಸಾಕ
ಸಮಯ ಕೊಟ್ಟ ಮೇಲೆ. ಏಕೆ
ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆ
ಬೋಧಿಸಿದಂತೆ ಒಂದು ನಿಲ
ಸರಿಯೇ, ಅಲ್ಲವೇ ಎಂದು ಪರೀಕ್ಷಿ
ಏಕೈಕ ಕ್ರಮವೆಂದರೆ ಆಚರಣೆ. ಎರ
ಯದಾಗಿ, ನಾವು ಸದಾ ಪ್ರಜಾಸತ
ಮತ್ತು ಅಧಿಕಾರಶಾಹಿ ಕೇಂದ್ರವಾದದ ನಡು
ಸೀಮಾರೇಖೆ ಕೂದಲೆಳೆಯಷ್ಟು ತೆಳ್ಳಗಿದೆ ಎ
ಲೆನಿನ್ ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಳ್ಳು
ಹಾಗೂ ಪ್ರಜಾಸತ್ತಾತ್ಮಕ ಕೇಂದ್ರವಾದ
ಅಧಿಕಾರಶಾಹಿ ಕೇಂದ್ರವಾಗದಂತೆ ನೋಡಿಕೊ
ಪ್ರಯತ್ನಿಸುತ್ತೇವೆ.

ಇಂತಹ ಒಂದು ಭಾವನೆಯಿಂದ ಇಡೀ
ಮೇಲಿಂದ ಕೆಳಗಿನವರೆಗೆ ಎಲ್ಲ ಕೇಂದ್ರ ಸ
ಒಂದು ಮಹಾಧಿವೇಶನ ಆರಂಭವಾಗುವ ಮ
ತಿಂಗಳ ಮೊದಲು ಕೇಂದ್ರ ಸಮಿತಿ ಬಿಡು
ಮಾಡಬೇಕಾದ ಕರಡು ರಾಜಕೀಯ ನಿರ್ಣಯ
ಚರ್ಚಿಸುತ್ತೇವೆ. ಈ ಬಾರಿ ಈ ಕರಡು
ಅಂತ್ಯದಲ್ಲಿ ಅಥವಾ ಫೆಬ್ರವರಿ ಆರಂಭ
ಬಿಡುಗಡೆಯಾಗುತ್ತದೆ. ಎಲ್ಲಾ ಘಟಕಗಳು
ಆಮೂಲಾಗ್ರವಾಗಿ ಚರ್ಚಿಸುತ್ತವೆ, ಸದ
ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ
ದಿನಾಂಕದೊಳಗೆ ತಮ್ಮ ತಿದ್ದುಪಡಿಗ
ಕಳಿಸುತ್ತಾರೆ. ಕೇಂದ್ರ ಸಮಿತಿ ಈ ಪ್ರತಿಯೊ
ತಿದ್ದುಪಡಿಗಳನ್ನು ಗಮನಿಸಿ ಅದರ
ವರದಿಯನ್ನು ಪಕ್ಷದ ಮಹಾಧಿವೇ
ಸಲ್ಲಿಸುತ್ತದೆ. ನಂತರ ಈ ದಸ್ತಾವೇಜು
ತಿದ್ದುಪಡಿಗಳನ್ನು ಮಹಾಧಿವೇಶ
ಚರ್ಚಿಸಲಾಗುತ್ತದೆ. ಅಲ್ಲಿ ಚುನಾ
ಪ್ರತಿನಿಧಿಗಳು ಇನ್ನಷ್ಟು ತಿದ್ದುಪಡಿ
ಸೂಚಿಸುತ್ತಾರೆ. ಸೂಕ್ತ ತಿದ್ದುಪಡಿ
ಅಳವಡಿಸಿದ ನಂತರ ದಸ್ತಾವೇಜನ್ನು ಮತ
ಅಂಗೀಕರಿಸಲಾಗುತ್ತದೆ.

ಇದು ನಾವು ಕಮ್ಯುನಿಸ್ಟರು, ಮುಂ
ಪಕ್ಷದ ಮಹಾಧಿವೇಶನ ಮುಂದಿನ ಸ
ಮೂರು ವರ್ಷಗಳಿಗೆ ಒಂದು ಮಾ
ಅಂಗೀಕರಿಸುವವರೆಗೆ ಮತ್ತೊಮ್ಮೆ ಅನು
ಪ್ರಜಾಸತ್ತಾತ್ಮಕ ಪ್ರಕ್ರಿಯೆ. ಪ್ರಜಾಸ
ಕೇಂದ್ರವಾದದ ನಮ್ಮ ಪರಿ
ಬದ್ಧರಾಗಿರುವವರೆಗೆ ಜನಸಮೂಹಗ
ಸಂಪರ್ಕವೂ ಭದ್ರವಾಗಿರುತ್ತದೆ, ಅ
ಇನ್ನಷ್ಟು ಬಲಗೊಳ್ಳುತ್ತದೆ ಮತ
ಮುಂಬರುವ ದಿನಗಳಲ್ಲಿ ಹೊಸ ಶಿ
ತಲುಪುತ್ತೇವೆ ಎಂಬ ವಿಶ್ವಾಸ

17 ನೇ ಪೋರ್ಚುಗೀಸ್ ಕಮ್ಯುನಿಸ್ಟ್ ಮಹಾಧಿವೇಶನದ ಘೋಷಣೆ

'ಮಹಾನ್ ಕ್ರಾಂತಿಕಾರಿ ಸಾಧ್ಯತೆಗಳ ಪರ್ವವಿದು'

ನವೆಂಬರ್ ಕೊನೆಯ ವಾರದಲ್ಲಿ ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ 17ನೇ ಮಹಾಧಿವೇಶನ ರಾಜಧಾನಿ ಲಿಸ್ಬನ್ ಬಳಿ ಇರುವ ಅಲ್ಮಡಾ ಎಂಬ ಪಟ್ಟಣದಲ್ಲಿ ಜರುಗಿತು. 16ನೇ ಮಹಾಧಿವೇಶನದ ನಂತರ ಅಂತರ್‍ರಾಷ್ಟ್ರೀಯ - ರಾಷ್ಟ್ರೀಯದ ರಾಜಕೀಯ - ಸೈದ್ಧಾಂತಿಕ - ಸಂಘಟನೆ ಎಲ್ಲಾ ರಂಗಗಳಲ್ಲಿ ತೀವ್ರ ಬಿಕ್ಕಟ್ಟು ಎದುರಿಸಿದ ಪೋರ್ಚುಗೀಸ್ ಪಕ್ಷ ಇವೆಲ್ಲವನ್ನು ಸಮರ್ಥವಾಗಿ ಎದುರಿಸಿ 17ನೇ ಮಹಾಧಿವೇಶನದಲ್ಲಿ ಮುನ್ನಡೆ ಸಾಧಿಸಲು ಪಣತೊಟ್ಟಿದೆ. ಪ್ರಸ್ತುತ ಸನ್ನಿವೇಶದಲ್ಲಿ ಜಗತ್ತಿನ ಕ್ರಾಂತಿಕಾರಿ ಶಕ್ತಿಗಳು ಎದುರಿಸುತ್ತಿರುವ ಸಂಕಷ್ಟಗಳು, ಅಪಾಯಗಳ ಕೂಲಂಕುಷ ವಿಶ್ಲೇಷಣೆ ಮಾಡುತ್ತಲೇ, ಮಹಾಧಿವೇಶನ ಇದು ಚಾರಿತ್ರಿಕ ಬದಲಾವಣೆಗಳ ಮಹಾನ್ ಕ್ರಾಂತಿಕಾರಿ ಸಾಧ್ಯತೆಗಳ ಪರ್ವವಿದು ಎಂದು ಭರವಸೆ ಮೂಡಿಸುವ ಘೋಷಣೆ ಮಾಡಿದೆ.

ಮಹಾಧಿವೇಶನದಲ್ಲಿ ಯೆಚೂರಿ

...ರಡನೇ ಅತಿ ದೀರ್ಘ ಫ್ಯಾಸಿಸ್ಟ್ (ನೆರೆಯ ...ಯಣ್ಣ' ಸ್ಪೈನ್‌ನ ನಂತರ) ಆಳ್ವಿಕೆ ಮತ್ತು ಅದಕ್ಕೆ ...ತಿರೋಧ ಕಂಡಿದೆ ಪೋರ್ಚುಗಲ್. ಫ್ಯಾಸಿಸ್ಟ್ ...ಳ್ವಿಕೆ ವಿರುದ್ಧ ಅತ್ಯಂತ ದೀರ್ಘ (ಹಲವು ದಶಕಗಳ ...ಲ) ಭೂಗತ ಪ್ರತಿರೋಧದಲ್ಲಿ ಅತಿದೊಡ್ಡ ...ಹತ್ವದ ಪಾತ್ರ ವಹಿಸಿದ ಹೆಗ್ಗಳಿಕೆ ಪೋರ್ಚುಗೀಸ್ ...ಮ್ಯುನಿಸ್ಟ್ ಪಕ್ಷದ್ದು. ಏಪ್ರಿಲ್ 1974 ರ ...ಜಾಪ್ರಭುತ್ವ ಕ್ರಾಂತಿಯ ನಂತರವೇ ...ಹಿರಂಗವಾಗಿ ರಾಜಕೀಯ ಚಟುವಟಿಕೆ ...ರಂಭಿಸಿದ ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷ ...ಮನಾರ್ಹ ಬೆಳವಣಿಗೆ ಕಂಡಿದೆ. ಮಹಾಧಿವೇಶನ ...ಡೆದ ಅಲ್ಮಡಾ ಕಮ್ಯುನಿಸ್ಟರು ಆಳುತ್ತಿರುವ 18 ...ುನಿಸಿಪಾಲಿಟಿಗಳಲ್ಲಿ (ಒಟ್ಟು 209 ...ುನಿಸಿಪಾಲಿಟಿಗಳಲ್ಲಿ) ಒಂದು. ಅಲ್ಮಾಡಾದ ...ೇಯರ್ ಓರ್ವ ಕಮ್ಯುನಿಸ್ಟ್ ಮಹಿಳೆ. ಇನ್ನೂ ...ಲವು ಮುನಿಸಿಪಾಲಿಟಿಗಳಲ್ಲಿ ಪೂರ್ಣ ಬಹುಮತ ...ಲ್ಲದಿದ್ದರೂ, ಇತರ ಎಡ-ಪ್ರಜಾಸತ್ತಾತ್ಮಕ ಮಿತ್ರ ...ಕ್ಷಗಳೊಂದಿಗೆ ಪೂರ್ಣ ನಿಯಂತ್ರಣ ಹೊಂದಿವೆ.


ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ 17ನೇ ...ಹಾಧಿವೇಶನದಲ್ಲಿ 62 ಸೋದರ ಕಮ್ಯುನಿಸ್ಟ್ ಎಡಪಕ್ಷಗಳ ಸೌಹಾರ್ದ ಪ್ರತಿನಿಧಿಗಳು 47 ...ೇಶಗಳಿಂದ ಬಂದಿದ್ದರು. ಸಿಪಿಐ(ಎಂ)ನ ...ತಾರಾಂ ಯೆಚೂರಿ ಅವರಲ್ಲಿ ಒಬ್ಬರಾಗಿದ್ದರು. ... ಸದಸ್ಯರಿಗೆ ಒಬ್ಬರಂತೆ ಆಯ್ಕೆಯಾದ 1307 ...ತಿನಿಧಿಗಳು ಮಹಾಧಿವೇಶನದಲ್ಲಿ ...ಗವಹಿಸಿದ್ದರು. ಪ್ರತಿನಿಧಿಗಳ ವರ್ಗಮೂಲ ...ಕ್ಷದ ಸದಸ್ಯತ್ವದ ವರ್ಗ ರಚನೆಯನ್ನು ...ತಿನಿಧಿಸುತಿತ್ತು. ಪ್ರತಿನಿಧಿಗಳಲ್ಲಿ ಶೇಕಡಾ 58 ...ರ್ಮಿಕ ವರ್ಗ - ಉದ್ಯೋಗಿಗಳು. ಶೇಕಡಾ ... ಬುದ್ಧೀಜೀವಿ-ಮಧ್ಯಮ ವರ್ಗಗಳವರು. ...ಮಾರು ಕಾಲುಭಾಗ ಮಹಿಳೆಯರು. ಶೇಕಡಾ ... ಪ್ರತಿನಿಧಿಗಳು ಕಳೆದ ಮಹಾಧಿವೇಶನದ ನಂತರ ...ಕ್ಷ ಸೇರಿದವರು.

...ವಾಲುಗಳ ಸುಳಿಯಲ್ಲಿ

ಪಕ್ಷದ ಮಹಾಧಿವೇಶನ ಹಲವುರಂಗಗಳಲ್ಲಿ ...ಷ್ಟ ಪರಿಸ್ಥಿತಿಯಲ್ಲಿ ನಡೆಯುತ್ತಿತ್ತು. ...ಂತರ್‍ರಾಷ್ಟ್ರೀಯವಾಗಿ ಸಾಮ್ರಾಜ್ಯಶಾಹಿ ಇರಾಕ್ ...ಯುದ್ಧ - ಅತಿಕ್ರಮಣದಂತಹ ಅಟ್ಟಹಾಸ ...ದರ್ಶಿಸುತ್ತಿದೆ. ಬಂಡವಾಳಶಾಹಿ ಶಕ್ತಿಗಳು ...ುರೋಪಿನಲ್ಲಿ ಮತ್ತು ಪೋರ್ಚುಗಲ್ಲನಲ್ಲಿ ...ುರೋಪಿಯನ್ ಒಕ್ಕೂಟದ ...ಜಕೀಯ- ಆರ್ಥಿಕ ಅಧಿಪತ್ಯದ ಮೂಲಕ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ಆಕ್ರಾಮಕವಾಗಿದೆ. ಆ ಮೂಲಕ ಯುರೋಪಿನ ಕಾರ್ಮಿಕ ವರ್ಗ ಮತ್ತು ದುಡಿಯುವ ಜನತೆ ದಶಕಗಳ ಹೋರಾಟದಲ್ಲಿ ಗಳಿಸಿದ ಆರ್ಥಿಕ - ಸಾಮಾಜಿಕ ಸಾಧನೆಗಳನ್ನು ಹೊಸಕಿ ಹಾಕಲು ಪ್ರಯತ್ನಿಸುತ್ತಿದೆ. ಪೋರ್ಚುಗಲ್‌ನಲ್ಲೂ ಅಧಿಕಾರಕ್ಕೆ ಸೋಶಲಿಸ್ಟ್ ಮತ್ತು ಇತರ ಪಕ್ಷಗಳ, ಸರ್ಕಾರಗಳು ಬಲಪಂಥೀಯ ಜನ-ವಿರೋಧಿ ನೀತಿಗಳನ್ನು ಮುಂದುವರೆದು ಇನ್ನಷ್ಟು ಆಕ್ರಾಮಕವಾಗಿದೆ. ಈ ನಡುವೆ ಪಕ್ಷ ಆಂತರಿಕವಾಗಿಯೂ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿತ್ತು. ಪಕ್ಷದ ಮೂಲಭೂತ ನೀತಿಗಳು, ಧೋರಣೆಗಳು, ಸಂಘಟನಾ ನೀತಿಗಳನ್ನು ಪ್ರಶ್ನಿಸುವ ಕೆಲವು ಗುಂಪುಗಳ ಪ್ರಚಾರ ಸಹ ಇದೇ ಅವಧಿಯಲ್ಲಿ ಕಂಡುಬಂತು.

ಈ ಎಲ್ಲಾ ಸವಾಲುಗಳನ್ನು ಎದುರಿಸಿ, ಅರಗಿಸಿಕೊಂಡು ಮಹಾಧಿವೇಶನ ಪಕ್ಷದ ಹಾದಿ ಮತ್ತು ಸಂಘಟನಾ ನೀತಿ ಬಗ್ಗೆ ಎಲ್ಲಾ ಸದಸ್ಯರನ್ನು ಒಗ್ಗೂಡಿಸಿ ಮುಂದಕ್ಕೆ ಒಯ್ಯುವ ವರದಿಯನ್ನು ಅಂಗೀರಿಸಿತು. ಮಹಾಧಿವೇಶನದ ಮೊದಲೇ ಫೆಬ್ರುವರಿಯಲ್ಲೇ ಆರಂಭವಾದ ಈ ಪ್ರಕ್ರಿಯೆ 1100 ಸದಸ್ಯರ ತಿದ್ದುಪಡಿ-ಕೊಡುಗೆಯಿಂದ ಮಹಾಧಿವೇಶನದಲ್ಲಿ ಕೊನೆಗೊಂಡಿತು. ಪ್ರಮುಖ ವರದಿ - ಪ್ರಸ್ತಾವಗಳು ಭಾರಿ ಬಹುಮತದಿಂದ (1-2 ವಿರುದ್ಧ ಮತಗಳು) ಮಂಜೂರಾಯಿತು. ಹೊಸ 176 ಸದಸ್ಯರ ಕೇಂದ್ರ ಸಮಿತಿ ಆಯ್ಕೆಯಾಯಿತು. 22 ಸದಸ್ಯರ ಪೊಲಿಟ್ ಬ್ಯೂರೋ ಮತ್ತು 10 ಸದಸ್ಯರ ಸೆಕ್ರೆಟರಿಯಾಟ್ ಆಯ್ಕೆ ಮಾಡಿತು. ಪ್ರಧಾನ ಕಾರ್ಯದರ್ಶಿ ಬದಲಾಯಿಸಲಾಯಿತು. ಹೊಸ ಪ್ರಧಾನ ಕಾರ್ಯದರ್ಶಿ 14ನೇ ವಯಸ್ಸಿನಲ್ಲೇ ಪಕ್ಷ ಸೇರಿದ ಲೋಕ ಕೈಗಾರಿಕಾ ಕಾರ್ಮಿಕ. ಎಲ್ಲಾ ಸವಾಲುಗಳನ್ನು ಎದುರಿಸಿ, ಪಕ್ಷದ ಹಾದಿ ಮತ್ತು ಸಂಘಟನಾ ಐಕ್ಯತೆ ರೂಪಿಸಿದ ಈ ಮಹಾಧಿವೇಶನ, ಪಕ್ಷದ ಇತ್ತೀಚಿನ ಚರಿತ್ರೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲು.

ಪಕ್ಷದ ಮಹಾಧಿವೇಶನ ವರದಿ, ಕಲಾಪಗಳಿಂದ ಆಯ್ದ ಕೆಲವು ತುಣುಕುಗಳನ್ನು ಇಲ್ಲಿ ಕೊಡಲಾಗಿದೆ.



ಮಹಾಧಿವೇಶನದಲ್ಲಿ ಪ್ರತಿನಿಧಿಗಳು

ಕ್ರಾಂತಿಕಾರಿ ಸಾಧ್ಯತೆಯ ಪರ್ವಕಾಲ....

"......(ಕಮ್ಯುನಿಸ್ಟ್ ಪಕ್ಷಗಳು ಸಾಮ್ರಾಜ್ಯಶಾಹಿ - ಬಂಡವಾಳಶಾಹಿ ಶಕ್ತಿಗಳಿಗೆ) ಪ್ರತಿರೋಧ ಒಡ್ಡುವ ಮತ್ತು ಬಲಗೊಳ್ಳುವ ಕಾಲವಿದು. ಆದರೆ ಅದೇ ಸಮಯದಲ್ಲಿ ಕ್ರಾಂತಿಕಾರಿ ಸಾಧ್ಯತೆಗಳ ಪರ್ವಕಾಲ ಕೂಡಾ. ಶೋಷಣೆ, ದಮನ ಮತ್ತು ಯುದ್ಧದ ವಿರುದ್ಧ ಎಲ್ಲೆಡೆ ಹೋರಾಟ ಪ್ರತಿರೋಧ ಬೆಳೆಯುತ್ತಿದೆ. ಎಲ್ಲಾ ಕಡೆ ನಡೆಯುತ್ತಿರುವ ಕದನಗಳು ಜಾಗತಿಕವಾಗಿ ಈಗಿರುವ ವರ್ಗಶಕ್ತಿಗಳ ಬಲಾಬಲವನ್ನು ಗಮನಾರ್ಹವಾಗಿ ಬದಲಾಯಿಸ ಲಿವೆ. ಇತರ ಮಹಾನ್ ಚಾರಿತ್ರಿಕ ಪರ್ವಕಾಲ ಗಳಂತೆ ಈ ಅವಧಿಯಲ್ಲೂ ಮಹಾನ್ ಸಂಕಷ್ಟಗಳ ಮತ್ತು ಅಪಾಯಗಳು ಹಾಗೂ ಹೋರಾಟ ಮುನ್ನಡೆಯುವ ಮತ್ತು ಕ್ರಾಂತಿಕಾರಿ ಶಕ್ತಿಗಳನ್ನು ವಿಸ್ತರಿಸುವ ಮಹಾನ್ ಸಾಧ್ಯತೆಗಳು ಇವೆ...."

☆

ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಮುಂದಿರುವ ಸವಾಲುಗಳೇನು?

ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಮತ್ತು ಕ್ರಾಂತಿಕಾರಿ ಚಳುವಳಿಯ ಪುನರುತ್ಥಾನದ ಹಾದಿಯಲ್ಲಿ ಸಮಸ್ಯೆಗಳು, ಎಡರು-ತೊಡರುಗಳಿವೆ...... ಸೋವಿಯತ್ ಒಕ್ಕೂಟದ ವಿಘಟನೆ ಮತ್ತು ಯುರೋಪಿನ ಸಮಾಜವಾದದ ಸೋಲು ಪರಿಣಾಮವಾಗಿ ಕಮ್ಯುನಿಸ್ಟ್ ಪಕ್ಷಗಳು ದುರ್ಬಲವಾಗಿವೆ. ಇದರಿಂದಾಗಿ ಪುಟ್ಟ- ಭೂರ್ಜ್ವಾ, ತೀವ್ರ ಸುಧಾರಣಾವಾದಿ, ಅರಾಜಕವಾದಿ ಮತ್ತು ಕಮ್ಯುನಿಸ್ಟ್ - ವಿರೋಧಿ ಧೋರಣೆಗಳು ಬೇರು ಬಿಡುತ್ತಿವೆ. ದೊಡ್ಡ ಪಕ್ಷಗಳು ತಮ್ಮ ಮೂಲಭೂತ ಸ್ವಭಾವ-ಪರಿಚಯ ಬದಲಾಯಿಸಲು ಒಳಗಿಂದ - ಹೊರಗಿಂದ ಒತ್ತಡ ಎದುರಿಸುತ್ತಿವೆ. ಕಮ್ಯುನಿಸ್ಟ್ ಪಕ್ಷಗಳ ಮೂಲಭೂತ ಸ್ವರೂಪ - ರಚನೆ (ಕ್ರಾಂತಿಕಾರಿ ಸಿದ್ಧಾಂತ, ವರ್ಗಸ್ವಭಾವ, ಸಂಘಟನಾ ಸ್ವರೂಪ, ಸಮಾಜವಾದಿ ಗುರಿ) ಬದಲಾಯಿಸಲು ಒತ್ತಡ ಹೇರಲಾಗುತ್ತಿದೆ. ಇವೆಲ್ಲಾ ಶಕ್ತಿಗಳು ಕಮ್ಯುನಿಸ್ಟ್ ಪಕ್ಷಗಳನ್ನು ಕೆಲವು 'ಎಡ-ವಾದಿ' ಪ್ರಾಜೆಕ್ಟ್‌ಗಳಾಗಿ ಬದಲಾಯಿಸಬಯಸುತ್ತಿವೆ..."


ಪೋರ್ಚುಗೀಸ್ ಕಮ್ಯುನಿಸ್ಟ್ ಮುಖಂಡರೊಂದಿಗೆ ...

...ಇಂದು ಕಮ್ಯುನಿಸ್ಟರೇನು ಮಾಡಬೇಕು?

"...ನಮ್ಮ ಧೋರಣೆಗಳಿಗೆ, ...ಂಬಿಕೆಗಳಿಗೆ ಬದ್ಧವಾಗಿರಬೇಕು. ತಕ್ಷಣದ ...ುರಿಗಳಿಗೆ ಹೋರಾಟವನ್ನು, ...ಂಡವಾಳಶಾಹಿ - ವಿರೋಧಿ ...ಬದಲಾವಣೆಯ ವ್ಯಾಪಕ ಗುರಿಯೊಂದಿಗೆ ...ಯೋಜಿಸಬೇಕು. ನೀತಿಗೆಟ್ಟ ವ್ಯಾವಹಾರಿಕತೆ ...ಮತ್ತು ಬಂಡವಾಳಶಾಹಿ ವ್ಯವಸ್ಥೆಯ ...ದರ್ಶಸಾಧಕ ಒಪ್ಪಿಕೊಳ್ಳುವಿಕೆಯನ್ನು ...ವಾಗಿ ತಿರಸ್ಕರಿಸಬೇಕು. ಇಂದಿನ ...ಸ್ತುಕಾರಿ ಪರಿಸ್ಥಿತಿಯಲ್ಲಿ ಬಂಡವಾಳ ...ಹಿಗಳಿಗೆ ಬದಲಿಯಾಗಿ ಸಮಾಜವಾದಿ ...ವನ್ನು ಪುನಸ್ಥಾಪಿಸುವ ಕ್ರಾಂತಿಕಾರಿ ...ಗಳನ್ನೆಲ್ಲಾ ಬಳಸಲಿಕ್ಕೆ ಇದು ಅಗತ್ಯ. ...ದು! ಇನ್ನೊಂದು ಜಗತ್ತು ಸಾಧ್ಯ ಮತ್ತು ... ಒಂದು ಸಮಾಜವಾದಿ ......"

'ಭಯೋತ್ಪಾದಕತೆಯ ವಿರುದ್ಧ ಯುದ್ಧ'ದ ಹೂರಣ ಏನು?

ಸೆಪ್ಟೆಂಬರ್ 11 ದುರಂತದ ಮೂರು ವರ್ಷಗಳ ನಂತರ ಒಂದು ವಿಷಯ ಸ್ಪಷ್ಟವಾಗಿದೆ - 'ಭಯೋತ್ಪಾದನೆ ವಿರುದ್ಧ ಯುದ್ಧ' ಎಂಬುದು ಸಾಮ್ರಾಜ್ಯಶಾಹಿಯ ವಿಶ್ವ ಅಧಿಪತ್ಯದ ಗುರಿಗೆ ರಾಜಕೀಯ-ಸೈದ್ಧಾಂತಿಕ ಮುಖವಾಡ ಅಂತ. ಆದರೆ ಭಯೋತ್ಪಾದನೆಯ ಸಮಸ್ಯೆ ನಿಜವಾದದ್ದು. ಅದು ಚಾರಿತ್ರಿಕವಾಗಿ ಕಾರ್ಮಿಕರ ಮತ್ತು ಜನತೆಯ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು. ಅದರ ವಿರುದ್ಧ ಸತತ ಹೋರಾಟ ಅಗತ್ಯ. ಆದರೆ ಅಮೆರಿಕ ಮತ್ತು ಅದರ ಸಹಚರರು ನಡೆಸುತ್ತಿರುವ 'ಭಯೋತ್ಪಾದನೆ ವಿರುದ್ಧ ಯುದ್ಧ' ಅದಕ್ಕೆ ಹಾಲೆರೆದು ಅದನ್ನು ಪೋಷಿಸುತ್ತಿದೆ. 'ಪ್ರಭುತ್ವದ ಭಯೋತ್ಪಾದನೆ' ಅವರು ಹೂಡುವ ತಂತ್ರ ಬೇರೇನನ್ನು ಸಾಧಿಸಲಾಗದು. ಭಯೋತ್ಪಾದನೆ ಕಡಿಮೆ ಮಾಡಲಾರದು. ನಾಶ ಗೊಳಿಸಲಾರದು. ಭಯೋತ್ಪಾದನೆಯ ಮೂರು ಬೇರುಗಳು - ಶೋಷಣೆ, ಬಡತನ, ಅಸಮಾನತೆ, ಅನ್ಯಾಯ, ರಾಷ್ಟ್ರೀಯತೆಯ ಲೂಟಿ ಮತ್ತು ನಾಶ, ಸಾಂಸ್ಕೃತಿಕ ಧಾರ್ಮಿಕ ದಬ್ಬಾಳಿಕೆ - ಇವು. ಅದನ್ನು ಕಿತ್ತೊಗೆಯದೆ ಭಯೋತ್ಪಾದನೆ ಹೋಗದು. ಆದರೆ ಅದರ ಬದಲು ಅಮೆರಿಕ ಮತ್ತು ಅದರ ಸಹವರ್ತಿಗಳು ಆ ಹೆಸರಲ್ಲಿ ಅಂತರ್‍ರಾಷ್ಟ್ರೀಯ ಕಾನೂನು ಉಲ್ಲಂಘಿಸುತ್ತಾರೆ. ಮೂಲಭೂತ ಹಕ್ಕು, ಸ್ವಾತಂತ್ರ್ಯದ ಮೇಲೆ ದಾಳಿ ಮಾಡುತ್ತಿದ್ದಾರೆ. ಜನಾಂಗವಾದ ಮತ್ತು ಯುದ್ಧ ಹೇರುತ್ತಿದ್ದಾರೆ..."

ಲೈವ್ ಬ್ಯಾಂಡ್ ಮತ್ತು ಬೆಂಗಳೂರಿನ ಯುವಜನರು

ಒಂದು ಚಿಂತನೆ

ಮಾದಕ ನಗೆಯೊಂದಿಗೆ ಅರೆನಗ್ನಾವಸ್ಥೆಯಲ್ಲಿ, ಪ್ರೇಕ್ಷಕರು ಕೋರಿದ ಸಿನಿಮಾ ಹಾಡುಗಳನ್ನು ಹಾಡುವ, ಯುವತಿಯ ಆಕರ್ಷಣೆಯೇ ಪ್ರಧಾನವಾದ ಮನೋರಂಜನೆ ಈ 'ಲೈವ್ ಬ್ಯಾಂಡ್'. ಇಲ್ಲಿಗೆ ಹಾಜರಾಗುವ ಪ್ರೇಕ್ಷಕರು ತಿನ್ನಲು, ಕುಡಿಯಲು ಒಂದಕ್ಕೆರಡರಷ್ಟು ಬೆಲೆ ತೆರಬೇಕು. ಹಾಡಿ ಕುಣಿಯುವ ಯುವತಿಗೆ ಟಿಪ್ಸ್ ಕೊಡಬೇಕು. ಬೆಂಗಳೂರು ನಗರವೊಂದರಲ್ಲೇ ಮಾನ್ಯತೆ ಪಡೆದಿರುವ ಲೈವ್‌ಬ್ಯಾಂಡ್‌ಗಳು 20 ರಷ್ಟಿದ್ದರೆ, ಕದ್ದು ಮುಚ್ಚಿ ನಡೆಸುವಂತಹವು 100ರಷ್ಟಿವೆ. ಮನೋರಂಜನೆಯ ಹೆಸರಿನಲ್ಲಿ ಲೈವ್‌ಬ್ಯಾಂಡ್‌ನ್ನು ಸಮರ್ಥಿಸಿ ಕೊಳ್ಳುವವರು ಇದರ ಹಿನ್ನೆಲೆಯಲ್ಲಿನ ದುಷ್ಪರಿಣಾಮಗಳ ಬಗ್ಗೆ ಚಿಂತಿಸುವ ಗೋಜಿಗೆ ಹೋಗುವುದಿಲ್ಲ.

ಇಲ್ಲಿ ಹಾಡಿ ನರ್ತಿಸುವ ಬಹುತೇಕ ಯುವತಿಯರು ಹೊರ ರಾಜ್ಯಗಳಿಂದ ಬಂದವರಾಗಿರುತ್ತಾರೆ. ಬೆರಳೆಣಿಕೆಯಷ್ಟು ಮಂದಿ ಹಾಡಿ ಕುಣಿದು



ಪ್ರಚಾರ ಗಿಟ್ಟಿಸಿ ಮಾಡೆಲಿಂಗ್ ಲೋಕಕ್ಕೋ ಸಿನಿಮಾ ಪ್ರಪಂಚಕ್ಕೋ ಪ್ರವೇಶ ಪಡೆಯುವ ಕನಸು ಹೊತ್ತಿದ್ದರೆ, ಬಹುಪಾಲು ಯುವತಿಯರ ಮಾದಕ ಕಂಗಳ, ನಗೆಯ ಹಿಂದೆ ಅವರ ಬಡ ತಂದೆ ತಾಯಿಯರನ್ನು, ತಮ್ಮ ತಂಗಿಯರನ್ನು ಸಾಕಿ ಸಲುಹುವ, ಓದಿಸಿ ಬೆಳೆಸುವ ಗುರುತರ ಜವಾಬ್ದಾರಿ ಮತ್ತು ತ್ಯಾಗದ ನೋವಿನ ಛಾಯೆಯೂ ಇರುತ್ತದೆ. ಈ ಲೋಕಕ್ಕೆ ಕಾಲಿಟ್ಟ ಮೇಲೆ ಅಲ್ಲಿನ ವ್ಯವಸ್ಥೆ ಇವರ ಮೇಲೆ ನಿಯಂತ್ರಣ ಸಾಧಿಸಿ ಕೊನೆಗೆ ವೇಶ್ಯಾವಾಟಿಕೆಗೆ ತಳ್ಳುತ್ತದೆ.

ಹೆಣ್ಣುಮಕ್ಕಳ ನೋವು ಸಂಕಟಗಳನ್ನು ತೆವಲಿನ ಮನೋರಂಜನೆಯ ದಾರಿಯನ್ನಾಗಿಸಿ, ಇದನ್ನು ಪೋಷಿಸುತ್ತಿರುವ ಪ್ರೇಕ್ಷಕ ವೃಂದದಲ್ಲಿ ಹೆಚ್ಚಿನ ಪಾಲು ಮಧ್ಯಮವರ್ಗದ ಯುವಕ ಯುವತಿಯರೇ ಆಗಿದ್ದು, ಹಲವು ಹತ್ತು ಸಾವಿರಗಳ ಸಂಬಳ ಪಡೆಯುವ ಸಾಫ್ಟ್‌ವೇರ್ ಇಂಜನಿಯರ್‌ಗಳು, ಹೊರಗುತ್ತಿಗೆ (ಬಿಪಿಒ) ಮತ್ತು ಸಾಫ್ಟ್‌ವೇರ್ ಪೂರಕ ಸೇವೆಗಳಲ್ಲಿ (ಐಟಿಇಎಸ್) ಕೆಲಸ ಮಾಡುವ ಯುವಜನರು, ಭ್ರಷ್ಟಾಚಾರದ ಅಂಗಿ ತೊಡುವ ಪುಡಾರಿ ರಾಜಕಾರಣಿಗಳು, ಉದ್ಯಮಿಗಳು, ಗುತ್ತಿಗೆದಾರರು, ಸರ್ಕಾರಿ ಅಧಿಕಾರಿಗಳು ಇದ್ದಾರೆ. ಮನೋರಂಜನೆಯೆಂದು ನೆಪವೊಡ್ಡುವ ಮಂದಿ, ಈ ಸ್ಥಳಗ[illegible] ಯುವತಿಯರನ್ನು ಸಂಪರ್ಕಿಸುವ ಕೇಂದ್ರಗಳ[illegible] ವೇಶ್ಯಾವಾಟಿಕೆಗೆ ಪ್ರವೇಶದ್ವಾರಗಳಾಗುತ್ತಿ[illegible] ವುದರ ಬಗ್ಗೆ ಮೌನ ವಹಿಸುತ್ತಾರೆ.

ಪೊಲೀಸರು 1998 ರಲ್ಲಿ ಲೈವ್ ಬ್ಯಾಂ[illegible] ತಾಣಗಳನ್ನು ನಿಷೇಧ ಮಾಡಿದ್ದರು. ಮತ್ತ[illegible] ವರ್ಷ ಏಕಪೀಠದ ನ್ಯಾಯಾಧೀಶ[illegible] ಲೈವ್‌ಬ್ಯಾಂಡ್ ಮಾಲೀಕರ ಸಮರ್ಥನ[illegible] ತಲೆದೂಗಿ ನಿಷೇಧವನ್ನು ತೆರವು ಮಾಡಿದ್ದ[illegible] ರಾಜ್ಯದ ಪೊಲೀಸರು ಲೈವ್‌ಬ್ಯಾಂ[illegible] ಗಳಿಂದಾಗುತ್ತಿರುವ ವಂಚನೆ, ಸುಲಿ[illegible] ಅತ್ಯಾಚಾರ ಎಲ್ಲ ದುಷ್ಪರಿಣಾಮಗಳ[illegible] ನ್ಯಾಯಾಲಯದ ಮುಂದೆ 1999 ರ[illegible] ಮಂಡಿಸಿದಾಗ ವಿಭಾಗೀಯ ಪೀಠ[illegible] ಮೇಲ್ಮನವಿಯನ್ನು ಪರಿಗಣಿಸಿ ಮತ್ತೆ ನಿಷೇಧ[illegible] ಆಣತಿ ನೀಡಿತು. ಲೈವ್‌ಬ್ಯಾಂಡ್ ಕೂಟ ಸು[illegible] ಕೋರ್ಟ್‌ನಲ್ಲಿ 1999 ರಲ್ಲಿ ರಾಜ್ಯ[illegible] ಹೈಕೋರ್ಟ್ ತೀರ್ಪಿನ ವಿರುದ್ಧ ಕಟ್ಲೆ ಹೂಡಿ[illegible] ಜಾಗತೀಕರಣದ ಗಾಳಿಯಲ್ಲಿ ಸೋಂಕು ಎಲ್ಲ[illegible] ತಗುಲುತ್ತಿರುವಾಗ ಸುಪ್ರೀಂಕೋರ್ಟ್ ನಿಷೇಧವನ್ನು ತೆರವು ಮಾಡಲು ರಾ[illegible] ಸರ್ಕಾರಕ್ಕೆ ಆಜ್ಞಾಪಿಸಿ 'ನಾಗರೀಕ[illegible] ಮನೋರಂಜನೆಯನ್ನು ಕಿತ್ತುಕೊಳ್ಳುವ ಹ[illegible] ಪೋಲಿಸರಿಗಿಲ್ಲ" ಎಂಬ ತೀರ್ಮಾನ ನೀಡ[illegible] ಇದರ ಅನಾಹುತ, ಅಪಾಯಗಳ ಹ[illegible] ಯಾರು ಹೊರುತ್ತಾರೆ?

- ಜಯ[illegible]

ವೈಜ್ಞಾನಿಕ ಜಾಥಾ: ಬೀದಿ ನಾಟಕ ಪ್ರದರ್ಶನ

ಇಂದಿನ ಆಧುನಿಕ ಯುಗದಲ್ಲಿ ಮೂಢನಂಬಿಕೆಗಳನ್ನು ಮೆಟ್ಟಿ, ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡಲ್ಲಿ ಮಾತ್ರ ನಾವು ಪ್ರಗತಿ ಹೊಂದಲು ಸಾಧ್ಯ ಎಂದು ಭಟ್ಕಳ ತಾಲೂಕಿನ ಶಿರಾ ಗ್ರಾ.ಪಂ.ಅಧ್ಯಕ್ಷ ಅಂತೋನಿ ಬಿ.ಡಿಕೋಸ್ತಾ ಹೇಳಿದರು.

ಅವರು ಶಿರಾಲಿಯ ಜನತಾ ವಿದ್ಯಾಲಯದಲ್ಲಿ ಶಿರಾಲಿಯ ನಾಗರಿಕರ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಕರಾವಳಿ ವಿಜ್ಞಾನ ಕಲಾ ಜಾಥಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮಗಳನ್ನು ಸ್ಥಳೀಯ ವೈದ್ಯ, ಸಾಹಿತಿ ಡಾ। ಆರ್.ವಿ.ಸರಾಫ್ ಉದ್ಘಾಟಿಸಿದರು. ಪವಾಡ ಬಯಲು ಕಾರ್ಯಕ್ರಮಗಳ ಮೂಲಕ ಜನತೆಯ ಮೂಢ ನಂಬಿಕೆಗಳನ್ನು ಹೋಗಲಾಡಿಸಬೇಕಾದುದು ಇಂದಿನ ಅಗತ್ಯವಾಗಿದೆ ಎಂದರು.

ತಾಲೂಕಾ ಕ.ಸಾ.ಪ. ಅಧ್ಯಕ್ಷ ಶಂಕರ ಕೆ.ನಾಯ್ಕ, ಗ್ರಾ.ಸೇ.ಸ.ಬ್ಯಾಂಕನ ಅಧ್ಯಕ್ಷ ಆರ್.ಕೆ.ನಾಯ್ಕ, ಕವಿ ವಿಡಂಬಾರಿ, ಕಲಾ ಜಾಥಾದ ಸಂಚಾಲಕ ವಿಠ್ಠಲ ಭಂಡಾರಿ, ಜನತಾ ವಿದ್ಯಾಲಯದ ಪ್ರಾಂಶುಪಾಲ ಅಮೃತ ರಾಮರಥ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕರಾವಳಿ ಕಲಾ ಜಾಥಾದ ಸಂಚಾಲಯ ವಿಠ್ಠಲ ಭಂಡಾರಿ ಪ್ರಾಸ್ತಾವಿಕವಾಗಿ ಮಾತನಾಡಿ, ನಾವು ಶಾಲೆಗಳಲ್ಲಿ ವಿಜ್ಞಾನ ಅಭ್ಯಾಸ ಮಾಡಿದರೂ ಮನೆಯಲ್ಲಿ ಹಳೆಯ ಕಂದಾಚಾರಗಳನ್ನೇ ಅನುಸರಿಸುತ್ತೇವೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡರೆ ಮಾತ್ರ ಈ ಮೌಢ್ಯಗಳಿಂದ ಹೊರಬರಲು ಸಾಧ್ಯ ಎಂದು ಹೇಳಿದರು.

ಕವಿ ವಿಡಂಬಾರಿಯವರು ವೈಜ್ಞಾನಿಕ ಜಾಗೃತಿಯನ್ನು ಕುರಿತ ತಮ್ಮ ಚುಟುಕುಗಳನ್ನು ವಾಚಿಸಿದರು. ಈ ಸಂದರ್ಭದಲ್ಲಿ ಕಲಾವಿದರು ನಿರ್ದೇಶಕ ಶ್ರೀಪಾದ ಭಟ್ ನೇತೃತ್ವದಲ್ಲಿ 'ಬಾಲ್ಯ ವಿವಾಹ', 'ಕೆರೆ ಉಳಿಸಿ', 'ನಮ್ಮ ಭೂಮಿ', ಬೀದಿ ನಾಟಕಗಳನ್ನು ಪ್ರದರ್ಶಿಸಿದರು.

ಪ್ರಾಂಶುಪಾಲ ಅಮೃತ ರಾಮರಥ ಸ್ವಾಗತಿಸಿದರು. ಶಿಕ್ಷಕ ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ಇಂಗ್ಲೀಷ್ ಉಪನ್ಯಾಸಕ ಗುನಗಾ ವಂದಿಸಿದರು. ಈ ಕಾರ್ಯಕ್ರಮವನ್ನು ಶಿಕ್ಷಕ ಸಂಘದ ಶ್ರೀಧರ ಶೇಟ್ ಮತ್ತು ಗ್ರಾ.ಪಂ.ಸದಸ್ಯ ಸುಭಾಸ್ ಕೊಪ್ಪಿಕರ್ ಸಂಘಟಿಸಿದ್ದರು.



ವಿಡಂಬಾರಿಯವರಿಗೆ ಆತ್ಮೀಯ ಸನ್ಮಾನ

ಚುಟುಕು ಕವಿ ವಿಡಂಬಾರಿಯವರು ಕೆಸರಿನಲ್ಲಿ ಹುಟ್ಟಿದ ಕಮಲದಂತೆ - ತಾವು ಅಪಾರ ನೋವು ಅಪಮಾನ, ಸಂಕಟ ಅನುಭವಿಸಿದರೂ ಜನತೆಗೆ ಸಾಹಿತ್ಯದ ಸುಗಂಧವನ್ನು ನೀಡಿ ಸಾಹಿತ್ಯ ಕ್ಷೇತ್ರದಲ್ಲಿ ಶಿರಾಲಿಯ ಹೆಸರನ್ನು ಬೆಳಗಿದವರು ಎಂದು ವೈದ್ಯ, ಸಾಹಿತಿ ಡಾ। ಆರ್.ವಿ.ಸರಾಫ್ ಶ್ಲಾಘಿಸಿದರು.



ಅವರು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಶಿರಾಲಿಯ ಜನತಾ ವಿದ್ಯಾಲಯದಲ್ಲಿ ವಿಡಂಬಾರಿಯವರ ಅಬಿಮಾನಿಗಳು ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ವಿಡಂಬಾರಿಯವರು ಚುಟುಕು ಬ್ರಹ್ಮ ದಿನಕರ ದೇಸಾಯಿಯವರಿಂದ ತೆರವಾದ ಸ್ಥಾನವನ್ನು ಸಮರ್ಥವಾಗಿ ತುಂಬಿದರು ಎಂದು ಅವರು ಶ್ಲಾಘಿಸಿದರು.

ಕರಾವಳಿ ವಿಜ್ಞಾನ ಕಲಾ ಜಾಥಾದ ಪುಸ್ತಕ ಪ್ರದರ್ಶನ ಕಾರ್ಯಕ್ರಮಕ್ಕಾಗಿ ಶಿರಾಲಿಗೆ ಆಗಮಿಸಿದ್ದ ವಿಡಂಬಾರಿಯವರನ್ನು ಅವರ ಅಭಿಮಾನಿಗಳು ಅನಿರೀಕ್ಷಿತವಾಗಿ ಸನ್ಮಾನಿಸಿದರು. ಅಭಿಮಾನಿ ಬಳಗದ ಶಿಕ್ಷಕ ಶ್ರೀಧರ ಜಿ.ಶೇಟ್, ಶಂಕರ ನಾಯ್ಕ, ಸುಭಾಸ್ ಕೊಪ್ಪಿಕರ್, ಡಾ। ಆರ್.ವಿ.ಸರಾಫ್, ಪ್ರಕಾಶ ಶೇಟ್, ಶಂಕರ ಜೋಗಿ ನಾಯ್ಕ, ಗ್ರಾಮ ಪಂಚಾಯತ ಅಧ್ಯಕ್ಷರಾದ ಎ.ಡಿ. ಡಿಕೋಸ್ತಾ, ಗ್ರಾ.ವ್ಯ.ಸೇ.ಸ.ಬ್ಯಾಂಕನ ಅಧ್ಯಕ್ಷ ಆರ್.ಕೆ.ನಾಯ್ಕ, ಪ್ರಾಂಶುಪಾಲ ಅಮೃತ ರಾಮನಾಥ ಉಪಸ್ಥಿತರಿದ್ದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕವಿ ವಿಡಂಬಾರಿ ತೀರಾ ಭಾವುಕರಾದರು. 19 ವರುಷಗಳ ಕಾಲ ಶಿರಾಲಿಯ ಅಂಚೆ ಕಛೇರಿಯಲ್ಲಿದ್ದಾಗ ಸಹಕರಿಸಿದ, ಸಲುಹಿದ ಎಲ್ಲ ಆತ್ಮೀಯರನ್ನು ನೆನಪಿಸಿಕೊಂಡರು. ಇಡಗುಂಜಿಯಲ್ಲಿ ಹುಟ್ಟಿ, ಶಿರಾಲಿಯಲ್ಲಿ ಬೆಳೆದು ಈಗ ಶಿರಸಿಯಲ್ಲಿರುವ ವಿಡಂಬಾರಿಯವರು 'ಹುಟ್ಟೂರು ಮರೆತರೂ ಕೊಟ್ಟೂರು ನನ್ನ ಮರೆಯಲಿಲ್ಲ' ಎಂದು ಗದ್ಗದಿತರಾಗಿ ನುಡಿದರು. ಈ ಸಂದರ್ಭದಲ್ಲಿ ತಮ್ಮ ಹಲವು ಚುಟುಕುಗಳನ್ನು ವಾಚಿಸಿದರು.

ಪ್ರಾಂಶುಪಾಲ ಅಮೃತ ರಾಮರಥ ಸ್ವಾಗತಿಸಿದರು. ಗ್ರಾಮ ಪಂಚಾಯತ ಅಧ್ಯಕ್ಷ ಎ.ಬಿ.ಡಿಕೋಸ್ತಾ ವಿಡಂಬಾರಿಯವರನ್ನು ಶಾಲು ಹೊದಿಸಿ, ಕಾಣಿಕೆ ನೀಡಿ ಸನ್ಮಾನಿಸಿದರು. ಶಿಕ್ಷಕರಾದ ಎಂ.ಐ. ನ[illegible] ನಿರೂಪಿಸಿದರು. ಉಪನ್ಯಾಸಕ[illegible] ಗುನಗಾರವರು ವಂದಿಸಿದರು.

ಸೋತವನ ಹರಕೆ

ನೂರಾರು ಚೇಳುಗಳು ಸೇರೊಮ್ಮೆ ಕಡಿದಂತೆ
ಕ್ರೂರ ರಣಹದ್ದುಗಳು ಮೇಲೇರಿ ಕೊಕ್ಕಿನೊಳು
ನರನಾಡಿ ಹರಿದಂತೆ ಕರುಳ ಕುಡಿ ಕಳಕೊಂಡ
ಎದೆಯುರಿಯ ತಣಿಸಲಿಕೆ ಯಾರು ಹಣಿಗಿದರೂನು
ನೀರೊಳದ ಹೋಮ ಈಟಿಯೊಳು ಪ್ರದಯಮನು
ಮೀಟಿ ಮೀಟಿರಿದಂತೆ ಛಾಟಿಯೊಳು ರಭಸದಲಿ
ಚಟಾಚಟಾ ಬಡಿದಂತೆ ಯಾತನೆಯ ತರದಿರದು
ಸುತನಳಿದ ನೋವು ಕೋಟಿಪತಿ ತನಗಿನ್ನೂ
ಸಾಟಿಯಾರುಂಟೆಂದು ಅಟ್ಟುವೆನು ಬರಲಿರುವ
ಕಷ್ಟಗಳ ಎಂಬವನೆ ಕಾಲು
ಮೂಟೆ ಕಟ್ಟಿಟ್ಟಂಥಹಾ ನೋಟುಗಳು ನಿನ್ನನ್ನು
ದಾಟಿಸುವೊ ಕೊನೆಗೆ
ಮಿತ್ರ ಶೋಕದಿ ನೊಂದು ಸತಿಪತಿಗಳೀರ್ವರೂ
ತತ್ತರಿಸುತಿರುವಾಗ ಕೀಟ ಸತ್ತಂತೆಂದು ಮೂತಿಯನು
ಮುರಿದಿರುವ
ಕಠೋರ ದಾನಗಳಿಗೆ ಈ ತೆರದ ನೋವೊಂದು
ಮೀಟದಿರಲೆಂಬುದೇ ಸೋತವನ ಹರಕೆ

- ವಿಡಂ[illegible]

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH